
# ರೈತ ಜಾನಪದ



ಸಂಪಾದಕ:

ಡಾ. ಮೃತ್ಯುಂಜಯ ಹೊರಕೇರಿ

ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಬೆಂಗಳೂರು

# ರೈತ ಜಾನಪದ

ಸಂಪಾದಕ:

ಡಾ. ಮೃತ್ಯುಂಜಯ ಹೊರಕೇರಿ

ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಬೆಂಗಳೂರು

"RAITHA JANAPADA" Edited by Dr.Mruthyunjaya Horakeri, Pub.by M.S.Siddegowda, Registrar, Karnataka Janapada and Yakshagana Academy, Nrupatunga Road, Bangalore - 560 001

Pages 65 + xii Price Rs. 20/-

First Impression : 1998

C Janapada & Yakshagana Academy

ಬೆಲೆ : ರೂ. 20/-

ಪ್ರಕಾಶಕರು :
ಎಂ.ಎಸ್.ಸಿದ್ದೇಗೌಡ
ರಿಜಿಸ್ಟ್ರಾರ್: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೧

ಮುದ್ರಣ ಮತ್ತು ಛಾಯಾಕ್ಷರ ಜೋಡಣೆ :

ಪ್ರಗತಿ ಗ್ರಾಫಿಕ್ಸ್, 119, 3ನೇ ತಿರುವು,
ಆರ್.ಪಿ.ಸಿ. ಬಡಾವಣೆ, ಬೆಂಗಳೂರು - 40
ದೂರವಾಣಿ :3409512

# ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ನಿರ್ದಿಷ್ಟ ವಿಷಯಗಳನ್ನು ಕುರಿತ ತಜ್ಞರಿಂದ ಪುಸ್ತಕಗಳನ್ನು ಬರೆಸುವುದು ಮಾತ್ರವಲ್ಲದೆ, ಜಾನಪದದ ವಿವಿಧ ಆವಿಷ್ಕಾರಗಳನ್ನು ಕುರಿತು ನಾಡಿನಾದ್ಯಂತ ವಿಚಾರ ಸಂಕಿರಣಗಳನ್ನು ನಡಸುತ್ತಿದೆ. ಹೀಗೆ ಮಾಡುವಾಗ ಸಾಧ್ಯವಾದಷ್ಟೂ ವಿಷಯಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ ಜಾನಪದದ ಹೊಸ ಹೊಸ ಸಂಶೋಧನಾ ಸಾಧ್ಯತೆಗಳನ್ನು ತೆರೆಯುವ ಪ್ರಯತ್ನ ಮಾಡುತ್ತಿದ. ಈ ವಿಚಾರ ಸಂಕಿರಣಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಸಹ ಹೊರತರುತ್ತಿದೆ. ಇಂಥ ಒಂದು ವಿಚಾರ ಸಂಕಿರಣದ ನಡವಳಿಕೆಗಳನ್ನು ಬಿಂಬಿಸುವ ಕೃತಿ ಇದು.

ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸೊಂಡೂರಿನ ಸ್ನಾತಕೋತ್ತರ ಕೇಂದ್ರದ ಕನ್ನಡ ಅಧ್ಯಯನ ಸಂಸ್ಥೆಯ 10 ವರ್ಷಗಳ ನೆನಪಿನ ಸಮಾರಂಭದ ಸಂದರ್ಭದಲ್ಲಿ ಆ ಕೇಂದ್ರದಲ್ಲಿ "ರೈತ : ಒಂದು ಜಾನಪದೀಯ ಅಧ್ಯಯನ" ಎಂಬ ವಿಚಾರ ಸಂಕಿರಣವನ್ನು ನಮ್ಮ ಅಕಾಡೆಮಿಯ ನೆರವಿನಿಂದ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಮಂಡಿತವಾಗಿ ವಿಶೇಷ ಚರ್ಚೆ ಮತ್ತು ಪ್ರಶಂಸೆಗೆ ಒಳಗಾದ ಪ್ರಬಂಧಗಳನ್ನು ಡಾ|| ಮೃತ್ಯುಂಜಯ ಹೊರಕೇರಿ, ಅವರು ಇಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ವ್ಯವಸಾಯ ಜಾನಪದ ಎಂಬ ವಿಷಯದ ಬಗ್ಗೆ ಈಗಾಗಲೇ ಪಿಎಚ್.ಡಿ., ಪ್ರಬಂಧಗಳು ಹಾಗೂ ಬಿಡಿ ಬಿಡಿ ಲೇಖನಗಳು ಅಲ್ಲಲ್ಲಿ ಪ್ರಕಟವಾಗಿವೆ. ಆದರೆ ವ್ಯವಸಾಯ ಎಂಬುದು ಅತ್ಯಂತ ವಿಸ್ತಾರವಾದ ಕ್ಷೇತ್ರವಾದದ್ದರಿಂದ ಹಾಗೂ ಅದರ ವಿಧಿ ವಿಧಾನಗಳು ಮತ್ತು ಅದಕ್ಕೆ ಸಂಬಂಧಿಸಿದ ಜಾನಪದೀಯ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುವುದು ತೀರ ಸಹಜ. ಕರ್ನಾಟಕದಂಥ ವಿಶಾಲ ಭೂ ಪ್ರದೇಶವುಳ್ಳ ನಾಡಿನಲ್ಲಿ ಜಾನಪದದ ದೃಷ್ಟಿಯಲ್ಲಿ ಮತ್ತು ಕ್ರಿಯೆಯಲ್ಲಿ ಈ ಬೇಸಾಯಕ್ಕೆ ಸಂಬಂಧಿಸಿದ ತಾಂತ್ರಿಕ ಹಾಗೂ ನಂಬುಗೆಯ ಸಂಗತಿಗಳೂ ಭಿನ್ನವಾಗಿಯೇ ಇರುತ್ತವೆ. ಈ ದೃಷ್ಟಿಯಿಂದ ಒಂದೇ ವಿಷಯದ ಬಗೆಗೆ ಪ್ರಾದೇಶಿಕವಾದ ಸೂಕ್ಷ್ಮ ಅಧ್ಯಯನಗಳನ್ನು ನಡೆಸುವುದೂ ಅತ್ಯಂತ ಅಗತ್ಯವಾಗಿದೆ. ವ್ಯವಸಾಯಕ್ಕೆ ಸಂಬಂಧಿಸಿದ ಜಾನಪದವನ್ನು ವೃತ್ತಿ ಮೂಲ ನೆಲೆಯಲ್ಲಿ ಅಭ್ಯಸಿಸುವುದು ಒಂದು

ವಿಧಾನವಾದರೆ, ವ್ಯವಸಾಯದ ಪ್ರಮುಖ ಕೇಂದ್ರಬಿಂದುವಾದ ರೈತನನ್ನೇ ಮುಖ್ಯವಾಗಿಟ್ಟುಕೊಂಡು ಅಭ್ಯಸಿಸುವುದು ಮತ್ತೊಂದು ವಿಧಾನ. ಆದ್ದರಿಂದ ಈ ಪ್ರಬಂಧದಲ್ಲಿ ರೈತನನ್ನೇ ಕೇಂದ್ರವಾಗಿಸಿಕೊಂಡು ಭೂಮಿ, ಮಳೆ, ದನಕರುಗಳು, ವ್ಯವಸಾಯದ ಸಾಧನ ಸಾಮಗ್ರಿಗಳು ಮತ್ತು ಸುಗ್ಗಿಯ ಸಂಪ್ರದಾಯಗಳು - ಇವುಗಳಿಗೂ ರೈತನಿಗೂ ಇರುವ ಸಂಬಂಧಗಳ ಸ್ವರೂಪಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿರುವ ಐದೂ ಪ್ರಬಂಧಗಳು ರೈತ ಮೂಲ ವ್ಯವಸಾಯದ ವಿವರಗಳನ್ನು ಅತ್ಯಂತ ಸ್ವಾರಸ್ಯವಾಗಿ ಕ್ಷೇತ್ರಾಧಾರಿತ ಮಾಹಿತಿಗಳ ಆಧಾರದ ಮೇಲೆ ಚರ್ಚಿಸುತ್ತವೆ. ಈ ಚರ್ಚೆ ಸಂಕ್ಷಿಪ್ತವಾಗಿದ್ದರೂ ಹಲವು ಮುಖ್ಯ ಅಂಶಗಳನ್ನು ಮೊದಲ ಬಾರಿಗೆ ಎತ್ತಿ ಹಿಡಿದಿವೆ. ಹೀಗಾಗಿ ಜಾನಪದ ಅಧ್ಯಯನ ಮಾಡುವ ಆಸಕ್ತರಿಗೆ ಹಾಗೂ ಸಂಶೋಧನೆಯ ವಿವಿಧ ನೆಲೆಗಳನ್ನು ಹುಡುಕುವ ಕ್ಷೇತ್ರ ಕಾರ್ಯಕರ್ತರಿಗೆ ತೋರ್ಬೆರಳಾಗುವ ಅಂಶಗಳು ಇಲ್ಲಿ ಪ್ರತಿಪಾದಿತವಾಗಿವೆ. ಸೀಮಿತ ನೆಲೆಯಲ್ಲಿಯಾದರೂ ಈ ಕೃತಿ ಒಂದು ಹೊಸ ಅರಿವನ್ನು ಉಂಟು ಮಾಡುತ್ತದೆ ಎಂಬ ಭರವಸೆ ನನಗಿದೆ. ಇಂಥದೊಂದು ವಿಚಾರ ಸಂಕಿರಣವನ್ನು ಸಂಘಟಿಸಿದ ಡಾ|| ಮೃತ್ಯುಂಜಯ ಹೊರಕೇರಿಯವರಿಗೆ ಮತ್ತು ಅವರ ಸಹೋದ್ಯೋಗಿ ಮಿತ್ರರಿಗೆ, ಅಧ್ಯಯನಪೂರ್ಣ ಪ್ರಬಂಧಗಳನ್ನು ಒದಗಿಸಿರುವ ವಿದ್ವಾಂಸರಿಗೆ ಮತ್ತು ಇವುಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಪ್ರಗತಿ ಗ್ರಾಫಿಕ್ಸ್ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ಅಕಾಡೆಮಿ ಪರವಾಗಿ ಹಾರ್ದಿಕ ಕೃತಜ್ಞತೆಗಳು.

ದಿನಾಂಕ : 12.2.1998.
ಸ್ಥಳ : ಬೆಂಗಳೂರು

(ಡಾ|| ಎಚ್.ಜೆ.ಲಕ್ಕಪ್ಪಗೌಡ)
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಕೃತಜ್ಞತೆಗಳು

ಗುಲಬರ್ಗಾ ವಿಶ್ವವಿದ್ಯಾಲಯದ ಸೊಂಡೂರಿನ ಸ್ನಾತಕೋತ್ತರ ಕೇಂದ್ರದ ಕನ್ನಡ ಅಧ್ಯಯನ ಸಂಸ್ಥೆಯ ದಶಮಾನೋತ್ಸವ ವರ್ಷಾಚರಣೆ ಸಂದರ್ಭದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರ ನೆರವಿನೊಂದಿಗೆ "ರೈತ ಜಾನಪದೀಯ ಅಧ್ಯಯನ" ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಮಂಡಿತವಾದ ಪ್ರಬಂಧಗಳನ್ನು ಇದೀಗ ಅಕಾಡೆಮಿಯು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದು ಒಂದು ಉತ್ತಮ ಕಾರ್ಯವಾಗಿದೆ.

ನಮ್ಮ ದೇಶ ಕೃಷಿ ಪ್ರಧಾನವಾದದ್ದು; ಕೃಷಿಕರೇ ಈ ದೇಶದ ಬೆನ್ನೆಲುಬು. ಶತಶತಮಾನಗಳ ಹಿಂದಿನಿಂದಲೂ ಜೀವನಾಧಾರವಾಗಿ ನಡೆದುಕೊಂಡು ಬಂದಿರುವ ಈ ಕೃಷಿ ಇಂದು ವೈಜ್ಞಾನಿಕ ಸವಲತ್ತುಗಳಿಂದ ಮುಂದುವರೆದಿದೆ. ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಈ ಬೆಳವಣಿಗೆ ಅತ್ಯಗತ್ಯವಾಗಿದೆ. ಆದರೆ ಅದೇ ಕಾಲಕ್ಕೆ ನಮ್ಮ ರೈತನೂ ಬದಲಾಗುತ್ತಿದ್ದಾನೆ. ಹಳೆಯ ಕೃಷಿ ಪದ್ಧತಿಗಳು, ನಂಬಿಕೆಗಳು, ಆಚರಣೆಗಳು, ಸಾಧನಗಳು ಎಲ್ಲಕ್ಕೂ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ ಸಾಹಿತ್ಯ ಮಾಯವಾಗುತ್ತಿದೆ. ಸುಗ್ಗಿಯ ಕಾಲಕ್ಕೆ ಹಂತಿ ಕಟ್ಟಿ ಹಾಡು ಹಾಡುತ್ತ ಇಡೀ ರಾತ್ರಿ ಉತ್ಸಾಹದಿಂದ ಕಾಲ ಕಳೆಯುತ್ತಿದ್ದ ರೈತ ಇಂದು ತೆನೆಗಳನ್ನು ಟಾರುರಸ್ತೆಗೆ ಹಾಕಿ ವಾಹನಗಳ ಗಾಲಿ ಹಾಯುವುದನ್ನೇ ಕಾಯುತ್ತ ಧೂಳು ಕುಡಿಯುತ್ತ ಒಮ್ಮೊಮ್ಮೆ ಅಪಘಾತಗಳಿಗೂ ಬಲಿಯಾಗುತ್ತ ವಿನಾಶದ ಅಂಚಿಗೆ ಬಂದಿದ್ದಾನೆ. ಶ್ರೀಮಂತ ರೈತರಂತೂ ಯಂತ್ರಗಳಿಂದ ರಾಶಿ ಮಾಡುತ್ತಿದ್ದಾರೆ. ರಾಶಿಯ ನಂತರ ಬಡ-ಬಗ್ಗರಿಗೆ ದಾನ ಮಾಡುವುದು, ಆಯಗಾರರಿಗೆ ಸಂದಾಯ ಮಾಡುವುದು ಹೋಗಿಬಿಟ್ಟಿದೆ. ಕೋಟಿ ವಿದ್ಯೆಗಿಂತಲೂ ಮೇಟಿ ವಿದ್ಯೆ ಮಿಗಿಲಾದದ್ದು-ಎಂಬ ಮಾತು ಆಚರಣೆ ಅನುಭವಗಳಿಂದ ಅಭಿವ್ಯಕ್ತಗೊಂಡಿರುವಂಥದ್ದು. ಈಗ ಮೂಲ ಮೇಟಿಯೇ ಮಾಯವಾಗುವ ಸ್ಥಿತಿಗೆ ಬಂದಿದೆ. ಆದುದರಿಂದ ಅಳಿದು ಉಳಿದ ವಯೋವೃದ್ಧರಿಂದ ನಮ್ಮ ಹಿಂದಿನ ರೈತಾಪಿ ಜೀವನವನ್ನು ದಾಖಲಿಸಬೇಕಾದುದು ಅಗತ್ಯವಾಗಿದೆ. ಆ ನಿಟ್ಟಿನಲ್ಲಿ ನಡೆದ ಈ ವಿಚಾರ ಸಂಕಿರಣ ಅರ್ಥಪೂರ್ಣವಾದುದಾಗಿತ್ತು.

ಈ ಕಾರ್ಯಕ್ರಮದಲ್ಲಿ ಒಟ್ಟು ಎರಡು ಗೋಷ್ಠಿಗಳಲ್ಲಿ ಆರು ಪ್ರಬಂಧಗಳು ಮಂಡಿತವಾಗಿವೆ. ವಿದ್ವಾಂಸರು ಎಷ್ಟೋ ಮಹತ್ವದ ವಿಚಾರಗಳನ್ನು ಹೇಳಿದ್ದಾರೆ. ರೈತ ಮತ್ತು ಆತನ ಪರಿಸರವನ್ನು ಕುರಿತು ತಿಳಿದುಕೊಳ್ಳಬಯಸುವವರಿಗೆ ಹಾಗೂ ಮುಂದಿನ ಅಧ್ಯಯನಕ್ಕೆ ಇಲ್ಲಿರುವ ಪ್ರಬಂಧಗಳು ಮೊದಲ ಮಾರ್ಗದರ್ಶಿಯಾಗಬಲ್ಲವೆಂದು ಹೇಳಬಹುದು. ಇಂಥ ಒಂದು ವಿಚಾರ ಸಂಕಿರಣಕ್ಕೆ ಅನುವು ಮಾಡಿಕೊಟ್ಟು ಅದರಲ್ಲಿ ಸ್ವತಃ ಪಾಲುಗೊಂಡ ಅಕಾಡಮಿಯ ಅಧ್ಯಕ್ಷ ಡಾ:ಎಚ್.ಜೆ.ಲಕ್ಕಪ್ಪಗೌಡರಿಗೆ ಕನ್ನಡ ಅಧ್ಯಯನ ಸಂಸ್ಥೆಯ ಪರವಾಗಿ ಕೃತಜ್ಞತೆ ಸಲ್ಲಿಸುವೆನು. ಈ ವಿಚಾರ ಸಂಕಿರಣದಲ್ಲಿ ಪಾಲುಗೊಂಡ ವಿದ್ವಾಂಸರಿಗೆ, ಚರ್ಚೆಯಲ್ಲಿ ಭಾಗಿಯಾದ ಆಸಕ್ತರಿಗೆ, ವಿಶೇಷವಾಗಿ ನಮ್ಮ ಕೇಂದ್ರದ ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ನನ್ನ ಕೃತಜ್ಞತೆಗಳು. ಇದಕ್ಕಾಗಿ ಶ್ರಮಿಸಿದ ಅಧ್ಯಯನ ಸಂಸ್ಥೆಯ ನನ್ನ ಸಹೋದ್ಯೋಗಿಗಳನ್ನು ನೆನೆಯುತ್ತೇನೆ.

ದಿನಾಂಕ :20-11-1996. (ಡಾ: ಮೃತ್ಯುಂಜಯ ಹೊರಕೇರಿ)

# ಪರಿವಿಡಿ


| | | | |
|---|---|---|---|
| | ಮುನ್ನುಡಿ | : ಅಕಾಡೆಮಿ ಅಧ್ಯಕ್ಷರಿಂದ. | |
| | ಕೃತಜ್ಞತೆಗಳು | : | |
| 1. | ರೈತ ಮತ್ತು ಭೂಮಿ | : ಡಾ: ಶಾಂತಿನಾಥ ದಿಬ್ಬದ. | 01 |
| 2. | ರೈತ ಮತ್ತು ಮಳೆ | : ಡಾ: ಎಸ್.ಪಿ. ಪದ್ಮಪ್ರಸಾದ್. | 15 |
| 3. | ರೈತನ ಸಾಧನ ಸಾಮಗ್ರಿಗಳು | : ಡಾ: ಎಂ.ಜಿ.ಈಶ್ವರಪ್ಪ. | 29 |
| 4. | ರೈತನ ಸುಗ್ಗಿ ಸಂಪ್ರದಾಯ | : ಡಾ: ವೀರಣ್ಣ ದಂಡೆ. | 47 |
| 5. | ರೈತನ ದನ-ಕರುಗಳು | : ಡಾ: ಕೆ.ಆರ್.ದುರ್ಗಾದಾಸ್. | 59 |

# ರೈತ ಮತ್ತು ಭೂಮಿ

ಡಾ: ಶಾಂತಿನಾಥ ದಿಬ್ಬದ.

ರೈತ ಮತ್ತು ಭೂಮಿಯ ನಡುವಿನ ಸಂಬಂಧವನ್ನು ಗುರುತಿಸ ಹೊರಡುವುದು ಮೇಲುನೋಟಕ್ಕೆ ಒಂದು ಬಗೆಯ ಅಸಹಜತೆಯ ಅಥವಾ ವಿರೋಧಾಭಾಸದ ಹಾಗೆ ಕಾಣಬಹುದು. ಆದರೂ ರೈತರ ಜೀವನವಿಧಾನದಲ್ಲಿ ಹಾಗೂ ತನ್ನ ಎಲ್ಲ ಪರಿಕರಗಳ ಬಗ್ಗೆ ಆತ ಇರಿಸಿಕೊಂಡಿದ್ದ ನಂಬಿಕೆ-ನಿಷ್ಠೆಗಳಲ್ಲಿ ಇತ್ತೀಚೆಗೆ ಸಾಕಷ್ಟು ವ್ಯತ್ಯಾಸಗಳು ತಲೆದೋರಿರುವುದರಿಂದ ಹಿಂದಿನ ರೈತ ಭೂಮಿಯ ಬಗ್ಗೆ ಇರಿಸಿಕೊಂಡಿದ್ದ ಜಾನಪದ ತಿಳುವಳಿಕೆಗಳನ್ನು ಗುರುತಿಸಿ ದಾಖಲಿಸುವುದು ಅಗತ್ಯವೆನ್ನಿಸುತ್ತದೆ.

ರೈತ ಮತ್ತು ಭೂಮಿಗಳ ನಡುವಿನ ಸಂಬಂಧ ಅವಿನಾಭಾವಿಯಾದದ್ದು. ರೈತನನ್ನು ಬಿಟ್ಟರೆ ಭೂಮಿಯಿಲ್ಲ. ಭೂಮಿಯನ್ನು ಬಿಟ್ಟರೆ ರೈತನಿಲ್ಲ. ಭಾರತೀಯ ಸಂಪ್ರದಾಯದಲ್ಲಿ ಭೂಮಿಯನ್ನು 'ಮಾತೃ' ಸ್ವರೂಪದಲ್ಲಿ ಕಾಣಲಾಗಿದೆ. ದೇವಿಯ ಸ್ವರೂಪದಲ್ಲಿ ಗೌರವಿಸಲಾಗಿದೆ. ಹಾಗೆ ನೋಡಿದರೆ ಭಾರತದಲ್ಲಿ ಅಸಂಖ್ಯ ದೇವತೆಗಳಿದ್ದಾರೆ. ಅವರ ನಡುವೆ ಭೂದೇವಿಯ ಸ್ಥಾನ ವಿಶಿಷ್ಟವಾದದ್ದು. ಉಳಿದ ಸಾವಿರಾರು ದೇವತೆಗಳು ನಂಬಿದ ಭಕ್ತರಿಗೆ ವರಪ್ರಸಾದ ಕೊಡುವರೋ ಇಲ್ಲವೋ ಗೊತ್ತಿಲ್ಲ. ಆದರೆ ಭೂದೇವಿ ಮಾತ್ರ ನಿಷ್ಠೆಯಿಂದ ದುಡಿದವರಿಗೆ ಯಾವಾಗಲೂ ಸುಖಸಮೃದ್ಧಿಗಳನ್ನು ನೀಡುತ್ತಾಳೆ. ಈ ಅರ್ಥದಲ್ಲಿ ನಿಜವಾಗಿ ವರಕೊಡಬಲ್ಲ ಪ್ರಪಂಚದ ಏಕೈಕ ಸತ್ಯದೇವತೆಯೆಂದರೆ ಭೂದೇವಿ ಮಾತ್ರ ಎಂದು ಹೇಳಬಹುದು.

ಭೂಮಿ ನಮಗೆಲ್ಲ ವಾಸಕ್ಕೆ ಆಶ್ರಯಕೊಟ್ಟಿರುವ ಭೌತಿಕ ನೆಲೆಗಟ್ಟು. ಹೀಗೆ

ಒಂದೆಡೆ ಮಾನವಕೋಟಿಯ ವಾಸಕ್ಕೆ ನೆಲೆ ನೀಡಿರುವ ಭೂಮಿಯು ಇನ್ನೊಂದೆಡೆ ತನ್ನನ್ನು ಸಕಾಲಕ್ಕೆ ಉತ್ತಿ-ಬಿತ್ತಿ-ಬೆಳೆಯುವವರಿಗೆ ದವಸ-ಧಾನ್ಯಗಳನ್ನು ಕೊಟ್ಟು ಕಾಪಾಡುವ ಅನ್ನಕ್ಕೆ ನೆಲೆಯಾಗಿದ್ದಾಳೆ. ಹೀಗಾಗಿಯೇ ಪ್ರಪಂಚದಲ್ಲಿ ಭೂಮಿಗೆ ಇಡೀ ಮಾನವಕೋಟಿಯ ಭಕ್ತಿ ಗೌರವಗಳು ಸಲ್ಲುತ್ತವೆ.

ಮನುಷ್ಯನ ಬೌದ್ಧಿಕ ವಿಕಸನವಾದಂತೆ ಆತ ಚಕ್ರವನ್ನು ಕಂಡುಕೊಂಡ. ಪ್ರಾಣಿ-ಪಕ್ಷಿಗಳನ್ನು ತನ್ನ ನೆರವಿಗಾಗಿ ದುಡಿಸಿಕೊಳ್ಳುವ ವಿಧಾನಗಳನ್ನು ಕಂಡುಕೊಂಡ. ಚಕ್ರ ಮತ್ತು ಪ್ರಾಣಿಗಳ ನೆರವಿನಿಂದ ಭೂಮಿಯನ್ನು ಉತ್ತಿ ಬಿತ್ತಿ ಬೆಳೆಯಲು ಕಲಿತ. ಹೀಗೆ ಜಗತ್ತಿನಲ್ಲಿ ಮಾನವನ ಬೌದ್ಧಿಕ ವಿಕಸನದ ಚರಿತ್ರೆಯೇ ಭೂಮಿಯ ಚರಿತ್ರೆ ಹಾಗೂ ಭೂಮಿಯ ಕುರಿತಾದ ನಮ್ಮ ಕಲ್ಪನೆಗಳ ಚರಿತ್ರೆಯಾಗಿದೆಯೆನ್ನಬಹುದು.

ರೈತ ಮತ್ತು ಭೂಮಿಗಳ ನಡುವಿನ ಸಂಬಂಧವನ್ನು ತಿಳಿಯುವ ಮೊದಲು ಭೂಮಿಯ ಸೃಷ್ಟಿಯ ಕುರಿತಾದ ಜಾನಪದ ಮತ್ತು ಪೌರಾಣಿಕ ನಂಬಿಕೆಗಳೇನೆಂಬುದನ್ನು ತಿಳಿದುಕೊಳ್ಳುವುದು ಸೂಕ್ತ. ನಮ್ಮ ಬಹುತೇಕ ಪುರಾಣಗಳು ಜಾನಪದ ನೆಲೆಗಟ್ಟನ್ನು ಹೊಂದಿವೆಯೆಂಬುದನ್ನು ರೈತನೂ ಈ ಜನಪದರಲ್ಲಿ ಒಬ್ಬ ವ್ಯಕ್ತಿಯೆಂಬುದನ್ನು ನಾವಿಲ್ಲಿ ಗಮನಿಸಬೇಕು.

ಜನಪದರ ಸೃಷ್ಟಿಪುರಾಣಗಳಲ್ಲಿ ಭೂಮಿಯ ಉತ್ಪತ್ತಿಯ ಕುರಿತಾದ ಅನೇಕ ವಿಚಾರಗಳು ಬರುತ್ತವೆ. ಅವುಗಳಲ್ಲಿ ಭೂಮಿಯು ತಾಯಿ ಎಂಬ ಕಲ್ಪನೆ ಹಾಗೂ ದೇವತೆ ಎಂಬ ಕಲ್ಪನೆ ಇವು ಪ್ರಮುಖವಾಗಿವೆ. ಆದಿಬಸವಣ್ಣನ ಕಥೆಯಲ್ಲಿ ಭೂಮಿಯ ಉಗಮದ ಕುರಿತಾದ ವಿವರಣೆ ಈ ಕೆಳಗಿನಂತೆ ಬರುತ್ತದೆ : "ತಾಯಿ ಉರಿಯಾದೇವಿ, ಮಗ ಉರಿಯಾದೇವ, ಏಳು ಸಮುದ್ರಗಳ ನಡುವೆ ಭೂಮಿಯನ್ನು ನಿರ್ಮಿಸುವಂತೆ - ತಾಯಿಯು ಮಗನಿಗೆ ಹೇಳುತ್ತಾಳೆ. ಅದರ ಪ್ರಕಾರ ಮಗ ಭೂಮಿಯನ್ನು ನಿರ್ಮಿಸಿ ಕೆರೆಕಟ್ಟೆಗಳನ್ನು ಕಟ್ಟುತ್ತಾನೆ. ಹುಲ್ಲು ಬೆಳೆಸುತ್ತಾನೆ. ಆ ಹುಲ್ಲು ಮೇಯಲು ಬಸವಣ್ಣ ಬೇಕಾಗುತ್ತಾನೆ. ಅದಕ್ಕಾಗಿ ತಾಯಿ-ಮಗ ಇಬ್ಬರೂ ತಮ್ಮ ಬೆವರಿನ ಮಣ್ಣಿನಿಂದ ಬಸವಣ್ಣನನ್ನು ನಿರ್ಮಿಸುತ್ತಾರೆ. ಮುಂದೆ ಬಸವಣ್ಣನೇ ತನ್ನ ಗಂಡನಾಗಬೇಕೆಂದು

ಭೂಮಿತಾಯಿ ಆಶಿಸುತ್ತಾಳೆ. ಆದರೆ ಬಸವಣ್ಣ ಅದಕ್ಕೊಪ್ಪುವುದಿಲ್ಲ. ತಾಯಿಯಾದ ಭೂಮಿಯನ್ನು ವರಿಸುವುದು ಹೇಗೆಂಬ ಅಳುಕು ಅವನದು. ಆದರೆ ಹೋದೆಡೆ ಎಲ್ಲ ಭೂಮಿ ಬೆಳೆಯುತ್ತ ಬಸವಣ್ಣನೇ ತನ್ನ ಗಂಡನಾಗಬೇಕೆಂದು ಹಲುಬುತ್ತಾಳೆ. ಕೊನೆಗೆ ಬಸವಣ್ಣ ಭೂಮಿಯನ್ನು ಆಳಬೇಕೆಂಬ ಊರಿಯಾದೇವಿಯ ಅಪ್ಪಣೆಯಂತೆ ಎಲ್ಲವೂ ಸಾಗುತ್ತದೆ."

ಈ ಕಥೆಯು ಒಕ್ಕಲುತನವನ್ನು ಮುಖ್ಯವನ್ನಾಗಿಸಿಕೊಂಡ ಮತ್ತು ಎತ್ತನ್ನು ದೇವರೆಂದು ಭಾವಿಸುವ ಜನಾಂಗದಲ್ಲಿ ಹುಟ್ಟಿಕೊಂಡಿರಬಹುದಾದ ಕಲ್ಪನೆಯಾಗಿದೆ. ಈ ಜಗತ್ತು ಮೊದಲು ಕೇವಲ ನೀರು ನೀರಾಗಿತ್ತು. ನೀರಿನ ನಡುವೆ ಭೂಮಿ ಹುಟ್ಟಿತ್ತು. ದೇವರಿಂದ ನಿರ್ಮಾಣಗೊಂಡ ಭೂಮಿಯಲ್ಲಿ ಮೊಟ್ಟಮೊದಲು ಮೂಡಿದವ ಬಸವಣ್ಣ ಎಂಬ ಕಲ್ಪನೆಗಳು ಈ ಕಥೆಯಲ್ಲಿವೆ.

ಅಂಬಿಗರಲ್ಲಿ ತಮ್ಮ ಜನಾಂಗದ ಮೂಲದ ಬಗ್ಗೆ ಇರುವ ಪುರಾಣಕಲ್ಪನೆಯಲ್ಲಿ ಭೂಮಿಯ ಸೃಷ್ಟಿಯ ಕುರಿತಾದ ಅವರ ತಿಳುವಳಿಕೆಯೂ ಅಡಕವಾಗಿದೆ:

"ಈ ಜಗತ್ತು ಮೊದಲು ನೀರೇ ನೀರಾಗಿತ್ತು. ಶಿವ ಮಾತ್ರ ಒಂದು ದೋಣಿಯಲ್ಲಿ ನೀರಿನ ಮೇಲೆ ತಿಗುತ್ತಿದ್ದ. ಕ್ರಮೇಣ ನೀರು ತನ್ನ ಸುತ್ತಲೂ ಹೆಪ್ಪುಗಟ್ಟಿ ಭೂಮಿಯಾಗುತ್ತ ಹೊರಟಿತು. ನೀರಿನಲ್ಲಿ ಅನಂತ ಜೀವಕೋಟಿಗಳ ಉಗಮವೂ ಆರಂಭವಾಯಿತು. ನೀರಿನಲ್ಲಿದ್ದ ಮಾನವರನ್ನು ಶಿವ ದೋಣಿಯಲ್ಲಿ ಹಾಕಿಕೊಂಡು ಹೆಪ್ಪುಗಟ್ಟಿದ ನೆಲದ ಮೇಲೆ ಬಿಡತೊಡಗಿದ. ಶಿವನೊಂದಿಗೆ ಇನ್ನಷ್ಟು ಜನರು ಅವನ ಕೆಲಸದಲ್ಲಿ ನೆರವಾದರು. ಅತ್ತ ನೆಲದ ಮೇಲೆ ಉಳಿದ ಜನರು ತಮಗೆ ಅನುಕೂಲವಾದ ಸ್ಥಳ ಹುಡುಕಿಕೊಂಡು ಜೀವಿಸತೊಡಗಿದರು. ಶಿವನೊಂದಿಗೆ ಕೆಲವು ಜನ ನೀರಿನ ದಡದಲ್ಲಿಯೇ ಉಳಿದು ದೋಣಿ ನಡೆಸುವ ಕೆಲಸದೊಂದಿಗೆ ಜಲಚರಗಳನ್ನೇ ತಮ್ಮ ಆಹಾರವನ್ನಾಗಿಸಿಕೊಂಡು ಬದುಕತೊಡಗಿದರು. ಅವರೇ ಮುಂದೆ ಅಂಬಿಗರಾದರು."

ಈ ಕಥೆಯಲ್ಲಿ ನೀರೇ ಹೆಪ್ಪುಗಟ್ಟಿ ಭೂಮಿಯಾಯಿತೆಂದೂ ಆ ಭೂಮಿ ಮುಂದೆ ಮಾನವ ಜನಾಂಗದ ಬದುಕಿಗೆ ನೆಲೆಯಾಯಿತೆಂದೂ ನಂಬಿರುವುದು ತಿಳಿಯುತ್ತದೆ.

ಆಕಾಶದ ಹೆಂಡತಿ ಭೂಮಿಯೆಂಬ 'ದ್ಯಾವಾಪೃಥಿವಿ'ಯ ಕಲ್ಪನೆಯೂ ಭಾರತದಲ್ಲಿ ಬಹುಕಾಲದಿಂದ ಇದೆ.

ಕಥಾಸರಿತ್ಸಾಗರದ ಕಥಾಪೀಠಲಂಬಕದ ಎರಡನೆಯ ತರಂಗದಲ್ಲಿ ಒಂದು ಕಥೆ ಹೀಗೆ ಬರುತ್ತದೆ : "ಬಹುದಿನಗಳ ಹಿಂದೆ ಪ್ರವಾಹಗಳ ಕೊನೆಯ ಕಾಲದಲ್ಲಿ ಭೂಮಿ ದ್ರವರೂಪದಲ್ಲಿತ್ತು. ಆಗ ಶಿವ ತನ್ನ ತೊಡೆಯನ್ನು ಕತ್ತರಿಸಿ ಒಂದು ಹನಿ ರಕ್ತವನ್ನು ಆ ನೀರಿಗೆ ಬೀಳಿಸಿದನು. ಅದೊಂದು ಮೊಟ್ಟೆಯ ಆಕಾರ ಪಡೆದುಕೊಂಡಿತು. ಶಿವ ಅದನ್ನು ಒಡೆದನು. ಅದರಿಂದ ಒಬ್ಬ ಪುರುಷ ಹೊರಬಂದನು. ಅವನಿಂದ ಪ್ರಪಂಚದ ಸೃಷ್ಟಿಯಾಗುವಂತೆ ಶಿವ ಪ್ರಕೃತಿಯನ್ನು ನಿರ್ಮಿಸಿದ. ಆ ಮೊಟ್ಟೆಯ ಒಡೆದ ಅರ್ಧದ ಚೂರು ಆಕಾಶವಾಯಿತು. ಉಳಿದರ್ಧದ ಚೂರು ಭೂಮಿಯಾಯಿತು."

ರಾಕ್ಷಸರ ಕೊಬ್ಬಿನಿಂದ ಭೂಮಿ ನಿರ್ಮಾಣವಾಗಿದೆಯೆಂಬುದನ್ನು ತಿಳಿಸುವ ಕಥೆಯೊಂದು ದೇವೀಭಾಗತದಲ್ಲಿ ಸಿಗುತ್ತದೆ.

ಭೂಮಿದೇವತೆಯು ಬ್ರಹ್ಮನ ಮಗಳೆಂದೂ; ಮಹಾವಿಷ್ಣು ಅವಳನ್ನು ಮದುವೆಯಾದನೆಂದೂ ದಾಕ್ಷಿಣಾತ್ಯ ಮಹಾಭಾರತದ ಒಂದು ಪಾಠವು ತಿಳಿಸುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ವಿಷ್ಣುವಿನ ಮನಸ್ಸಿನಿಂದ ಉದಿಸಿದ ಪಂಚಮಹಾಭೂತಗಳೆಲ್ಲ ಸೇರಿ ಮಹಾಪೃಥ್ವಿಯ ಉದಯವಾಯಿತೆಂದೂ ದೇವೀಭಾಗವತದ ನವಮಾಸ್ಕಂದವು ತಿಳಿಸುತ್ತದೆ.

ಆಕಾಶವು ತಂದೆ, ಭೂಮಿಯು ತಾಯಿ, ಇವರಿಬ್ಬರ ಸಂಯೋಗದಿಂದ ಮಾನವ ಹುಟ್ಟಿದನೆಂದು ಜೂನಿ ಇಂಡಿಯನ್ ಜನಾಂಗದಲ್ಲಿ ಪ್ರಚಲಿತವಿರುವ ಒಂದು ಕಥೆಯ ತಿಳಿಸುತ್ತದೆ.

ಅಮೇರಿಕನ್ ಇಂಡಿಯನ್ ಬುಡಕಟ್ಟುಗಳ ಪುರಾಣಗಳಲ್ಲಿ ಭೂಮಿಯನ್ನು

ಇಡೀ ಮಾನವತೆಯ ತಾಯಿಯ ರೂಪದಲ್ಲಿ ಕಾಣಲಾಗಿದೆ. ಅವರ ಮಾತು, ಪ್ರಾರ್ಥನೆ; ಮಂತ್ರಗಳಲ್ಲಿ 'ಭೂಮಿ ನಮ್ಮ ತಾಯಿ' ಎಂಬ ಸೂಚನೆ ಬರುತ್ತದೆಯೆಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಹೀಗೆ ಭೂಮಿಯ ಉಗಮ ಹಾಗೂ ಸ್ಥಾನಮಾನಗಳ ಬಗ್ಗೆ ಅನೇಕ ಜಾನಪದ ಹಾಗೂ ಪೌರಾಣಿಕ ನಂಬಿಕೆಗಳಿದ್ದು, ಈ ಎಲ್ಲ ಕಲ್ಪನೆಗಳಿಗಿಂತ ತೀವ್ರವಾದ ಹಾಗೂ ವಾಸ್ತವಿಕವಾದ ರೀತಿಯಲ್ಲಿ ರೈತ ಭೂಮಿಯೊಂದಿಗಿನ ತನ್ನ ಸಂಬಂಧವನ್ನು ಬೆಳೆಸಿಕೊಂಡು ಬಂದಿದ್ದಾನೆ. ತನ್ನನ್ನು ಮಣ್ಣಿನ ಮಗನೆಂದು ತಿಳಿದುಕೊಂಡಿರುವ ಆತ ಆ ಮಣ್ಣನ್ನು ನಿಜವಾದ ತಾಯಿಯೆಂದು ಭಾವಿಸಿದ್ದಾನೆ. ತಮ್ಮ ಜೀವನ್ಮರಣಗಳ ನಿರ್ಣಾಯಕ ಶಕ್ತಿ ಭೂದೇವಿ ಎಂಬ ಕಲ್ಪನೆ ರೈತ ಸಮುದಾಯದ್ದಾಗಿದೆ. ಭೂಮಿಯನ್ನು ಉತ್ಪಾದನೆ ಹಾಗೂ ಸಮೃದ್ಧಿಯ ದೇವತೆಯೆಂದು ರೈತ ನಂಬಿದ್ದಾನೆ. ಭೂಮಿ ಪಂಚಭೂತಗಳಲ್ಲಿ ಒಂದು, ಮಣ್ಣು ಜಡವಸ್ತುವಲ್ಲ, ಸಚೇತನ ವಸ್ತು, ಚೇತನಕ್ಕೆ ಚೇತನ ನೀಡುವ ವಸ್ತು ಎಂಬ ನಿಚ್ಚಳ ಕಲ್ಪನೆ ಅವನದಾಗಿದೆ.

ಮಣ್ಣನ್ನು ನಂಬಿ ಮಣ್ಣಿಂದ ಬದುಕೀನ
ಮಣ್ಣಿನಗೆ ಮುಂದೆ ಹೊನ್ನು । ಅಣ್ಣಯ್ಯ
ಮಣ್ಣೆ ಲೋಕದಲಿ ಬೆಲೆಯಾದ್ದು॥

– ಎಂದು ಹೇಳುವ ರೈತಮಹಿಳೆಯ ಮಾತಿನಲ್ಲಿ ರೈತನು ಭೂಮಿಯನ್ನು ನಂಬಿದ ಪರಿ ವ್ಯಕ್ತವಾಗುತ್ತದೆ.

ಭೂಮಿಯನ್ನು ಆದಿಶೇಷ ಹೊತ್ತಿದ್ದಾನೆ, ಭೂಮಿಯನ್ನು ದೇವತೆಗಳು ಎತ್ತಿ ಹಿಡಿದಿದ್ದಾರೆ, ವಿರೂಪಾಕ್ಷ ಎಂಬ ಆನೆಯು ಭೂಮಿಯನ್ನು ಎತ್ತಿ ಹಿಡಿದಿದೆ. ಆ ಭೂಮಿ ಭಾರವಾದಾಗ ಆದಿಶೇಷ, ದೇವತೆಗಳು ಹಾಗೂ ಆನೆಗಳು ತಮ್ಮ ತಲೆ ಅಲ್ಲಾಡಿಸುತ್ತವೆ. ಆಗ ಭೂಕಂಪವುಂಟಾಗುತ್ತದೆ ಎಂಬ ಇನ್ನೂ ಅನೇಕ ನಂಬಿಕೆಗಳು ಇವೆ. ಭೂಮಿದೇವಿ ಕ್ಷಮಾಗುಣದ ಪ್ರತೀಕವೆಂಬ ನಂಬಿಕೆಯೂ ನಮ್ಮಲ್ಲಿ ಪ್ರಚಲಿತವಿದೆ.

ಭೂಮಿಯ ಪ್ರಯೋಜನವನ್ನು ಬಿಂಬಿಸುವ ಇನ್ನೊಂದು ಜಾನಪದ ಕಥೆಯು ತುಂಬ ಆಕರ್ಷಕವಾಗಿದೆ.

"ಒಬ್ಬ ತಾಯಿ, ಅವಳಿಗೆ ಇಬ್ಬರು ಮಕ್ಕಳು; ಅವಳ ಪತಿ ತೀರಿದ್ದಾನೆ. ಮಕ್ಕಳ ದುಡಿಯಲಿಲ್ಲ ಆಲಸಿಗಳಾದರು. ತಾಯಿಯ ಉಪದೇಶ ಫಲಿಸಲಿಲ್ಲ. ಆಗ ಅವಳೊಂದು ಉಪಾಯ ಮಾಡಿದಳು. "ಹೊಲದಲ್ಲಿ ನಿಮ್ಮ ತಂದೆ ಎಲ್ಲೋ ಒಂದಿಷ್ಟು ನಿಧಿ ಹುಗಿದಿದ್ದು ನೆನಪಿದೆ. ಅದು ಎಲ್ಲಿದೆಯೆಂಬುದನ್ನು ಹುಡುಕಿ" ಎಂದಳು. ಅದನ್ನು ಕೇಳಿ ಆಸೆಗೆ ಬಿದ್ದ ಮಕ್ಕಳು ಭೂಮಿಯನ್ನು ಅಗೆಯತೊಡಗಿದರು. ನಿಧಿ ಸಿಗಲಿಲ್ಲ. ಎಲ್ಲ ಭೂಮಿಯನ್ನು ಅಗೆದದ್ದಾಯಿತು. ಅಷ್ಟರಲ್ಲಿ ಅಲ್ಲಿ ಒಬ್ಬ ದಾರಿಹೋಕ ಮುದುಕ ಬಂದು ಆತ ಭೂಮಿಯನ್ನು ಅಗೆಯುವ ಹುಡುಗರನ್ನು ನೋಡಿ, 'ಹೊಲವನ್ನು ಎಷ್ಟು ಚೆನ್ನಾಗಿ ಹರಗಿದ್ದೀರಲ್ಲ, ಅದರಲ್ಲಿ ಸ್ವಲ್ಪ ಕಾಳು ಹಾಕಿ, ಬಂಗಾರದ ಬೆಳೆ ಬರುತ್ತದೆ' ಎಂದ. ಯಾವುದೂ ತಿಳಿಯದೆ ಹುಡುಗರು ಮುದುಕ ಹೇಳಿದಂತೆ ಭೂಮಿಗೆ ಕಾಳು ಹಾಕಿದರು. ಕೆಲದಿನಗಳ ಬಳಿಕ ಬೆಳೆ ಬಂತು. ರಾಶಿ ಮಾಡಿದರು. ಆಗ ತಾಯಿ 'ಇದೇ ನೋಡಿ ನಿಮ್ಮಪ್ಪ ಹೊಲದಲ್ಲಿ ಹುಗಿದಿಟ್ಟ ನಿಧಿ' ಎಂದು ಮಕ್ಕಳಿಗೆ ಹೇಳಿದಳು. ತಮ್ಮನ್ನು ದುಡಿಯಲು ಹಚ್ಚಿದ ತಾಯಿಯ ಉಪಾಯವನ್ನು ಮಕ್ಕಳು ಅರ್ಥ ಮಾಡಿಕೊಂಡು ಅಂದಿನಿಂದ ನಿಷ್ಠೆಯಿಂದ ದುಡಿಯತೊಡಗಿದರು." ಈ ಸೊಗಸಾದ ಕಥೆಯಲ್ಲಿ ನಿಷ್ಠೆಯಿಂದ ದುಡಿದವರಿಗೆ ಭೂದೇವಿ ವರ ಕೊಟ್ಟೇ ಕೊಡುತ್ತಾಳೆ ಎಂಬ ಭೂಮಿಯ ಪ್ರಯೋಜನ ಹಾಗೂ ಮಹತ್ವಗಳು ತುಂಬಾ ಧ್ವನಿಪೂರ್ಣವಾಗಿ ವ್ಯಕ್ತವಾಗಿವೆ.

ರೈತ ಜನಾಂಗಗಳಲ್ಲಿ ಭೂಮಿಯ ಕುರಿತಾದ ಸಾಹಿತ್ಯ ಹೇರಳವಾಗಿದೆ. ಅವರು ಬೆಳಿಗ್ಗೆ ಎದ್ದ ತಕ್ಷಣ ಮೊದಲು ಸ್ಮರಿಸಿಕೊಳ್ಳುವುದು ಭೂಮಿತಾಯಿಯನ್ನು.

ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆವಂಥ । ಭೂಮಿತಾಯಿನ
ಎದ್ದೊಂದು ಗಳಿಗೆ ನೆನದೇನ॥

-ರೈತರ ಮಕ್ಕಳು ಹಗಲಿರುಳೆನ್ನದೆ, ಚಳಿ ಮಳೆಯೆನ್ನದೆ ಮಣ್ಣಿನಲ್ಲಿ ದುಡಿಯುವವರು. ಕೈಕೆಸರಾದರ ಬಾಯಿ ಮೊಸರೆಂಬುದು ಅವರ ಸಿದ್ಧಾಂತ.

ಹೂಡೋದು ಹೊಸ ಎತ್ತು ಹೂಡ್ಯಾನು ಹೊಸಮಗ
ಕೂಗು ಕೇಳಮ್ಮ ಭೂದೇವಿ! ನಿನಮಗ
ಸರಗು ಕಟ್ಟವನೆ ದುಡಿಯೋಕೆ||

- ಎಂಬಲ್ಲಿ ರೈತನ ತಾಯಿಯೊಬ್ಬಳು ತನ್ನ ಮಗ ಉತ್ಸಾಹದಿಂದ ದುಡಿಯುವ ಪರಿಯನ್ನು ಕಣ್ಣಾರೆ ಕಂಡು ಹಿಗ್ಗಿದ್ದಾಳೆ.

ರೈತರೊಂದಿಗೆ ರೈತಮಹಿಳೆಯರೂ ಭೂದೇವಿಯನ್ನು ಬಲವಾಗಿ ನಂಬಿರುತ್ತಾರೆ.

ಹೊಸಬಂಡಿ ಮೇಲೆ ಹಸುವಿನ ಗೊಬ್ರ ತಂದೆ
ಹಸಿರ ಭೂದೇವಿ ಹಾಕ್ತೇನೆ । ನನ್ನ ತಾಯವ್ವ
ಹಸಿದ ಕಂದವ್ನ ತಾಯವ್ವ ||

-ಎನ್ನುವ ಅವರು ದುಡಿಯುವ ತಮ್ಮ ಮಕ್ಕಳನ್ನು ಕಾಪಾಡುವಂತೆ ಭೂದೇವಿಯಲ್ಲಿ ಮೊರೆ ಹೋಗುತ್ತಾರೆ.

'ಉಳುವವನೇ ಭೂಮಿಯ ಒಡೆಯ' ಎಂಬ ಹೊಸ ಕಾಲದ ತಿಳುವಳಿಕೆಯನ್ನು ಪ್ರತಿನಿಧಿಸುವ ಪದ್ಯಗಳಲ್ಲೂ ಭೂಮಿಯ ಮಹತ್ವ ಹಾಗೂ ದುಡಿಯುವ ರೈತನ ಸಾರ್ಥಕತೆಗಳು ವ್ಯಕ್ತವಾಗಿವೆ.

ಕಂಚಿನ ಕಾಳೆ ಬಾಯಿ ಕೂಗು ಥರ್ಮಾಪ್‌ಗುಟ್ಟು
ಹಂಚ್ಕೊಂಡ್ ಬಾಳಿ ಭೂಮಿ ಹಕ್ಕು ಎಲ್ಲಾರ್‌ಗುಂಟು
ಉತ್ತಿ ಬಿತ್ತಿ ಬೆಳೆಯೋ ರೈತ ತಾಗಾಲಷ್ಟು
ಕೂತ್ಕೊಂಡ್ ಉಣ್ಣೊ ಗೆಣ್ಯಾಗ್ ಯಾಕ ಭೂಮಿಪಟ್ಟು?

ದುಡಿಯುವವನಿಗೆ ಮಾತ್ರ ಭೋಗಿಸುವ ಹಕ್ಕಿದೆಯೆಂಬ ವೈಜ್ಞಾನಿಕ ನಿಲುವು ಈ ಪದ್ಯದಲ್ಲಿ ಬಿಂಬಿತವಾಗಿದೆ.

ಹೀಗೆ ಭೂಮಿಯ ಕುರಿತಾದ ರೈತನ ಸಾಂಪ್ರದಾಯಿಕ ನಂಬಿಕೆಗಳಿಂದ ಮೊದಲುಗೊಂಡು ವೈಜ್ಞಾನಿಕ ನಂಬಿಕೆಯವರೆಗಿನ ಅನೇಕ ಪದ್ಯಗಳು ಜಾನಪದ ಸಾಹಿತ್ಯದಲ್ಲಿ ದೊರೆಯುತ್ತವೆ. ಮತ್ತೆ ಕೆಲವು ಉದಾಹರಣೆಗಳನ್ನಿಲ್ಲಿ ನೋಡಬಹುದು.

ಮಾರುದ್ದ ಪೈರಾಗಲಿ ಮೊಳದುದ್ದ ತೆನೆಯಾಗಲಿ
ಬಡವನ ಮನಿಗೆ ಸಿರಿಬರಲಿ । ಭೂಮಿತಾಯಿ
ಕಂದಯ್ನ ಹಸಿವು ಇಂಗೋಗ್ಲಿ ॥

ಹನ್ನೆರಡು ಎತ್ತಿನ ಬಾರಿ ಹೊನ್ನೆ ಗಂಬದ ಮೇಟಿ
ಚಿನ್ನದ ಕೊಂಬೀನ ಬಸವಣ್ಣ । ತುಳಿದಾವೊ
ಚೆನ್ನಿಗನಣ್ಣಯ್ನ ಕಳದಲ್ಲಿ ॥

ಭೂದೇವಿ ನೀಡವ್ವ ಭಾರಿ ಪೈರಾಗ್ಲವ್ವ
ಬಡವನ ಹರಕೆ ಕೇಳವ್ವ । ಭೂತಾಯಿ
ನಿನ್ಗೆ ಜೋಡ್ಕಾಯಿ ಹಣ್ಣು ಹೊಡಿಸೇನೂ ॥

ಇನ್ನು, ಭೂ ಸಂಬಂಧಿಯಾದ ಹಲವಾರು ಗಾದೆಮಾತುಗಳೂ ರೈತರಲ್ಲಿ ಪ್ರಚಲಿತವಿದ್ದು, ರೈತ ಭೂಮಿಯ ಬಗ್ಗೆ ಇರಿಸಿಕೊಂಡಿರುವ ತಿಳುವಳಿಕೆಯನ್ನು ಅವು ಸ್ಪಷ್ಟಪಡಿಸುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಲಾಗಿದೆ.

'ಆಕಾಶದ ಮಳೆ ಭೂಮಿಗೆ ಬೆಳೆ'
'ಗಡ್ಡೆಯಿಂದ ಹೊಲಹೀನ ಗೊಡ್ಡಿ ಹೆಂಡತಿ ಹೀನ'
'ಭರಣಿ ಮಳೆಯಿಂದ ಧರಣಿಗೆಲ್ಲ ಸುಖ'
'ಹದ ನೋಡಿ ಬಿತ್ತು ಬೆದಿ ನೋಡಿ ಬೆಳಿ'
'ಊರಾಗಿನ ಕೆಸರ ನೋಡಿ ಹೊಲಕ್ಹೋಗೂದ ಬಿಟ್ಟರಂತ'
' ಮಾತು ಮುಂದಾತು ಹೊಲಾ ಅಂಗಲಾತು'

'ಹೊಲ ಒತ್ತಿ ಹೊಡಿ ಮ್ಯಾರಿ ಹತ್ತಿ ಬಿತ್ತು'
'ಕರಿ ಹೊಲಾ ಕಸುವು ಕಡ್ಡದ ಹೊಲಾ ಗೊಡ್ಡು'

'ಕೃಷಿ ಕೆಡುಗುಪೇಕ್ಷೆಯಲ್ಲಿ' ಎಂಬುದು ವಿದುರ ನೀತಿಯ ಮಾತು. ಇಂಥ ಗಾದೆಯ ಮಾತುಗಳು ರೈತರನ್ನು ಕಾಲಕಾಲಕ್ಕೆ ಎಚ್ಚರಿಸುತ್ತ ಅವನಿಗೆ ಮಾರ್ಗದರ್ಶನ ಮಾಡುತ್ತವೆ. ಉದಾ - ಮಳೆಯಾದ ದಿನದಂದು ಊರಲ್ಲಿಯ ಕೆಸರನ್ನು ನೋಡಿ ಹೆದರಿ ಹೊಲಕ್ಕೆ ಹೋಗುವುದನ್ನು ಬಿಡಬಾರದು. ಏಕೆಂದರೆ ಸ್ವಲ್ಪ ಮಳೆಯಾಗಿದ್ದರೂ ಕೂಡ ಊರಲ್ಲಿ ಹೆಚ್ಚು ಮಳೆಯದಂತೆ ಭಾಸವಾಗುತ್ತದೆ. ಅದೇ ಮಳೆ ಹೊಲದಲ್ಲಿ ಅಲ್ಪ ಪ್ರಮಾಣದ್ದಾಗಿದ್ದು ರೈತನ ಕೆಲಸ ಕಾರ್ಯಗಳು ನಡೆಯಲು ಯಾವ ತೊಂದರೆಗಳೂ ಅಲ್ಲಿರುವುದಿಲ್ಲ. ಅಲ್ಲದೆ ರೈತರಾದವರು ಮಳೆ-ಚಳಿ-ಬಿಸಿಲುಗಳಿಗೆ ಹೆದರಬಾರದೆಂಬುದನ್ನೂ ಮೇಲಿನ 'ಊರಾಗಿನ ಕೆಸರ ನೋಡಿ ಹೊಲಕ್ಹೋಗೂದ ಬಿಟ್ಟರಂತ' ಎಂಬ ಗಾದೆ ಮಾತು ತಿಳಿಸುತ್ತದೆ. ಬಿತ್ತುವುದು ತುಂಬಾ ಎಚ್ಚರಿಕೆಯಿಂದ ಮಾಡಬೇಕಾದ ಕೆಲಸ. ಬಿತ್ತುವಾಗ ರೈತರು ಅದನ್ನು-ಇದನ್ನು ಮಾತನಾಡುತ್ತಾ ಬೇರೆ ಕಡೆ ಲಕ್ಷ್ಯ ಹರಿಸಿದರೆ ಬಿತ್ತನೆ ಅಸ್ತವ್ಯಸ್ತವಾಗುತ್ತದೆ ಯೆಂಬ ಎಚ್ಚರಿಕೆಯನ್ನು 'ಮಾತು ಮುಂದಾತು ಹೊಲ ಅಂಗಲಾತು' ಎಂಬ ಗಾದೆಯ ಮಾತು ಕೊಡುತ್ತದೆ.

ಹಾಗೆಯೇ 'ಹೊಲ ಒತ್ತಿ ಹೊಡಿ ಮ್ಯಾರಿ ಹತ್ತಿ ಬಿತ್ತು' ಎಂಬ ಮಾತೂ ರೈತನಿಗೆ ತಾಂತ್ರಿಕ ತಿಳುವಳಿಕೆಯನ್ನು ನೀಡುತ್ತದೆ. ಒಳಗಿನ ಹೊಲ ಮೃದುವಾಗಿದ್ದು ಅದನ್ನು ಕೇವಲ ಒತ್ತಿ ಹರಗಿದರೆ ಅಥವಾ ಬಿತ್ತಿದರೆ ನಡೆಯುತ್ತದೆ. ಆದರೆ ಮೇರೆ (ಮ್ಯಾರಿ) ದನಕರುಗಳು ಹಾಗೂ ದಾರಿಹೋಕರು ತುಳಿದು ಬಿರುಸಾಗಿರುವ ಕಾರಣ ಬಿತ್ತುವಾಗ ಕೂರಿಗೆಯ ಮೇಲೆ ಹತ್ತಿ ಬಿತ್ತು ಎಂದು ಇಲ್ಲಿ ಹೇಳಲಾಗಿದೆ.

ಭೂ ಸಂಬಂಧಿಯಾದ ಸಾಹಿತ್ಯ ಹಾಗೂ ಗಾದೆ ಮಾತುಗಳು ರೈತರಲ್ಲಿ ಲಭ್ಯವಿರುವಂತೆ ಭೂ ಸಂಬಂಧಿಯಾದ ಹಲವಾರು ಹಬ್ಬಹರಿದಿನಗಳು, ಆಚರಣೆ, ನಂಬಿಕೆಗಳು ಜಾರಿಯಲ್ಲಿವೆ. ಅವುಗಳನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಆಯಾ ಹಬ್ಬ-ಹರಿದಿನಗಳ ಬಗ್ಗೆ ಪ್ರಾದೇಶಿಕವಾಗಿಯೇ ಅಭ್ಯಸಿಸಬೇಕು.

ಮೈಸೂರಿನ ಕಡೆ ಭೂಮಿ ಪೂಜೆಯನ್ನು 'ಹೊನ್ನಾರು' ಎಂದು ಕರೆಯುತ್ತಾರೆ. ಆ ದಿನ ಅವರು ಭೂಮಿಯನ್ನು ಉಳುವುದಕ್ಕೆ ಮೊದಲು ಮಾಡುತ್ತಾರೆ. ಇದನ್ನೇ ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಯುಗಾದಿಯ ಪಾಡ್ಯದ ದಿನ ಆಚರಿಸುತ್ತಾರೆ. ಹೊನ್ನಾರು ಹಬ್ಬದ ಕ್ರಿಯಾಚರಣೆ ಸ್ಥೂಲವಾಗಿ ಈ ರೀತಿ ಇರುತ್ತದೆ. ಜ್ಯೋತಿಷಿಯಲ್ಲಿಗೆ ಹೋಗಿ ಯಾರ ಹೆಸರಿಗೆ ಬಲ ಬರುತ್ತದೆಯೆಂಬುದನ್ನ ಕೇಳಿ ಆ ವ್ಯಕ್ತಿಯು ಜ್ಯೋತಿಷಿ ತಿಳಿಸಿದ ದಿಕ್ಕಿನಿಂದ ನೇಗಿಲು ಹೂಡಿ ಮೂರು ಅಥವಾ ಐದು ಸಾಲು ನೇಗಿಲು ಹೊಡೆಯುವುದು ಹೊನ್ನಾರು ಹಬ್ಬದ ವಾಡಿಕೆ. ಕಾರ್ತಿಕ ಶುದ್ಧ ದಶಮಿಯಿಂದ ಪೌರ್ಣಮೆಯ ವರೆಗೆ ಆಪ್ತಬಂಧುಗಳೊಡನೆ ವನಭೋಜನಾದಿಗಳನ್ನು ಮಾಡುವ ಮೂಲಕ ಧಾತ್ರೀಪೂಜೆಯನ್ನಾಚರಿಸುವ ಪದ್ಧತಿ ಕೆಲವು ಪ್ರದೇಶಗಳಲ್ಲಿದೆ. ಭೂಮಿ ಹುಣ್ಣಿಮೆಯೂ ಭೂ ಸಂಬಂಧಿಯಾದ ಹಬ್ಬಗಳಲ್ಲಿ ಮಹತ್ವದ್ದು.

ಪಂಚಾಂಗದಲ್ಲಿ ನಿಗದಿತ ದಿನದ ಮುನ್ನಾದಿನ ರೈತಮಹಿಳೆಯರು ಮಡಿಯುಟ್ಟು ಒಲೆ-ಅಂಗಳ ಸಾರಿಸಿ 5-7 ಅಥವಾ 9 ತರಹದ ಬೆರಕೆ ಸೊಪ್ಪು ತಂದು ಅಡಿಗೆ ಮಾಡುತ್ತಾರೆ. ಅಲ್ಲದೆ ಕೊಟ್ಟೆಕಡುಬು ತಯಾರಿಸುತ್ತಾರೆ. ಇದೊಂದು ಬಗೆಯ ಸಿಹಿ ಖಾದ್ಯ. ಉಪ್ಪು, ಮೆಂತ್ಯ, ಅಕ್ಕಿ ಹಿಟ್ಟಿನ ಮಿಶ್ರಣಗಳನ್ನು ಬಾಳೆ ಎಲೆಯಲ್ಲಿಟ್ಟು ಬೇಯಿಸುತ್ತಾರೆ. ಮರುದಿನ ಬೆಳಿಗ್ಗೆ ಗದ್ದೆಗೆ ಹೋಗಿ ಒಂದು ಮೂಲೆಯಲ್ಲಿ ಕೋಲು ನೆಟ್ಟು ಅದಕ್ಕೆ ಬಾಳೆ ಅಥವಾ ಕಬ್ಬನ್ನು ಕಟ್ಟಿ ಪೂಜೆ ಮಾಡುತ್ತಾರೆ. ಕೊಟ್ಟೆಕಡುಬನ್ನು ಅದರ ಮುಂದೆ ಭೂಮಿಯಲ್ಲಿ ಹೂಳಿ ಅದರ ಮೇಲೆ ಗುರುತಿಗಾಗಿ ಒಂದು ಕಲ್ಲನ್ನು ಹೂಳುತ್ತಾರೆ.

ಅಚ್ಚಂಬಲಿ ಅಳಿಯಂಬಲಿ
ಹಿತ್ತಿಲಾಗಳ ಥಾರಿ ಹೀರಿಕಾಯಿ
ಒಪ್ಪಿಕೊಳ್ಳೆ ಭೂಮಿತಾಯಿ ಹೂಲಿ ಹೂಲಿ ॥

ಎಂದು ಹಾಡುತ್ತಾ ಹಾಳೆ ಕಣಗಳಿಗೆ ಎಡೆ ಹಿಡಿದು ಕೊನೆಯ ತುತ್ತನ್ನು ಆಕಳಿಗೆ ತಿನ್ನಿಸುತ್ತಾರೆ. ಇದಾದ ನಂತರ ಒಂದೂವರೆ ತಿಂಗಳಿಗೆ ಪೈರು ಕೊಯ್ಲಿಗೆ ಬರುತ್ತದೆ. ಆಗ ಮತ್ತೆ ಹೊಲಕ್ಕೆ ಹೋಗಿ ಹಿಂದೆ ಪೂಜೆ ಮಾಡಿದ ಸ್ಥಳಕ್ಕೆ ಅಭಿಮುಖವಾಗಿ ಕತ್ತಿಗಳನ್ನು

ಪೂಜೆ ಮಾಡಿ ಬೆಳೆ ಕೊಯ್ಯಲು ತೊಡಗುತ್ತಾರೆ. ಕಡುಬು ಹೂಳಿದ ಜಾಗಕ್ಕೆ ಬಂದು ಅಲ್ಲಿ 5 ಪೈರಿನ ತೆಂಡೆಗಳನ್ನು ಬಿಟ್ಟು ಕತ್ತಿಗಳನ್ನು ಅಲ್ಲಿ ಇಡುತ್ತಾರೆ. ಕಡುಬನ್ನು ಅಗೆದು ತೆಗೆದು ಹಂಚಿಕೊಂಡು ತಿನ್ನುತ್ತಾರೆ. ಕೆಲದಿನ ಭೂಮಿತಾಯಿಯ ಮಡಿಲಿನಲ್ಲಿಟ್ಟ ಆ ಕಡುಬು ಭೂಮಿತಾಯಿಯ ವರಪ್ರಸಾದವೆಂಬ ಭಾವನೆಯಿಂದ ರೈತರು ಅದನ್ನು ಸೇವಿಸುವ ವಿಶಿಷ್ಟತೆ ಇಲ್ಲಿ ಕಾಣುತ್ತದೆ.

ವಿದ್ವಾಂಸರಲ್ಲಿ ಬನದ ಹುಣ್ಣಿಮೆ ಅಥವಾ ಬಾದಮಿ ಅಮಾವಾಸ್ಯೆ ಎಂದು ಚರ್ಚೆಗೆ ಒಳಗಾಗಿರುವ ಪ್ರಸಿದ್ಧವಾದ ಬಾದುಬ್ಬೆ ಪರ್ವವೂ ಕೂಡ ಭೂ ಸಂಬಂಧಿಯಾದ ಒಂದು ಹಬ್ಬವೆಂದೇ ತೋರುತ್ತದೆ. ಹಾನಗಲ್ ತಾಲ್ಲೂಕಿನ ಹಳ್ಳಿಯೊಂದರ ಕೆರೆಯ ದಡದ ಮೇಲೆ ಬಾದುಬ್ಬೆಯ ಪ್ರತಿಮೆ ಇರುವುದನ್ನು ನೋಡಿದಾಗ ಬಾದುಬ್ಬೆ ಭೂಮಿ ಅಥವಾ ನೀರಿನ ಅಧಿದೇವತೆಯಾಗಿರಬೇಕೆಂದು ಭಾಸವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಎರಡು ಹೊಲಗಳ ನಡುವಿನ ಸೀಮಾರೇಖೆಯ ಮೇಲೆ ಗುರುತಿಗಾಗಿ ನೆಡಲಾಗಿರುವ ಕಲ್ಲುಗಳಿಗೆ ಈಗಲೂ 'ಬಾಂದುಗಲ್ಲು', 'ಬಾದುಗಲ್ಲು' ಎಂದು ಕರೆಯಲಾಗುತ್ತಿದ್ದು ಆ ಕಲ್ಲುಗಳು ಹಿಂದಿನ ಬಾದುಬ್ಬೆ ದೇವತೆಯ ಸಂಕೇತಗಳು ಏಕಾಗಿರಬಾರದು? ಎನ್ನಿಸುತ್ತದೆ. ಹಾಗೆಯೇ ಎರಡು ಹೊಲಗಳ ನಡುವಿನ ಹುಲ್ಲು ಬೆಳೆಯುವ ಹಾಳೆಯ ಪ್ರದೇಶಕ್ಕೆ ಹಾಗೂ ಹೊಲದ ಇಬ್ಬದಿಯ ಮೇರೆಗಳಿಗೆ 'ಬದುವು' ಎಂದು ಕರೆಯಲಾಗುತ್ತಿದ್ದು ಆ ಬದುವಿಗೂ ಬಾದುಬ್ಬೆಗೂ ಸಂಬಂಧವಿರುವ ಹಾಗೆ ತೋರುತ್ತದೆ. ಈ ವಿಷಯದ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

ಐದು ಕಲ್ಲುಗಳಿಗೆ ಸುಣ್ಣ ಹಚ್ಚಿ ಹೊಲಕ್ಕೆ ಚೆರಗ ಚೆಲ್ಲಿ ಅಥವಾ ಬ್ರಹ್ಮದೇವರನ್ನು ಪೂಜಿಸಿ ಆಚರಿಸುವ ಸೀಗೀ ಹುಣ್ಣಿಮೆಯು ಭೂ ಸಂಬಂಧಿಯಾದ ಹಬ್ಬಗಳಲ್ಲಿ ಅಷ್ಟೇ ಪ್ರಮುಖವಾದದ್ದು. ಹಾಗೆಯೇ ಮಣ್ಣೆತ್ತಿನ ಅಮಾವಾಸ್ಯೆ, ಮೇಟಿ ಕಿತ್ತು ಭೂಮಿ ಹರಗಲು ಆರಂಭಿಸುವ ದಿನವಾದ ಯುಗಾದಿ, ಶೆಗಣಿಯಿಂದ ತಯಾರಿಸುವ ಗುಳ್ಳವ್ವ, ಮಣ್ಣಿನಿಂದ ತಯಾರಿಸುವ ಹಟ್ಟೆವ್ವ, ಮಳೆಯನ್ನು ಬೇಡಿಕೊಳ್ಳಲು ಆಚರಿಸುವ ಗುರ್ಚಿ ಹಬ್ಬ ಹೀಗೆ ಇನ್ನೂ ಅನೇಕ ಹಬ್ಬ ಹರಿದಿನಗಳು ಆಚರಣೆಯಲ್ಲಿವೆ. ಇವುಗಳ ವಿವರವಾದ ಅಧ್ಯಯನ ನಡೆಸಿದಾಗ ರೈತನ ಬದುಕಿನ ನಿಜವಾದ ನೆಲೆಗಳು ಹಾಗೂ ರೈತ ನಂಬಿರುವ ಭೂಮಿ, ಮಳೆ, ಪ್ರಾಣಿ ಮೊದಲಾದವುಗಳ ಕುರಿತಾದ ನಿಚ್ಚಳವಾದ ತಿಳುವಳಿಕೆ ಮೂಡಲು ಸಾಧ್ಯ.

ಕಣ ಮಾಡಿದ ದಿನ ಮೇಟಿ ಹುಗಿಯಲು ತೆಗೆದ ತಗ್ಗಿನಿಂದ ದೊರೆಯುವ ಮಣ್ಣನ್ನು ಪಕ್ಕದಲ್ಲಿರುವ ರಸ್ತೆಯ ಮೇಲೆ ಸಾಲಾಗಿ 5 ಗುಂಪುಗಳನ್ನಾಗಿಡುವ ರೂಢಿ ಉತ್ತರ ಕರ್ನಾಟಕದಲ್ಲಿದೆ. ತಮ್ಮ ಹೊಲದಲ್ಲಿ ಕಣ ಮಾಡಿದುದನ್ನು ಉತ್ಸಾಹ ಹಾಗೂ ಅಭಿಮಾನಗಳಿಂದ ಇತರ ರೈತರಿಗೆ ಹಾಗೂ ಊರಿನ ಆಯಗಾರರಿಗೆ ತಿಳಿಸುವ ಸಂಕೇತವಾಗಿ ಆ ಮಣ್ಣನ್ನು ರಸ್ತೆಯ ಮೇಲೆ ಇಡಲಾಗುತ್ತದೆಯೆಂದು ತೋರುತ್ತದೆ.

ಭೂ ಸಂಬಂಧಿಯಾದ ಕೆಲವು ವಿಧಿ-ನಿಷೇಧಗಳು ರೈತರಲ್ಲಿರುವುದನ್ನು ಗುರುತಿಸಬಹುದು. ವರ್ಷಕ್ಕೊಮ್ಮೆ ಸುಗ್ಗಿಯ ಸಲುವಾಗಿ ಸಿದ್ಧಪಡಿಸುವ ಕಣವು ರೈತರ ದೃಷ್ಟಿಯಲ್ಲಿ ಒಂದು ದೇವಾಲಯವೇ ಸರಿ. ಕಣದ ಬಗ್ಗೆ ಅಷ್ಟು ಪೂಜ್ಯ ಭಾವನೆ ರೈತರಲ್ಲಿರುತ್ತದೆ. ಒಳ್ಳೆಯ ಮುಹೂರ್ತದಂದು ರೈತರು ತಮ್ಮ ಫಸಲಿನ ಪ್ರಮಾಣಕ್ಕೆ ತಕ್ಕ ಗಾತ್ರದಲ್ಲಿ ಕಣವನ್ನು ನಿರ್ಮಿಸಿಕೊಳ್ಳುತ್ತಾರೆ. ಆ ಕಣವು 2-3 ತಿಂಗಳು ಚಲಾವಣೆಯಲ್ಲಿರುತ್ತದೆ. ಆ ಅವಧಿಯಲ್ಲಿ ಕೆಲವು ಅರ್ಥಪೂರ್ಣವಾದ ನಿಷೇಧಗಳನ್ನು ರೈತರು ವಿಧಿಸಿಕೊಂಡಿರುತ್ತಾರೆ. ಉದಾ - ಚಪ್ಪಲಿ ಹಾಕಿಕೊಂಡು ಕಣದಲ್ಲಿ ಪ್ರವೇಶಿಸ ಕೂಡದು. ಬರಿನೆತ್ತಿಯಿಂದ ಕಣದಲ್ಲಿ ಪ್ರವೇಶಿಸಕೂಡದು, ಕಣದಲ್ಲಿ ಹೆಚ್ಚು ಮಾತನಾಡ ಕೂಡದು, ಖಾಲಿ ಕಣ ಬಿಡಕೂಡದು, ಕಣದಲ್ಲಿ ಖಾಲಿ ಬುಟ್ಟಿಗಳನ್ನು ಮೇಲ್ಮುಖ ಮಾಡಿ ಇಡಕೂಡದು - ಇತ್ಯಾದಿ. ವಾಸ್ತವವಾಗಿ ಇವುಗಳ ಹಿಂದೆ ಒಂದಲ್ಲ ಒಂದು ವೈಜ್ಞಾನಿಕ ತಿಳುವಳಿಕೆಯಿರುವುದನ್ನು ಕಾಣಬಹುದು. ಚಪ್ಪಲಿ ಹಾಕಿಕೊಂಡು ಪ್ರವೇಶಿಸಿದರೆ ಮೃದುವಾಗಿ ಸಾರಿಸಿದ ಕಣ ಒಡೆದು ಕಾಳುಕಡಿಗಳಲ್ಲಿ ಮಣ್ಣು ಸೇರಿಕೊಳ್ಳುತ್ತದೆ, ಬರಿ ನೆತ್ತಿಯಿಂದ ಕಣದಲ್ಲಿ ಬಂದರೆ ಹಾಗೂ ಕಣದಲ್ಲಿ ಮಾತನಾಡಿದರೆ ತಲೆಯಲ್ಲಿ ಮತ್ತು ಬಾಯಲ್ಲಿ ಹುಡಿ ಸೇರಬಹುದು, (ಬರಿನೆತ್ತಿಯಿಂದ ಕಣದಲ್ಲಿ ಬಂದರೆ ರಾಶಿಯ ಹುಲುಸು ಕಡಿಮೆಯಾಗುತ್ತದೆಯೆಂದು ರೈತರು ನಂಬುತ್ತಾರೆ) ಖಾಲಿ ಕಣವನ್ನು ಬಿಟ್ಟರೆ ಬಿಸಿಲು-ಗಾಳಿ-ಮಳೆಯಿಂದ ಅದು ಹಾಳಾಗುತ್ತದೆ, ಶೆಗಣಿಯಿಂದ ಸಾರಿಸಿರುವ ಬುಟ್ಟಿಗಳು ಬಿಸಿಲು-ಗಾಳಿಗೆ ತೆರೆದುಕೊಂಡಿದ್ದರೆ ಶೆಗಣಿ ಉದುರಿ ಬುಟ್ಟಿ ಸಡಿಲಾಗುತ್ತವೆ.... ಹೀಗೆ ಅವರು ವಿಧಿಸಿಕೊಂಡಿರುವ ಒಂದೊಂದೂ ನಿಷೇಧದ ಹಿಂದೆ ಒಂದೊಂದು ಅರ್ಥ ಇದ್ದೇ ಇದೆ. ಇಂಥ ಅನೇಕ ನಿಷೇಧಗಳು ರೈತರಲ್ಲಿದ್ದು ಅವುಗಳ ಅಧ್ಯಯನ ತುಂಬಾ ಕುತೂಹಲಕಾರಿ ಯಾಗಬಲ್ಲುದು.

ಭೂಮಿಯ ರಕ್ಷಣೆ ಹಾಗೂ ಪೋಷಣೆಯ ಕೆಲ ವಿಧಾನಗಳು ರೈತರಲ್ಲಿವೆ. ಒಡ್ಡು ಹಾಕುವುದು, ಹಾಳೆ ಕಟ್ಟುವುದು, ಮಳೆಯಿಂದ ಹೊಲದ ಮಣ್ಣು ಕೊಚ್ಚಿ ಹೋಗದಂತೆ ಕಲ್ಲಿನ ಬಚ್ಚಲು ಕಟ್ಟುವುದು, ಕಳೆ ತೆಗೆಸುವುದು, ಪ್ರತಿವರ್ಷ ಹೊಲಕ್ಕೆ ಹೊಸ ಮಣ್ಣು ಹಾಕಿಸುವುದು, ಪ್ರತಿವರ್ಷ ಭೂಮಿಯ ಪೈರುಗಳನ್ನು ಬದಲಿಸುತ್ತಿರುವುದು, ಇಳುಕಲಿಗೆ ಅಡ್ಡಲಾಗಿ ಬಿತ್ತುವುದು, ಹೊಲದ ಮಧ್ಯದ ಬೇರು -ಕಲ್ಲುಗಳನ್ನು ಕೀಳುವುದು, ನಡುಹೊಲದಲ್ಲಿ ಜಾಲಿ, ಹುಣಿಶೆ ಮೊದಲಾದ ಮರಗಳು ಬೆಳೆಯದಂತೆ ನೋಡುವುದು, ಹೊಲದಲ್ಲಿಯ ಕಸ-ಕಲ್ಲು-ಕಟ್ಟಿಗೆಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವುದು ಇವೇ ಮೊದಲಾದ ಕೆಲಸಗಳ ಮೂಲಕ ರೈತರು ತಮ್ಮ ಹೊಲಗಳನ್ನು ಪ್ರತೀವರ್ಷ ಹೊಸ ಹೊಲವನ್ನಾಗಿ ರೂಪಿಸಿಕೊಳ್ಳುತ್ತಾರೆ. ನಡುವಿನ ಹೊಲಕ್ಕೆ ಉದ್ದವಾಗಿ ಬಿತ್ತಿ ಅದರ ಎರಡೂ ತುದಿಗಳಿಗೆ ಅಂದರೆ ಮೇರೆಗಳಿಗೆ ಮಾತ್ರ ಅಡ್ಡಲಾಗಿ ಬಿತ್ತುತ್ತಾರೆ. (ಇದಕ್ಕೆ ಮೇರೆ ಹಾಕುವುದು ಎನ್ನುತ್ತಾರೆ). ಬಿತ್ತುವಾಗ ಎತ್ತುಗಳಿಗೆ ಹೊಲದ ತುದಿಯಲ್ಲಿ ತಿರುಗಲು ಬಾರದಿರುವುದು, ಒಳಗಿನ ಬೆಳೆಗೆ ಮೇರೆಯ ಬೆಳೆಯು ರಕ್ಷಣಾಕೋಟೆಯಂತೆ ಕೆಲಸ ಮಾಡುವುದು. ಇವೇ ಈ ರೀತಿ ಮೇರೆ ಹಾಕುವುದರ ಕಾರಣಗಳಾಗಿರಬಹುದು. ಪೈರು ಬೆಳೆದಾಗ ಹೊಲ ಸುಂದರವಾಗಿ ಕಾಣುವುದೂ ಇನ್ನೊಂದು ಕಾರಣವಾಗಿರಬಹುದು. ಹೀಗೆಯೇ ಉತ್ತುವಾಗ, ಬಿತ್ತುವಾಗ, ಫಸಲು ಕೊಯ್ಯುವಾಗ ರೈತರು ಅನೇಕ ವಿಧಿ-ವಿಧಾನಗಳನ್ನು ಪಾಲಿಸುತ್ತಾರೆ.

ಮಣ್ಣಿನ ಗುಣ, ಅದರ ಫಲವತ್ತತೆಗಳನ್ನಾಧರಿಸಿ ರೈತರು ಭೂಮಿಯನ್ನು ಕರಿಭೂಮಿ, ಎರೆಭೂಮಿ, ಮಸಾರಿ ಭೂಮಿ, ಮರಡಿ ಭೂಮಿ, ಜವುಳು ಭೂಮಿ, ಬೆದ್ದಲು ಭೂಮಿ, ಬಂಜರು ಭೂಮಿ ಎಂದೆಲ್ಲ ವರ್ಗೀಕರಿಸಿಕೊಳ್ಳುತ್ತಾರೆ. ನೀರಾವರಿ ವ್ಯವಸ್ಥೆಯನ್ನಾಧರಿಸಿ ಇಡೀ ಕೃಷೀ ಪದ್ಧತಿಯನ್ನೇ ನೀರಾವರಿ ಬೇಸಾಯ, ಒಣ ಬೇಸಾಯ ಎಂದು ವಿಂಗಡಿಸಿಕೊಳ್ಳುತ್ತಾರೆ. ಮಳೆ ಹಾಗೂ ಕೃತಕ ನೀರಾವರಿ ವ್ಯವಸ್ಥೆಗಳಿಂದ ಭೂಮಿಗೆ ನೀರುಣಿಸಲು ಸಾಧ್ಯವಿದ್ದು ಮಳೆಯನ್ನಾಧರಿಸಿದ ಭೂಮಿಯನ್ನು 'ದೇವಮಾತೃಕೆ' ಎಂದೂ, ಕೃತಕ ನೀರಾವರಿಯನ್ನಾಧರಿಸಿ ಬೆಳೆಯುವ ಭೂಮಿಯನ್ನು 'ನದೀಮಾತೃಕೆ' ಎಂದೂ ಕರೆಯುವ ವಾಡಿಕೆ ಮೊದಲಿನಿಂದಲೂ ಇದ್ದುದು ಕಾವ್ಯ ಮತ್ತು ಶಾಸನಗಳಿಂದ ನಮಗೆ ತಿಳಿದು ಬರುತ್ತದೆ.

ಇತ್ತೀಚೆಗೆ ಮನುಷ್ಯನ ವಿಚಾರಧಾರೆ ಬದಲಾಗಿದೆ. ಕೃಷಿಯಲ್ಲಿ ವೈಜ್ಞಾನಿಕತೆ ಪ್ರವೇಶಿಸಿದೆ. ಹೀಗಾಗಿ ರೈತರಲ್ಲಿ ಭೂಮಿಯ ಕುರಿತಾದ ಹಿಂದಿನ ನಿಷ್ಠೆ-ನಂಬಿಕೆಗಳು ಇಲ್ಲವೆಂದು ತೋರುತ್ತಿರುವುದು ಒಂದೆಡೆಯಾದರೆ, ಭೂಮಿಯನ್ನು ಹಿಂದಿಗಿಂತ ಹೆಚ್ಚು ವೈಜ್ಞಾನಿಕವಾಗಿ ದುಡಿಸಿಕೊಳ್ಳುತ್ತಿರುವುದು ಇನ್ನೊಂದೆಡೆಯಾಗಿದೆ. ಕಾಲಕಾಲಕ್ಕೆ ಮಣ್ಣು ಪರೀಕ್ಷೆ ಮಾಡಿಸುವುದು, ಭೂಮಿಯ ಸ್ವಭಾವಕ್ಕೆ ತಕ್ಕ ಹಾಗೆ ಗೊಬ್ಬರ-ಕ್ರಿಮಿನಾಶಕ ಹಾಗೂ ನೀರಾವರಿ ವ್ಯವಸ್ಥೆ ಮಾಡುವುದು ಇವು ಈಚಿನ ಉಪಕ್ರಮಗಳಾಗಿವೆ. ಒಬ್ಬ ರೈತನಿಗೆ ಅಧಿಕಾರಿಯೋ, ಶ್ರೀಮಂತನೋ ಭೂಮಿಯನ್ನು ಉಂಬಳಿಯಾಗಿ ಕೊಡುವ ಪದ್ಧತಿ ಇಂದು ಕಡಿಮೆಯಾಗಿದೆ. ಅಷ್ಟೇ ಅಲ್ಲ ಮೊದಲಿನ ಜಮೀನದಾರಿ ಪದ್ಧತಿ-ಇಂದು ರದ್ದಾಗಿದೆ. ಒಬ್ಬ ರೈತ ಹೊಂದಬಹುದಾದ ಭೂಮಿಯ ಮಿತಿಯನ್ನು ನಿಗದಿಗೊಳಿಸುವ ಕಾನೂನುಗಳು ಈಗ ಜಾರಿಯಲ್ಲಿವೆ. ಭೂಮಿಯ ಮೇಲೆ ಸಾಲ ಕೊಟ್ಟು ಕೃಷಿ ವ್ಯವಸಾಯವನ್ನು ಪ್ರೋತ್ಸಾಹಿಸುವ ವ್ಯವಸ್ಥೆ ಇಂದು ಇದೆ. ಭೂನ್ಯಾಯ ಮಂಡಳಿಗಳಿವೆ. ಹೀಗೆ ಮೊದಲಿನ ಭಾವನಾತ್ಮಕ ನೆಲೆಯಿಂದ ಬಿಡಿಸಿಕೊಂಡ ಭೂಮಿ ಇಂದು ಹೆಚ್ಚಾಗಿ ವ್ಯಾವಹಾರಿಕ, ಭೌತಿಕ ಹಾಗೂ ವೈಜ್ಞಾನಿಕ ನೆಲೆಯಲ್ಲಿ ನಿಂತಿರುವುದು ಸ್ಪಷ್ಟವಾಗಿದೆ. ಕಾಲ ಬದಲಾದಂತೆ ಭೂಮಿಯ ಕುರಿತಾದ ನಮ್ಮ ರೈತರ ತಿಳುವಳಿಕೆಗಳು ಬದಲಾಗುವುದು ಅಸ್ವಾಭಾವಿಕವೇನಲ್ಲ. ಏನೇ ಆದರೂ ಭೂಮಿ ರೈತನ ತಾಯಿಯೇ. ಅವಳ ಮಡಿಲನ್ನು ಬಿಟ್ಟು ರೈತನಿಗೆ ಅನ್ಯ ಆಶ್ರಯವಿಲ್ಲ.

---

*ಕೆಲವು ಜಾನಪದ ಗ್ರಂಥಗಳ ನೆರವಿನಿಂದ ನಾನು ಈ ಲೇಖನ ಸಿದ್ಧಪಡಿಸಿದ್ದು, ಆ ಗ್ರಂಥಗಳ ಕರ್ತೃಗಳಿಗೆ ನಾನು ಉಪಕೃತ.

# ರೈತ ಮತ್ತು ಮಳೆ

ಡಾ:ಎಸ್.ಪಿ.ಪದ್ಮಪ್ರಸಾದ್

ಮಳೆ- ಬಾಳಿಗಾಧಾರ. 'ಜೀವನ' ಎನ್ನುವುದು ನೀರಿಗೆ ಇನ್ನೊಂದು ಹೆಸರು. ನೀರಿನ ಮೂಲವನ್ನು ದೇವಮಾತೃಕ, ನದೀಮಾತೃಕವೆಂದು ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಇದರಲ್ಲಿ ದೇವಮಾತೃಕವೆನ್ನುವುದೇ ಮಳೆ. ಅಂತರ್ಜಲಕ್ಕಾದರೂ ಇದೇ ಮುಖ್ಯ ಮೂಲ ಸಹ.

ಮಳೆಯನ್ನು ಕುರಿತಂತೆ ಮಾನವ ಬೆಳೆಸಿಕೊಂಡ ನಂಬಿಕೆ, ಆಚರಣೆಗಳಿಗೂ ಕೃಷಿಗೂ ನೇರ ಸಂಬಂಧವಿದೆ. ಮಾನವ ಅಲೆಮಾರಿಯಾಗಿದ್ದಾಗ ಕೃಷಿಕನಲ್ಲದ್ದರಿಂದ ಅವನಿಗಿರುತ್ತಿದ್ದ ನೀರಿನ ಅಗತ್ಯ ಕಡಿಮೆ ಇತ್ತು. ಆದರೆ, ಕೃಷಿಕನಾಗಿ ಸ್ಥಿರ ಜೀವನ ಅರಂಭಿಸಿದ ಮೇಲೆ ಕಾಲ ಕಾಲಕ್ಕೆ ಮಳೆ ಬರಬೇಕಾದುದರ ಅಗತ್ಯ, ಅದು ಹೆಚ್ಚಾದರೆ ಅಥವಾ ಕಡಿಮೆಯಾದರೆ ಆಗುವ ವಿಕೋಪ - ಎಲ್ಲ ಅವನಿಗೆ ಅನುಭವ ವೇದ್ಯವಾಗುತ್ತ ಬಂತು. ಮಳೆಯನ್ನು ಕುರಿತ ಪ್ರಾರ್ಥನೆ, ಲೆಕ್ಕಾಚಾರಗಳು ಶಕುನಗಳು ನಂಬಿಕೆಗಳು- ಇತ್ಯಾದಿಗಳೆಲ್ಲ ಅಂದಿನಿಂದ ಬೆಳೆದು ಬಂದಿರುವ ಹಾಗೆ ಕಾಣುತ್ತದೆ.

ಕೃಷಿ ಎನ್ನುವುದು ಜಗತ್ತಿನಲ್ಲಿ ಆರಂಭವಾಗಿ ಸುಮಾರು ಹತ್ತು ಸಾವಿರ ವರ್ಷಗಳಾದ ವೆಂಬುದು ಒಂದು ಲೆಕ್ಕಾಚಾರ. ಮಳೆಯನ್ನು ಕುರಿತ ನಂಬಿಕೆ, ಅಚರಣೆಗಳೂ ಇಷ್ಟೇ ಹಳೆಯವಾಗಿರಬೇಕು. ಈ ಅಚರಣೆಗಳು ಜಗದ ಎಲ್ಲೆಡೆ ಕಂಡುಬರುತ್ತವೆ. ಆದರೆ ಮಳೆಯನ್ನು ಕುರಿತ ತೀವ್ರ ಲೆಕ್ಕಾಚಾರ, ಶಾಸ್ತ್ರಗಳು ಭಾರತ, ಚೀನಾ, ಈಜಿಪ್ಟ್‌ನಂತಹ ಕೆಲವೇ ದೇಶಗಳಲ್ಲಿ ಚೆನ್ನಾಗಿ ಬೆಳವಣಿಗೆ ಹೊಂದಿರುವಂತೆ ಕಾಣುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲ ಮಳೆ ಸಂಬಂಧಿ ಆಚರಣೆಗಳಿಗೂ ಕೃಷಿಕರು ಅಥವಾ ಕೃಷಿ ಕಾರ್ಮಿಕರೇ ಮೂಲ. ಈ ಆಚರಣೆಗಳ ಏರ್ಪಾಟುಗಳನ್ನು ಮಾಡಲು

ಮುನ್ನುಗ್ಗುವವರೂ ಅವರೇ. ಆದರೆ ನೀರು ಎಲ್ಲರ ಜೀವನಾಧಾರವಾದ್ದರಿಂದ ಈ ಆಚರಣೆ, ವ್ಯವಸ್ಥೆಗಳಲ್ಲಿ ಇಡೀ ಗ್ರಾಮ ಸಮುದಾಯ ಪಾಲ್ಗೊಳ್ಳುತ್ತದೆ.

ಈ ಇಡೀ ಪ್ರಬಂಧವನ್ನೀಗ ಎರಡು ಭಾಗ ಮಾಡಿಕೊಳ್ಳಬಹುದು.

1. ಮಳೆಯನ್ನು ಕುರಿತ ನಮ್ಮ ರೈತರ ನಂಬಿಕೆಗಳು.
2. ಮಳೆ ಆಚರಣೆಗಳು.

## 1. ಮಳೆ ನಂಬಿಕೆಗಳು

ವಿವಿಧ ಮಳೆಗಳನ್ನು ಕುರಿತಂತೆ ನಮ್ಮ ರೈತರಲ್ಲಿ ನಿರ್ದಿಷ್ಟ ಲೆಕ್ಕಾಚಾರ ಪದ್ಧತಿ ಮೊದಲಿಂದ ಬೆಳೆದು ಬಂದಿದೆ. ಇದರ ಜೊತೆಗೇ ತಳಕು ಹಾಕಿಕೊಂಡು ಅನುಭವ ಆಧಾರಿತ ನಂಬಿಕೆಗಳೂ ಬೆಳೆದು ಬಂದಿವೆ.

ನಮ್ಮ ರೈತರು ಮಳೆ ಲೆಕ್ಕಾಚಾರಗಳನ್ನು ಹೇಗೆ ಮಾಡುತ್ತಾರೆಂಬುದನ್ನು ಒಂದಷ್ಟು ನೋಡಬೇಕು.

ನಮ್ಮ ರಾಶಿಚಕ್ರದಲ್ಲಿ ಅಶ್ವಿನಿಯಿಂದ ರೇವತಿಯವರೆಗೆ 27 ನಕ್ಷತ್ರಗಳಿವೆ. ಈ ಎಲ್ಲ ನಕ್ಷತ್ರಗಳ ಹೆಸರಲ್ಲಿ ಮಳೆಯನ್ನು ಹೇಳಲಾಗುತ್ತದಾದರೂ ಅದರಲ್ಲಿ ನಿಜವಾಗಿ ಮಳೆಯಾಗುವುದು ಮೊದಲ ಹದಿನೈದು ನಕ್ಷತ್ರಗಳ ಅವಧಿಯಲ್ಲಿ ಮಾತ್ರ. ಸೂರ್ಯ ಒಂದು ನಕ್ಷತ್ರ ರಾಶಿಯನ್ನು ಪ್ರವೇಶಿಸಿ ಅಲ್ಲಿರುವ ಕಾಲದಲ್ಲಿ ಆಗುವ ಮಳೆಯನ್ನು ಆ ನಕ್ಷತ್ರದ ಮಳೆ ಎನ್ನಲಾಗುತ್ತದೆ. 27 ನಕ್ಷತ್ರಗಳ ಹೆಸರಲ್ಲಿ ಮಳೆಯನ್ನು ಹೇಳಿದರೂ ಇವುಗಳ ಪೈಕಿ ಮೊಧಲ ಹದಿನೈದು ನಕ್ಷತ್ರಗಳನ್ನು ಮಾತ್ರ - ಅಶ್ವಿನಿಯಿಂದ ಸ್ವಾತಿ - ಗಂಭೀರವಾಗಿ ಮಳೆ ನಕ್ಷತ್ರಗಳೆಂದು ಪರಿಗಣಿಸಲಾಗುತ್ತೆ. ಅಂದರೆ ಈ ನಕ್ಷತ್ರಗಳ ಉದಯ-ಅಸ್ತದ ನಡುವಣ ಅವಧಿಯಲ್ಲಿ ವಿವಿಧ ಪ್ರಮಾಣದಲ್ಲಿ ಮಳೆ ಬೀಳುತ್ತದೆಂಬುದು ಅನುಭವದಿಂದ ಹೇಳಲಾಗುತ್ತದೆ. ಈ 15 ನಕ್ಷತ್ರಗಳ ಮಳೆಯಕಾಲ ಎಂದರೆ ಚೈತ್ರದಿಂದ

ಹಿಡಿದು ಕಾರ್ತಿಕದ ವರೆಗಿನ ಕಾಲ (ಏಪ್ರಿಲ್ - ನವೆಂಬರ್) ಇದರಲ್ಲಿಯೂ ಎಲ್ಲವೂ ಮುಖ್ಯ ಅಲ್ಲ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಂತೂ ಖಚಿತವಾಗಿ ಲೆಕ್ಕಕ್ಕೆ ಹಿಡಿಯುವುದು ಮೊದಲ ಹತ್ತನ್ನು ಮಾತ್ರ - ಅಂದರೆ ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರಾ, ಆರ್ದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ ಮತ್ತು ಮಘಾ ನಕ್ಷತ್ರಗಳ ಅವಧಿಯಲ್ಲಾಗುವ ಮಳೆಗಳು ಮುಖ್ಯವಾದವು. ಇವುಗಳಲ್ಲಿ ಮೊದಲ 5ನ್ನು (ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರಾ) "ಮೃಗಪಂಚಕ" ಎನ್ನುತ್ತಾರೆ. ಈ ಶಬ್ದಗಳು ಸಾಮಾನ್ಯ ರೈತರಲ್ಲೂ ಚಾಲ್ತಿಯಲ್ಲಿವೆ. ಚೈತ್ರದಿಂದ ಶ್ರಾವಣದ ಕೊನೆವರೆಗೆ ಈ ಹತ್ತು ಮಳೆಗಳು ಬೀಳುತ್ತವೆ. ಮುಖ್ಯವಾದ ಕೃಷಿ ಕಾರ್ಯಗಳು, ಬೆಳೆಗಳ ಫಲ - ಎಲ್ಲ ನಿರ್ಣಯವಾಗುವುದು ಈ ಮಳೆಗಳಿಂದ. ಇಲ್ಲಿಂದ ಮುಂದಿನ ಐದು ಮಳೆಗಳು ಹುಬ್ಬ, ಉತ್ತರ, ಹಸ್ತ, ಚಿತ್ತ, ಸ್ವಾತಿ - ಪೂರ್ಣ ಖಚಿತವಿಲ್ಲ. ಇವುಗಳ ಪ್ರಮಾಣ ಪ್ರದೇಶವಾರಾಗಿ ಬೇರೆಯಾಗಿ ಆಯಾ ರೈತರು ಅದಕ್ಕೆ ತಕ್ಕ ಹಾಗೆ ತಮ್ಮ ಕೆಲಸದ ಸ್ವರೂಪವನ್ನು ನಿರ್ಧರಿಸಿಕೊಂಡಿರುತ್ತಾರೆ. ಸ್ವಾತಿಯ ನಂತರವಂತೂ ಮಳೆ ಇಲ್ಲ. ಆದ್ದರಿಂದಲೇ - "ಸ್ವಾತಿ ಮಳಿ ಆದಮ್ಯಾಲ ಯಾತರ ಮಳಿ?" ಎಂಬ ಗಾದೆ ಉತ್ತರ ಕರ್ನಾಟಕದಲ್ಲಿ ಹುಟ್ಟಿಕೊಂಡಿದೆ.

ಮಳೆಯನ್ನು ಕುರಿತ ನೂರಾರು ನಂಬಿಕೆಗಳು ನಮ್ಮ ರೈತರ ಜೀವನ ಕ್ರಮವನ್ನೂ ಕೆಲಸದ ಸ್ವರೂಪವನ್ನೂ ರೂಪಿಸಿವೆ. ಮಳೆಯಷ್ಟೆ ಅಲ್ಲ, ಅದಕ್ಕೆ ಕಾರಣವಾದ ಮೋಡ, ಗುಡುಗು, ಸಿಡಿಲು, ಮಿಂಚುಗಳ ಬಗ್ಗೆಯೂ ನಮ್ಮ ಜನರಲ್ಲಿ ಹಲಬಗೆಯ ನಂಬಿಕೆಗಳಿವೆ. ಮೋಡಗಳು ಕಟ್ಟಿಕೊಳ್ಳುವ ದಿಕ್ಕು ಹಾಗೂ ಅವುಗಳ ದಟ್ಟಣೆಯನ್ನು ಅನುಲಕ್ಷಿಸಿ ಮುಂದಿನ ಮಳೆ ದಿನಗಳು ಹೇಗೆ ಇರುತ್ತವೆ ಎಂದು ಜನ ನಂಬಿಕೊಳ್ಳುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಜನ -"ಕಡಲ ಮೇಲೆ ಮೋಡ ಕಟ್ಟಿದರೆ ಮಳೆ ಇಲ್ಲ, ಗುಡ್ಡೆ ಮೇಲೆ ಕಟ್ಟಿದರೆ ಮಳೆ ಉಂಟು" ಎಂದು ನಂಬಿದ್ದಾರೆ. ಇದಕ್ಕೆ ಸಂವಾದಿಯಾದ ನಂಬಿಕೆ ಮೈಸೂರು ಜಿಲ್ಲೆಯಲ್ಲಿಯೂ ಇದೆ. ಅದೇ ರೀತಿ ತುಂಬ ಮುಗಿಲುಗಳು ಒಂದೆಡೆ ಸೇರಿದರೆ ಮಳೆಯಾಗುತ್ತದೆ ಎಂಬ "ಕೋಟೆ ಮುಗಿಲೆದ್ದರೆ ಮಳೆ" ಎಂಬ ನಂಬಿಕೆಯೂ ಉತ್ತರ ಕನ್ನಡ ಜಿಲ್ಲೆಯ ರೈತರಲ್ಲುಂಟು.

ವಿವಿಧ ಮಳೆಗಳನ್ನು ಕುರಿತ ರೈತರ ನಂಬಿಕೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನೋಡಬಹುದು. "ಅಶ್ವಿನಿ ಮಳೆ ಅಡಿಕೆ ತೆಂಗಿಗೆ ಕೇಡು", "ಅಶ್ವಿನಿ ಸಸ್ಯ ನಾಶಿನಿ" ಎಂಬ ನಂಬಿಕೆಗಳಿರುವಂತೆಯೇ (ಉ.ಕ.) - ಈ ಮಳೆ ಅರಿಶಿಣಕ್ಕೆ ಒಳ್ಳೆಯದೆಂಬ ನಂಬಿಕೆಯೂ ಇದೆ. ಆದರೂ ಈ ಮಳೆ ವಿಫಲವಾಗಬಾರದೆನ್ನುತ್ತಾರೆ ಜನ. ಯಾಕೆಂದರೆ ಇದು ಹೋದರೆ ಮುಂದಿನ ಆರು ಮಳೆಗಳೂ ಸರಿಯಾಗಿ ಬರೋದಿಲ್ಲ ಎಂಬ ನಂಬಿಕೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಅರ್ಥದ 'ಅಶ್ವಿನಿ ಪೊಡತೆ ಅಶ್ವೀಚೆ ಕೂಡ ನೀರಡದು' (ಅಶ್ವಿನಿ ಹೋದ್ರೆ ಮೇಲಿನ ಮಳೆಗಳೂ ಇಲ್ಲ) ಎಂಬ ಗಾದೆ ಬಳಕೆಯಲ್ಲಿದೆ.

ಆದರೆ ಭರಣಿ ಮಳೆ ಬಗ್ಗೆ ಕರ್ನಾಟಕದ ಎಲ್ಲಾ ಕಡೆ ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಿನ ಆದರವಿದೆ. "ಈ ಮಳೆ ಧರಣೀಗೊಳ್ಳೇದು" ಎಂದು ತುಮಕೂರು ಜಿಲ್ಲೆಯಲ್ಲಿ ನಂಬಿಕೆ ಇದ್ದರೆ, ಕೋಲಾರದಲ್ಲಿ "ಭರಣಿ ಬಂದರೆ ಧರಣಿ ಎಲ್ಲಾ ಬೆಳೆ" ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ 'ಭರಣಿ, ಬಂಗಾರದ ಕರಣಿ' ಎನ್ನುತ್ತಾರೆ. ಶಿವಮೊಗ್ಗ ಜಿಲ್ಲೇಲಿ 'ಭರಣಿ ಮಳೆ, ಚಿನ್ನದ ಮಳೆ' ಅನ್ನುತ್ತಾರೆ. ಹೀಗೆ ಎಲ್ಲಾ ವಿವಿಧ ಬೆಳೆಗೂ ಇದು ಒಳಿತೆಂದು ಭಾವಿಸಲಾಗಿದೆ.

ಆದರೆ, ವಾಸ್ತವವಾಗಿ ಏಪ್ರಿಲ್ ಕೊನೆ - ಮೇ ಆರಂಭದಲ್ಲಿ ಬೀಳುವ ಈ ಮಳೆ ಕೃಷಿಕ ಕಾರ್ಯಕ್ಕೆ ಭೂಮಿಯನ್ನು ಹದಗೊಳಿಸುವ ಕೆಲಸ ಮಾಡುತ್ತದಷ್ಟೆ. ಬೇಸಿಗೆ ಬೆಳೆ ಇರುವಲ್ಲಿ ಮಾತ್ರ ಈ ಮಳೆ ಫಸಲಿನ ವಿಷಯದಲ್ಲೂ ನಿರ್ಣಾಯಕ ಪಾತ್ರ ವಹಿಸುತ್ತದೆ.

ಕೃತ್ತಿಕೆ ಮಳೆಯು ಎಲ್ಲ ಬೆಳೆಗಳಿಗೂ ಒಳ್ಳೆಯದು ಹಾಗೂ ಕಾಡಿನಲ್ಲಿ ಹುಲ್ಲು ಸಮೃದ್ಧವಾಗಿ ಬೆಳೆದು ಪಶುಗಳಿಗೂ ಆಹಾರ ಸಮೃದ್ಧಿಯನ್ನುಂಟು ಮಾಡುತ್ತದೆ -ಎಂದು ರಟ್ಟಮತದಲ್ಲಿ ಹೇಳಿದೆ. ಅದರೆ -ಇದರ ಬಗ್ಗೆ -"ಕರ್ತಕೀ ಮಳೇನ ಕೇಳವರ ಇಲ್ಲ" ಎಂಬ ಗಾದೆ ಧಾರವಾಡ ಭಾಗದಲ್ಲಿದ್ದು, ಅಷ್ಟೇನೂ ಲೆಕ್ಕಕ್ಕಿಲ್ಲದ್ದು ಎಂಬ ಭಾವನೆ ಮೂಡಿಸಿದರೆ "ಕೃತ್ತಿಕೆ, ಬೀಳ್ದಿದ್ರೆ ಬಾಯಿಗೆ ಮೃತ್ತಿಕೆ" - ಎಂಬ ಇನ್ನೊಂದು ಗಾದೆಯೂ ಇದೆ. ಈ ಎರಡನೇ ಗಾದೆ ಪ್ರಾಸ ಪ್ರಿಯತೆಯಿಂದ ಬಂದಿರಬಹುದು.

ರೋಹಿಣಿ - ರೈತರಿಗೆ ಅಗತ್ಯವಾದ ಮಳೆ. ಮೇ ಕೊನೇ ವಾರದ್ದು - ಎಲ್ಲೆಡೆಗೆ

ಬಿತ್ತನೆಗೆ ಸಿದ್ಧ ಮಾಡಿಕೊಂಡಿರುವ ಕಾಲ - ಈ ಮಳೆ ಆಗದಿದ್ರೆ ಬಿತ್ತನೆಗೆ ತಡೆ. ಈ ಮಳೆ ಸರಿಯಾಗಿ ಆದ್ರೆ ಫಸಲು ಚೆನ್ನವೆಂದು ಜನರ ನಂಬಿಕೆ. ಈ ದಿನಗಳಲ್ಲಿ ಬಿತ್ತಿದರೆ ರೋಗವಿಲ್ಲೆಂದು ಗೌರಿಬಿದನೂರು ಕಡೇಲಿ ನಂಬಿಕೆ.

ಮೃಗಶಿರ - ಎಳ್ಳು, ಭತ್ತಗಳಿಗೆ ಒಳ್ಳೆಯದೆಂದು ನಂಬಿಕೆ. ಈ ದಿನಗಳಲ್ಲಿ ಪೈರನ್ನು ದನಗಳು ಮೇಯ್ದರೆ ನಷ್ಟವೇನಿಲ್ಲವೆಂಬ ನಂಬಿಕೆ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಹೊಸ ಹೂ ಗಿಡಗಳನ್ನು ನೆಡಲು, ಇರುವ ಹೂಗಿಡಗಳ ಟೊಂಗೆಗಳನ್ನು ಕತ್ತರಿಸಲೂ ಇದು ಸಕಾಲವಂತೆ. ಈ ನಕ್ಷತ್ರದ 1- 4 ನೇ ಚರಣಗಳಲ್ಲಿ ಮಿಂಚು ಕಾಣಿಸಿದರೆ ಮುಂದಿನ ಮಳೆಗಳೆಲ್ಲವೂ ಸುಸೂತ್ರವಾಗುವುದಂತೆ. 1ನೇದರಲ್ಲಿ ಮಾತ್ರ ಮಿಂಚು ಕಾಣ್ಸಿದ್ರೆ ಮುಂದಿನ 3 ಮಳೆಗಳು ಹುಸಿ - 2ನೇದರಲ್ಲಿ ಮಾತ್ರ ಮಿಂಚು ಕಾಣಿಸಿದರೆ - ಆರ್ದ್ರಾ, ಪುನರ್ವಸು ಮಳೆ ಬರೋಲ್ಲ - ಹೀಗೆಲ್ಲ ರೈತರಲ್ಲಿ ನಂಬಿಕೆ ಇದೆ.

ವ್ಯವಸಾಯದ ಯಶಸ್ಸಿಗೆ ತುಂಬ ಮುಖ್ಯವಾದ ಮಳೆ ಆರಿದ್ರಾ. 'ಆದರೆ, ಆರಿದ್ರಾ, ಆಗದಿದ್ರ ದರಿದ್ರ'. ಈ ಮಳೆಯಂತೆಯೇ ಮುಂದಿನ ಆರೂ ಮಳೆಗಳು ಬರುತ್ತವೆ ಎಂದು ಜನರ ನಂಬಿಕೆ. ಈ ಮಳೆಯ ಆರಂಭದಲ್ಲಿ ಗುಡುಗು ಮಿಂಚುಗಳಾದರೆ ಮುಂದಿನ ಆರು ಮಳೆಗಳೂ ಕೈಕೊಡುತ್ತಾವೆಂದು ಬೆಳಗಾಂ ಜಿಲ್ಲೆಯ ಗಡಿ ಭಾಗದಲ್ಲಿನ ಜನರ ನಂಬಿಕೆ.

ಮಲೆನಾಡಿನಲ್ಲಿ ಈ ಮಳೆಯಿಂದ ಬಿರುಸಾದ ಮಳೆಗಾಲ ಆರಂಭ. ಅದ್ದರಿಂದ ಇದಕ್ಕೆ ಸ್ವಾಗತ ಕೋರುವ 'ಮಳೆ ಹಬ್ಬ'ದ ಆಚರಣೆಯೊಂದು ಸಾಗರ (ಶಿವಮೊಗ್ಗ ಜಿಲ್ಲೆ) ಹಾಗೂ ಸಿದ್ದಾಪುರ (ದ.ಕ.ಜಿಲ್ಲೆ) ತಾಲ್ಲೂಕಿನ ದೀವರುಗಳಲ್ಲಿ ಆಚರಣೆಯಲ್ಲಿದೆ. ಈ ಮಳೆ ದಿನಗಳಲ್ಲಿ ಬರುವ ತುಂಬ ಶೀತದಿಂದ ಕೂಡಿದ ಗಾಳಿಯನ್ನು 'ಆದಿಗಾಳಿ' ಎನ್ನುತ್ತಾರೆ.

ಪುನರ್ವಸು - ಪುಷ್ಯ ಮಳೆಗಳನ್ನು ಒಟ್ಟಾಗಿ -'ಸಣ್ಣ ಪುಂಡ - ದೊಡ್ಡ ಪೂರ' ಎಂದು ಕರೆಯುವುದು ಉ.ಕ.ಜಿಲ್ಲೆಯಲ್ಲಿ ವಾಡಿಕೆ. ಇವು ಒಂದಕ್ಕೊಂದು ಪೂರಕವಾಗಿ,

ಒಂದಕ್ಕಿಂತ ಒಂದು ಬಿರುಸಾಗಿ ಬರುತ್ತವೆಂದು ಅಲ್ಲಿನ ಜನರ ಅನುಭವ. "ನೀ ನೇಗಿಲ ನೊಗ ಸಂದ್ರೆ ನಾ ಎತ್ತು ಹೂಟಿ ತಗಬರ್ತಿ" ಎಂದು ಪುಷ್ಯ ಪುನರ್ವಸುವಿಗೆ ಹೇಳುತ್ತಾರಂತೆ. ಪುಷ್ಯ ಮಳೆ ಹೆಚ್ಚು ಬಂದರೆ ಬೆಳೆಗಳಿಗೆ ಹುಳು ಬೀಳುತ್ತೆ ಎಂಬುದು ದ.ಕ. ಜಿಲ್ಲೆಯವರ ನಂಬಿಕೆ. ಇದು ಫಸಲಿಗೆ ವಿಪುಲತೆಯನ್ನು ತಂದುಕೊಡುತ್ತದೆನ್ನುವ ನಂಬಿಕೆ ಹಲವು ಕಡೇಲಿದೆ. 'ಅಸಲೆ ಮಳೆಗೆ ನೆಲವೆಲ್ಲ ಹಸಲೆ'. 'ಅಸಲೆ ಬಿದ್ದರೆ ಭೂಮಿಯೆಲ್ಲ ಹಸಿರು', 'ಅಸಲೆ ಮಳೆ ಕೈಕೊಟ್ಟು ಮೀಸಲಾಯ್ತು ಬೆಳೆ', 'ಅಸ್ಲಿ ಮಳೆಗೆ ಅಸಲು ಬಡ್ಡಿ ಕೂಡೇ ಬರ್ತಾವ' ಎಂಬಂಥ ಗಾದೆಗಳೆಲ್ಲ ಇದನ್ನೇ ಹೇಳುತ್ತವೆ. ಈ ಮಳೆ ತಪ್ಪಿ ಹೋದರೆ ಧಾರಣೆ ಏರುತ್ತೆ ಎಂಬರ್ಥದ ಉರ್ದು ಗಾದೆ-"ಅಸಲ್ ಫಸಲ್ ಗಯಾ, ಕಮ್‌ಜೋರ್ ಚಡ್‌ಗಯಾ" ಎಂಬ ಗಾದೆಯೂ ಇದೆ.

ಹತ್ತನೇ ಮಳೆಯೇ ಮಗೆ ಮಖೆ. ಇದು ಎಷ್ಟು ಹೊಯ್ದರೂ ಒಳ್ಳೆಯದೇ ಎಂಬ ನಂಬಿಕೆ ನಾಡಿನ ಎಲ್ಲ ಕಡೆ ಇರುವಂತೆ ಕಾಣುತ್ತದೆ. "ಮಗೆ ಮಳೆ ಹುಯ್ದ್ರೆ ಕೇಡಲ್ಲ". "ಮನೆ ಮಗ ಉಂಡ್ರೆ ಕೇಡಲ್ಲ". "ಮಗೆ ಮಳೆ ಹುಯ್ದ್ರೆ ಮಗೆ ಗಾತ್ರ ತೆನೆ", "ಮಗಾ ಮಳಿ ಬಿದ್ದರ, ಮುಗಿಲೆ ನೀರು ಸುರುವಿದಾಂಗ" - ಇತ್ಯಾದಿ ಗಾದೆಗಳು ಈ ನಂಬಿಕೆಗೆ ಸಾಕ್ಷಿಗಳಾಗಿವೆ. ಮಘ ಪಂಚಕದ ಕೊನೇ ಮಳೆ ಇದು.

ಹುಬ್ಬೆ ಮಳೆ ಬಗ್ಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತೆರನ ನಂಬಿಕೆಗಳಿವೆ. ಕರಾವಳಿ ಜಿಲ್ಲೆಗಳಲ್ಲಿ 'ಈ ಮಳೆ ಬೆಳೆಗೆ ಒಳ್ಳೆಯದು' ಎಂಬ ನಂಬಿಕೆ ಇದ್ದರೆ, ಧಾರವಾಡ ಜಿಲ್ಲೆಯಲ್ಲಿ ಈ ಮಳೆಯಿಂದ ಗುಬ್ಬಿಗಳು ಸಾಯುತ್ತವೆ ಎಂಬ ನಂಬಿಕೆ ಇದೆ. ಈ ಮಳೆಯ ಅವಧಿಯಲ್ಲಿ ಬಿತ್ತಿದರೆ ಏನೂ ದಕ್ಕದು ಎಂಬ ಭಾವನೆಯೂ ಇನ್ನೂ ಕೆಲವು ಕಡೆ ಇದೆ.

ಉತ್ತರೆ ಮಳೆ ಬಗ್ಗೆ -"ಉತ್ತರೆ ಬೀಳದಿದ್ರೆ ಹೆತ್ತವ್ವ ತೊರದ್ಹಾಂಗ" "ಆದರ ಉತ್ತರಿ ಆಗದಿದ್ರ ಕತ್ತರಿ", "ಉತ್ತರಿ ಮಳೆ ಬಂದರ ಕೂತಲ್ಲಿ ಕೂಳು" "ಉತ್ತರವಾನ ರಾಕುಂಟೆ ಎತ್ತರಗಂಪ" - ಈ ಎಲ್ಲಾ ಗಾದೆಗಳೂ ಈ ಮಳೆ ತುಂಬ ಅಗತ್ಯ, ಫಲದಾಯಕ ಎಂಬ ನಂಬಿಕೆಯನ್ನು ವ್ಯಕ್ತಪಡಿಸುತ್ತವೆ. ಸಾಧ್ವಿಯೊಬ್ಬರು ಗಂಡನ ಮನೆಯ ಉಪದ್ರವ

ದಿಂದಾಗಿ ಆತ್ಮಹತ್ಯೆ ಮಾಡಿಕೊಂಡು ಉತ್ತರೆ ಮಳೆಯೊಳಾ ಹೋದಳೆಂಬ ಕತೆ ಹೇಳುವ ಉತ್ತರದೇವಿ ಹಾಡುಗಳು ನಮ್ಮಲ್ಲಿ ರಾಶಿಯಾಗಿ ದೊರೆಯುತ್ತವೆ.

ಹೀಗೆ ವಿವಿಧ ಮಳೆಗಳ ಬಗ್ಗೆ ರೈತರಲ್ಲಿ ಹಲವಾರು ತೆರನ ನಂಬಿಕೆಗಳಿದ್ದು ಅವು ಅವರ ಬೇಸಾಯದ ಕ್ರಮವನ್ನು ನಿರ್ಧರಿಸುತ್ತವೆ.

ಮಳೆ ಬರುವಾಗ ಶಕುನ ನೋಡುವ ಹಲವಾರು ಪದ್ಧತಿಗಳು ನಮ್ಮ ಗ್ರಾಮೀಣದಲ್ಲಿ ಬೆಳೆದು ಬಂದಿವೆ. ಒಂದು ತುಂಬಿದ ಚರಿಗೆಯ ಬಾಯಿಗೆ ಎಲೆ ಅಂಟಿಸಿ, ಅದನ್ನು ತಲೆ ಕೆಳಗಾಗಿ ಹಿಡಿದು ನಡೆಯುತ್ತಾ, ಯಾವಾಗ ಆ ಎಲೆ ಬೀಳುತ್ತೋ ಅಷ್ಟು ಕಾಲದಂತರದಲ್ಲಿ ಮಳೆ ಎಂದು ಊಹಿಸುವ ಒಂದು ವಿಧಾನ ಇದೆ. ಹರವಿದ ಜೋಳದ ವೃತ್ತದ ಮೇಲೆ ತುಂಬಿದ ಕೊಡವನ್ನಿಟ್ಟು, ಸಂಜೆ ಹೊತ್ತು ಐದು ಮಂದಿ ಮುತ್ತೈದೇರು ಅದರ ಸುತ್ತ ಕೂತು ಅದರ ಮೇಲೆ ಬೆರಳು ಅಡ್ಡವಾಗಿಟ್ಟು, ಹಾಡು ಹೇಳುತ್ತಾ ಆ ವರ್ಷ ಯಾವ ಮಳೆ ಎಂದು ಕೇಳುವುದು, ಆಗ ಕೊಡ ತಿರುಗುವುದು, ಅದು ಎಷ್ಟು ಮುಂದೆ ಹೋಗುತ್ತೋ ಎಷ್ಟು ವೇಗವಾಗಿ  ತಿರುಗುತ್ತದೆಯೋ, ಆ ಕಾಲದಂತರದಲ್ಲಿ, ಪ್ರಮಾಣದಲ್ಲಿ ಮಳೆ ಆಗುತ್ತೆ ಎಂದು ನಂಬುವುದು ಇನ್ನೊಂದು ವಿಧಾನ. ಮನುಷ್ಯನ ಮೇಲೆ ದೇವರು ದೆವ್ವವನ್ನು ಆಹ್ವಾನಿಸಿ ಮಳೆ ಶಕುನ ಕೇಳುವುದು ಬಿಜಾಪುರ ಜಿಲ್ಲೆಯ ಅನೇಕ ಕಡೆ ರೂಢಿಯಲ್ಲಿದೆ. ಬಾಯಿ ಮೇಲಾಗಿ ಹುಟ್ಟಿದವನಿಂದ ಮಳೆ ಶಕುನ ಹೇಳಿಸಿದರ ನಿಜವಾಗುತ್ತದೆನ್ನುವ ನಂಬಿಕೆ ಬಿಜಾಪುರ ಜಿಲ್ಲೆಯಲ್ಲಿಯೇ ಕೆಲವೆಡೆ ಇದೆ. ಮಳೆ ಮಾಂತ್ರಿಕರೇ ಇರುವ ಪದ್ಧತಿ ದಕ್ಷಿಣ ಆಫ್ರಿಕಾದ ಅನೇಕ ಕಡೆಗಳಲ್ಲಿದೆ. ಆದರೆ ಭಾರತದಲ್ಲಿ ಅಂಥ ರೂಢಿ ಇದ್ದಂತಿಲ್ಲ.

## 2. ಮಳೆ ಆಚರಣೆಗಳು

ಅತಿವೃಷ್ಟಿ ಅನಾವೃಷ್ಟಿಗಳ ಸಂದರ್ಭದಲ್ಲಿ ರೈತರು ಮಳೆ ನಿಲ್ಲುವಂತೆ ಅಥವಾ ಮಳೆ ಬರುವಂತೆ ಮಾಡಲು ರೈತರು ಹಲವಾರು ಬಗೆಯ ಪೂಜೆ, ವ್ರತ, ವಿಧಿಗಳನ್ನು ಆಚರಿಸುತ್ತಾರೆ. ಈ ಆಚರಣೆಗಳನ್ನೆಲ್ಲ ಈ ರೀತಿ ವರ್ಗೀಕರಿಸಬಹುದು.

**ಮಳೆ ಆಚರಣೆಗಳು :**

ಅ. ಮಳೆ ಕರೆಯುವ ಆಚರಣೆಗಳು :

1. ಸಸ್ಯಗಳನ್ನೊಳಗೊಳ್ಳುವ ಆಚರಣೆಗಳು,
2. ಪ್ರಾಣಿಗಳನ್ನೊಳಗೊಳ್ಳುವ ಆಚರಣೆಗಳು,
3. ಅನುಕರಣೆಯ ಮಳೆ ಆಚರಣೆಗಳು,
4. ಆರಾಧನಾ ವಿಧಾನದ ಮಳೆ ಆಚರಣೆಗಳು,
5. ಅಪಚಾರ ರೂಪದ ಮಳೆ ಆಚರಣೆಗಳು,
6. ಅನ್ಯವರ್ಗದ ಮಳೆ ಅಚರಣೆಗಳು.

ಬ. ಮಳೆ ತಡೆಯುವ ಆಚರಣೆಗಳು :

1. ಮಾನವರನ್ನೊಳಗೊಳ್ಳುವ ಆಚರಣೆಗಳು,
2. ಪ್ರಾರ್ಥನಾ ವಿಧಾನದ ಆಚರಣೆಗಳು,
3. ಅನುಕರಣ ವಿಧಾನದ ಆಚರಣೆಗಳು,
4. ಸಸ್ಯಗಳನ್ನೊಳಗೊಳ್ಳುವ ಆಚರಣೆಗಳು,
5. ಅನ್ಯವರ್ಗದ ಆಚರಣೆಗಳು.

ಇವುಗಳ ಪೈಕಿ ಕರ್ನಾಟಕದ ರೈತ ವರ್ಗಕ್ಕೆ ಸಂಬಂಧಿಸಿದಂಥವಕ್ಕೆ ಮಾತ್ರ ಕೆಲವು ಉದಾಹರಣೆ, ವಿವರಣೆಗಳನ್ನು ಇಲ್ಲಿ ನೋಡಬಹುದು. ಇವುಗಳೆಲ್ಲದರ ದೀರ್ಘ ವಿವರಣೆ ಅನ್ಯತ್ರ ಉಪಲಬ್ಧವಿದೆ.[1]

---

1. ಆಸಕ್ತರು ನನ್ನ 'ಮಳೆ - ಒಂದು ಅಧ್ಯಯನ' ಗ್ರಂಥ ನೋಡಬಹುದು. ಪ್ರ: ಸುಂದರ ಪುಸ್ತಕ ಪ್ರಕಾಶನ, ಧಾರವಾಡ, 1994.

## 1. ಮಳೆ ಕರೆಯುವ ಆಚರಣೆಗಳು

### (ಅ) ಸಸ್ಯಗಳನ್ನೊಳಗೊಳ್ಳುವ ಆಚರಣೆಗಳು

ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ವರ್ಗದ ಎರಡು ಆಚರಣೆಗಳನ್ನು ಮಾತ್ರ ಪ್ರಸ್ತಾಪಿಸಿದರೆ ಸಾಕು. (1) ಹಾಸನ ಜಿಲ್ಲೆಯಲ್ಲಿರುವ - ಅನಾವೃಷ್ಟಿಯ ಸಂದರ್ಭದಲ್ಲಿ ಜನ ಮೆರವಣಿಗೆಯಲ್ಲಿ ಊರಾಚೆಗೆ ಹೋಗಿ ಒಂದು ಗುಂಡಿ ತೆಗೆದು ಸಿಪ್ಪೆ ತೆಂಗಿನ ಕಾಯನ್ನು ಹಾಗೆಯೇ ಹೂಳುವುದು.- ಮಳೆ ದೇವರ (ವರುಣನ) ಕರುಣೆಯನ್ನು ಕೆದಕುವುದು ಇದರ ಉದ್ದೇಶ. (2) ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿರುವ ಪದ್ಧತಿಯಂತೆ - ಜನ ಊರ ದೇವಿಯ ಗುಡಿಯಲ್ಲಿ ಸೇರಿ ಪೂಜೆ ಸಲ್ಲಿಸಿ ನೀರಿಲ್ಲದ ತೆಂಗಿನ ಕಾಯಿಗೆ ವಿಭೂತಿ, ಕುಂಕುಮ ಹಚ್ಚಿ ದೇವಾಲಯದ ಒಂದು ಕಂಬಕ್ಕೆ ಕಟ್ಟುತ್ತಾರೆ. ಮುಂದಿನ ಐದು ದಿನಗಳಲ್ಲಿ ಅದರಲ್ಲಿ ನೀರು ಕಾಣಿಸಿಕೊಂಡರೆ ಕೆಲವೇ ದಿನಗಳಲ್ಲಿ ಅಲ್ಲಿ ಮಳೆ ಆಗುವುದೆಂದು ಜನ ನಂಬುತ್ತಾರೆ.

### (ಆ) ಪ್ರಾಣಿಗಳನ್ನೊಳಗೊಳ್ಳುವ ಆಚರಣೆಗಳು :

ಇದರಲ್ಲಿ ಕತ್ತೆ ಮೆರವಣಿಗೆ, ಕಪ್ಪೆ ಮೆರವಣಿಗೆ, ಕಪ್ಪೆ ಮದುವೆ, ಇಂಥವೆಲ್ಲ ಸೇರಿವೆ. ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆ ಬಾರದಿದ್ದಾಗ ಹಂದಿಯೊಂದನ್ನು ಕತ್ತಿನವರೆಗೂ ಜೀವಂತವಾಗಿ ಹೂಳಿ, ಅದಕ್ಕೆ ನೀರು ಕೊಡದೆ, ಅದು ಅರಚಾಡಿ ಹಾಗೇ ಪ್ರಾಣ ಬಿಡುವಂತೆ ಮಾಡುವ ಒಂದು ಪದ್ಧತಿಯೂ ಇದೆ. ಇಂಥ ಸಮಾಂತರ ಆಚರಣೆಗಳು ವಿದೇಶಗಳಲ್ಲೂ ಇವೆ. ಪ್ರಾಣಿಗಳು ಹೀಗೆ ಆಕ್ರಂದಿಸುವ ಹಾಗೆ ಮಾಡುವುದರ ಮೂಲಕ ಮಳೆದೇವರ ಕರುಣೆಯನ್ನು ಕೆದಕುವುದು ಸಾಧ್ಯವೆಂಬ ನಂಬಿಕೆಯಿಂದ ಇಂಥ ಆಚರಣೆಗಳು ಹುಟ್ಟುತ್ತವೆ ಎಂದು ಫ್ರೇಜರ್ ಅಭಿಪ್ರಾಯ ಪಡುತ್ತಾರೆ.

### (ಇ) ಅನುಕರಣೆ ವಿಧಾನದ ಮಳೆ ಕರೆ ಆಚರಣೆಗಳು :

ವಾತಾವರಣಕ್ಕೆ ನಾವು ತೇವಾಂಶವನ್ನು ಸೇರಿಸಿದರೆ, ತಂಪು ವಾತಾವರಣವೂ ಶುಷ್ಕತೆಯನ್ನು ಸೇರಿಸಿದರೆ ಒಣ ವಾತಾವರಣವೂ ನಿರ್ಮಾಣವಾಗುತ್ತದೆ ಎಂಬ ನಂಬಿಕೆಯ ಆಧಾರದ ಮೇಲೆ ರೂಪುಗೊಂಡಿರುವ ಅನೇಕ ಮಳೆ ಆಚರಣೆಗಳಿವೆ. ಇದೇ ರೀತಿ ಗುಡುಗಿನ ಶಬ್ದ ಅನುಸರಿಸಿದರೆ ಗುಡುಗಿನ ನಿಜವಾದ ವಾತಾವರಣ, ಅಂದರೆ ಮಳೆ ಬರುವ ಸನ್ನಿವೇಶ ನಿರ್ಮಾಣವಾಗುತ್ತದೆ ಎಂಬ ನಂಬಿಕೆಯ ಆಚರಣೆಗಳೂ ಹಲವಾರಿವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಬಾರದಿದ್ದಾಗ ಗ್ರಾಮದ ಜನರೆಲ್ಲಾ ಒಂದೆಡೆ ಸೇರಿ 'ಸೊರಬೋ' 'ಸೊರಬೋ' ಎಂದು ಕೂಗುವ 'ಸೊರಬು ಕರೆಯುವ' ಆಚರಣೆ ರೂಢಿಯಲ್ಲಿದೆ. ಇದು ಗುಡುಗಿನ ಶಬ್ದದ ಅನುಕರಣೆ. ಕರ್ನಾಟಕದ ಇತರ ಈ ವರ್ಗದ ಆಚರಣೆಗಳು ದೇವರ ಆರಾಧನೆಯೊಂದಿಗೆ ತಳುಕು ಹಾಕಿಕೊಂಡಿವೆ. 'ಗುರ್ಚಿಪೂಜೆ' ಇಂತಹ ಒಂದು ಆಚರಣೆ.

**(ಈ) ಆರಾಧನಾ ವಿಧಾನದ ಮಳೆ ಕರೆ ಆಚರಣೆಗಳು :**

ಉತ್ತರ ಕರ್ನಾಟಕದಲ್ಲಿ ಮಳೆ ದೇವರೆಂದು ಪ್ರಸಿದ್ಧವಾಗಿರುವ 'ಗುರ್ಚಿ'ಯ ಪೂಜೆ (ಒಂದು ರೊಟ್ಟಿ ತವೆಯನ್ನು ಬೋರಲು ಹಾಕಿ, ಅದರ ಮೇಲೆ ಸಗಣಿ ಉಂಡೆಯನ್ನು ಅಂಡಾಕಾರವಾಗಿಟ್ಟು ಅದರ ಮೇಲೆ ನಾಲ್ಕಾರು ಗರಿಕೆ ಚುಚ್ಚುತ್ತಾರೆ. ಇದೇ ಗುರ್ಚಿ), ಪುರಾಣ ವಾಚನ ಮಾಡಿಸುವುದು, ಕುಂಭಾಭಿಷೇಕ, ಪರ್ಜನ್ಯ ಜಪ, ಸಾಮಾನ್ಯವಾಗಿ ಅಲಕ್ಷಿತವಾಗಿ ಬಿದ್ದಿರುವ ದೇವರನ್ನು ಪೂಜಿಸುವುದು, ಮಳೆರಾಜನ ಪೂಜೆ, ಮಳೆ ಮಲ್ಲಪ್ಪನ ಪೂಜೆ, ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ 'ಕರಿಕಲ್ಲು ಗುಡಿ'ಗಳಲ್ಲೂ ಪೂಜೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ "ಮೂಡು ಗಣಪತಿ" ಮಾಡುವುದು - ಇವೆಲ್ಲಾ ಈ ವರ್ಗಕ್ಕೆ ಸೇರುವ ಮಳೆ ಕರೆಯುವ ಆಚರಣೆಗಳು. ಇವನ್ನು ರೈತರೂ ಸೇರಿದಂತೆ ಎಲ್ಲರೂ ನಡೆಸುತ್ತಾರೆ. ಬೆಳ್ದಿಂಗಳಪ್ಪನ ಪೂಜೆ (ದಕ್ಷಿಣ ಕರ್ನಾಟಕದಲ್ಲಿ), ಜೋಕುಮಾರನ ಪೂಜೆ (ಉತ್ತರ ಕರ್ನಾಟಕದಲ್ಲಿ)ಗಳಲ್ಲಿಯೂ ಸಹ, ಮಳೆಯ ಆಗಮನದ ಹಾರೈಕೆಯೇ ಇದೆ. ಕೊಡಗಿನಲ್ಲಿ, ಮಳೆ ಬಾರದಿದ್ದಾಗ ಅಲ್ಲಿನ ಮುಖ್ಯ ದೇವತೆಗಳಲ್ಲಿ ಒಬ್ಬನಾದ ಇಗ್ಗುತಪ್ಪನ ಪೂಜೆ ಮಾಡಿಸಲಾಗುತ್ತದೆ.

## ಉ) ಅಪಚಾರ ರೂಪದ ಮಳೆ ಆಚರಣೆಗಳು :

ದೇವರಿಗೆ ಬೇಕೆಂದೇ ಅಪಚಾರ ಮಾಡಿ, ಆ ಮೂಲಕ ಅವನ ಕೋಪವನ್ನು ಕೆರಳಿಸಿ ಮಳೆ ಸುರಿಸುವಂತೆ ಮಾಡಬಹುದೆಂಬ ನಂಬಿಕೆಯಿಂದ ರೂಪುಗೊಂಡ ಆಚರಣೆಗಳೂ ಪ್ರಪಂಚದ ಎಲ್ಲಾ ಕಡೆ ಇವೆ. ಉದಾಹರಣೆಗಳು ಇಂಥ ಸಂಪ್ರದಾಯಗಳು ಕೆಲವು ಕಡೆ ಇವೆ. ಉದಾಹರಣೆಗಳು:

1) ರಾಯಚೂರು ಜಿಲ್ಲೆಯ ಹನುಮಸಾಗರ (ಇದು ಗಜೇಂದ್ರಗಡಕ್ಕೆ ಸಮೀಪ) ಎಂಬ ಸಣ್ಣ ಊರಿನ ಸಮೀಪದಲ್ಲಿ ಕಪಲೆಪ್ಪ ಎಂಬ ಗುಡ್ಡವಿದೆ. ಇಲ್ಲೊಂದು ಸಣ್ಣ ಗುಡಿ ಇದ್ದು, ಅಲ್ಲಿ ದೇವರೆನ್ನಿಸಿಕೊಂಡಿರುವ ಒಂದು ಕಲ್ಲುಗುಂಡಿದೆ.

ಆ ಭಾಗದಲ್ಲಿ ಮಳೆ ಆಗದಿದ್ದಾಗ, ಸುತ್ತಮುತ್ತಲ ಹಳ್ಳಿಗಳ ಜನರೆಲ್ಲಾ ಸೇರಿ ಒಂದು ದಿನ ನಿಶ್ಚಯಿಸಿಕೊಂಡು ಬಂದು ಈ ಗುಂಡು ದೇವರಿಗೆ ಚೆನ್ನಾಗಿ ಬೈದು, ಗುಡಿಯಿಂದ ಹೊರತೆಗೆದು ಒದ್ದು ಗುಡಿಯಿಂದ ಕೆಳಗೆ ದೂಡಿ ಮನೆಗೆ ಮರಳುತ್ತಾರೆ.

ಹೀಗಾದ ಇಪ್ಪತ್ನಾಲ್ಕು ತಾಸುಗಳಲ್ಲೇ ಮಳೆ ಆಗುತ್ತದಂತೆ. ಅದರ ಮರುದಿನ ಆ ಹಳ್ಳಿಗರೆಲ್ಲಾ ಒಟ್ಟಾಗಿ ಸೇರಿ ವಾದ್ಯ ಸಮೇತ ಪುನಃ ಬಂದು ಒದೆಸಿಕೊಂಡು ಬಿದ್ದಿದ್ದ ಈ ಗುಂಡುದೇವರನ್ನು ಎತ್ತಿ ಸ್ನಾನ ಮಾಡಿಸಿ ಆರೈಕೆ ಮಾಡಿ, ಪುನಃ ಗುಡಿಯೊಳಗಿಟ್ಟು ವೈಭವದಿಂದ ಪೂಜಿಸಿ ಬರುತ್ತಾರೆ.[1]

2) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಧಾರೇಶ್ವರ ಎಂಬಲ್ಲಿನ ಪ್ರಸಿದ್ಧ ನರಸಿಂಹ ದೇವರ ವಿಗ್ರಹದ ಕಣ್ಣಿಗೆ, ಮಳೆ ಬರಲೆಂದು ಆಶಿಸುತ್ತಾ ಮೆಣಸಿನ ಪುಡಿಯನ್ನು ಸುರಿಯುತ್ತಾರೆ.

---

1. ಮಾಹಿತಿ - ಪ್ರೊ. ಬಿ.ಎಸ್.ಹನ್ನೆರಡುಮಠ, 'ಇಳಕಲ್'

3) ಶಿವಮೊಗ್ಗ ಜಿಲ್ಲೆಯ ಕೆಲವೆಡೆ, ಮಳೆ ಬಾರದಿದ್ದಾಗ 'ಬರಗಾಲ ಬಸಪ್ಪ'ನಿಂದ ಹಾಗಾಗಿದೆ ಎಂದು ತಿಳಿದು, ಯಾರಿಗೂ ಕಾಣದಂತೆ ರಾತ್ರಿಯಲ್ಲಿ ಅದನ್ನು ಗಡಿದಾಟಿಸಿ ಬರುವ ಪದ್ಧತಿ ಇದೆ.

ಊ) ಅನ್ಯವರ್ಗದ ಮಳೆ ಕರೆಯುವ ಆಚರಣೆಗಳು :

ಮೇಲ್ಕಂಡ ವರ್ಗಗಳಿಗೆ ಸೇರಲಾರದಂಥ ಕೆಲವು ಮಳೆ ಕರೆಯುವ ಆಚರಣೆಗಳನ್ನು ಈ ಪ್ರತ್ಯೇಕ ಗುಂಪಿಗೆ ಸೇರಿಸಬೇಕಾಗುತ್ತದೆ. ಕರ್ನಾಟಕದಲ್ಲಿ ರೂಢಿಯಲ್ಲಿರುವ ಅಂಥ ಕೆಲವಕ್ಕೆ ಉದಾಹರಣೆಗಳು.

1. **ಕರಟ ಭಿಕ್ಷೆ**- ಉತ್ತರ ಕನ್ನಡ ಜಿಲ್ಲೆಯಲ್ಲಿ ರೂಢಿಯಲ್ಲಿರುವ ಒಂದು ಸಂಪ್ರದಾಯ. ಮಳೆ ಬಾರದಿದ್ದಾಗ ಹುಡುಗರು ಕರಟ ತೆಗೆದುಕೊಂಡು ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿದರೆ ಮಳೆ ಬುರುವುದೆಂದು ನಂಬಿ ಹಾಗೆ ಮಾಡಿಸುವುದುಂಟು.

2. **ಚಿನ್ನಿದಾಂಡು ಆಟ** - ಇದೂ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಒಂದು ಸಂಪ್ರದಾಯ. ಈ ಆಟ ಆಡಿದ್ರೆ ಮಳೆ ಬರುತ್ತೆ ಎಂಬ ನಂಬಿಕೆ. ಆದ್ದರಿಂದ ಮಳೆ ಬೇಡವಾದಾಗ ಈ ಆಟ ಆಡದಂತೆ ಹಿರಿಯರು ಹುಡುಗರನ್ನು ನಿರ್ಬಂಧಿಸುತ್ತಾರೆ.

3. **ತೊಗಲು ಬೊಂಬೆ ಆಟ** - ಈ ಆಟ ಆಡಿಸಿದರೆ ಮಳೆ ಬರುವುದೆಂಬ ನಂಬಿಕೆ ಮಂಡ್ಯ ಜಿಲ್ಲೆಯಲ್ಲಿದೆ.

4. **ಜೋಡು ಹರನಾಳಿಗಿ ಪೂಜೆ** - ಹರನಾಳಿಗಿ ಎಂದರೆ ಮನೆಯ ಚಾವಣಿಯ ಮೇಲೆ ಬಿದ್ದ ಮಳೆ ನೀರು ಹೊರಗೆ ಹರಿಯಲೆಂದು ಜೋಡಿಸಿರುವ ಕೊಳವೆ. ಬಿಜಾಪುರ ಜಿಲ್ಲೆಯಲ್ಲಿ ಮಳೆ ಬಾರದಿದ್ದಾಗ ಇಂಥ ಎರಡೆರಡು ಹರನಾಳಿಗೆಗಳು ಒಟ್ಟಾಗಿ ಇರುವಂಥ ಯಾವುದಾದರೂ ಮನೆಯನ್ನು ಆರಿಸಿಕೊಂಡು ಆ ಜೋಡಿ ಹರನಾಳಿಗೆಗಳಿಗೆ ಸಾಮಾನ್ಯ ರೀತಿಯಲ್ಲಿ ಪೂಜೆ ಸಲ್ಲಿಸಿ, ಯಾವುದಾದರೂ ನೈವೇದ್ಯ ಮಾಡಿ, ಮಳೆ ಬರಲೆಂದು ಪ್ರಾರ್ಥಿಸುತ್ತಾರೆ.

5. ಆಟ್ಯಾ - ಪಾಟ್ಯಾ (ಉಪ್ಪರ ಪಟ್ಲು) ಆಟ -

ಈ ಆಟ ಆಡಿಸಿದರೆ ಮಳೆ ಬರುವುದೆಂಬ ನಂಬಿಕೆ ಕೋಲಾರ ಜಿಲ್ಲೆಯಲ್ಲಿದೆ. ಇಂತಹ ಇನ್ನೂ ಹಲವು ಬಗೆಯ ಆಚರಣೆಗಳು ಮಳೆಕರೆಯಲು ಬಳಕೆ ಯಾಗುತ್ತವೆ. ಇವುಗಳಲ್ಲಿ ಕೆಲವನ್ನು ರೈತ ಸಮುದಾಯವೇ ನಡೆಸಿದರೆ ಇನ್ನು ಕೆಲವಲ್ಲಿ ರೈತ ಗ್ರಾಮದ ಒಬ್ಬನಾಗಿ ಭಾಗವಹಿಸುತ್ತಾನೆ ಇಲ್ಲವೇ ಪ್ರೋತ್ಸಾಹಿಸುತ್ತಾನೆ.

**ಮಳೆ ತಡೆಯುವ ಆಚರಣೆಗಳು :**

ಇವುಗಳಲ್ಲಿಯೂ - ಮಾನವರನ್ನು ಒಳಗೊಳ್ಳುವ ಆಚರಣೆಗಳು, ಪ್ರಾರ್ಥನಾ ವಿಧಾನದ ಆಚರಣೆಗಳು, ಅನುಕರಣ ವಿಧಾನದ ಆಚರಣೆಗಳು, ಸಸ್ಯಗಳನ್ನೊಳಗೊಳ್ಳುವ ಆಚರಣೆಗಳು, ಹಾಗೂ ಅನ್ಯ ವರ್ಗದ ಆಚರಣೆಗಳೆಂದು ವಿಭಾಗೀಕರಣ ಮಾಡಬಹುದು. ಆದರೆ ಕರ್ನಾಟಕದಲ್ಲಿ ಮಳೆ ತಡೆಯುವ ಆಚರಣೆಗಳೇ ಕಡಮೆ. ಹಾಗಾಗಿ ಆ ವಿಭಾಗ ಕ್ರಮಕ್ಕೆ ಹೋಗದೆ ನೇರವಾಗಿ ಇಂಥ ಆಚರಣೆಗಳನ್ನು ಉದಾಹರಿಸಬಹುದು.

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ವಿಶೇಷವಾಗಿ ಜೈನರಲ್ಲಿ, ಹೊಳೆಯ ದಡದಲ್ಲಿರುವ ಮನೆಯ ಸುತ್ತ ನೀರು ಏರುತ್ತಿದ್ದಾಗ - ಎರಡು ಕುಡಿಬಾಳೆ ಎಲೆಗಳನ್ನು ಒಂದರ ಮೇಲೊಂದರಂತೆ ಇಟ್ಟು, ಅದರ ಮೇಲೆ ತುಂಬಾ ಅಕ್ಕಿ ಹಾಕಿ, ಅದರ ಮಧ್ಯೆ ಒಂದು ತೆಂಗಿನ ಕಾಯನ್ನು ಇರಿಸುತ್ತಾರೆ. ಹೂವು, ಕುಂಕುಮ, ಹರಿಸಿಣ ಎಲ್ಲ ಅದರ ಮೇಲಿಡುತ್ತಾರೆ. ಇದನ್ನು ಹೊಳೆಯಲ್ಲಿ ತೇಲಿ ಬಿಟ್ಟು ಕೈ ಮುಗಿದು ಪ್ರಾರ್ಥಿಸುತ್ತಾರೆ. ಆ ಎಲೆ ನೀರಿನ ಸೆಳವಿಗೆ ತೇಲಿ ಹೋದಂತೆಯೇ ಏರುತ್ತಿದ್ದ ನೀರೂ ಇಳಿದು ಹೋಗುತ್ತದೆ ಎಂದು ಅವರ ನಂಬಿಕೆ.

2. ಗಂಡಸರಿಬ್ಬರಲ್ಲಿ ಒಬ್ಬನು ಸ್ತ್ರೀ ವೇಷ ಧರಿಸಿ ಎಲ್ಲರೆದುರು ಶಾಸ್ತ್ರೋಕ್ತ ರೀತಿಯಲ್ಲಿ ಮದುವೆಯಾದರೆ ವರುಣ ದೇವನಿಗೆ ನಾಚಿಕೆಯಾಗಿ ಮುಖ ಮುಚ್ಚಿಕೊಳ್ಳುತ್ತಾನೆಂದು ನಂಬಿ, ಅತಿವೃಷ್ಟಿಯಾದಾಗ ಹಾಗೆ ಮಾಡುವ ಪದ್ಧತಿ ಜಮಖಂಡಿ ಭಾಗದಲ್ಲಿದೆ. ಹಾಗೆ ನಡೆದ ಒಂದು ಮದುವೆಯನ್ನು 10-10-1988ರ 'ಪ್ರಜಾವಾಣಿ' ಚಿತ್ರ ಸಹಿತ ವರದಿ ಮಾಡಿತ್ತು.

3. ಬಿಜಾಪುರ ಜಿಲ್ಲೆಯಲ್ಲಿ ಇನ್ನೂ ಒಂದು ಪದ್ಧತಿ ಇದೆ. ಅತಿವೃಷ್ಟಿಯಾಗಿ ಹೊಳೆ ತುಂಬಾ ಏರಿ ಬಂದಾಗ ಪತಿವ್ರತೆ ಮುತ್ತೈದೆಯರು ಆರತಿ ಮಾಡಿ ಪ್ರಾರ್ಥಿಸಿಕೊಂಡರ ಹೊಳೆ ಇಳಿಯುತ್ತದೆ ಎಂದು ನಂಬಿಕೆ ಇದೆ. ಇದಕ್ಕಾಗಿ ಊರಲ್ಲಿ ಡಂಗುರ ಸಾರಿ ಸುಮಂಗಲಿಯರನ್ನು ಆಹ್ವಾನಿಸಲಾಗುತ್ತದೆ.

4. ಉರಿಯುವ ಕೊಳ್ಳಿಯನ್ನು, ಅಥವಾ ಬೆಂಕಿ ಕೆಂಡವನ್ನು ಮಳೆ ಬರುತ್ತಿರುವಾಗ ಆಕಾಶದತ್ತ ಎಸೆದರೆ ಮಳೆ ಕಡಮೆಯಾಗುವುದೆಂಬ ನಂಬಿಕೆ ಕರ್ನಾಟಕದ ಅನೇಕ ಕಡೆಗಳಲ್ಲಿದೆ. ಇದು ಅನುಕರಣ ಮಾಟದ ವರ್ಗಕ್ಕೆ ಸೇರುವಂಥದು.

- ಮಳೆ ಕರೆಯುವ ಆಚರಣೆಗಳಿರುವಷ್ಟು ಮಳೆ ತಡೆ ಆಚರಣೆಗಳಿಲ್ಲ.

ಹೀಗೆ - ಮಳೆಯನ್ನು ಕುರಿತಂತೆ ಅನೇಕ ನಂಬಿಕೆಗಳೂ ಅವುಗಳ ಆಧಾರದ ಮೇಲೆ ಆಚರಣೆಗಳೂ, ಲೆಕ್ಕಾಚಾರದ, ಶಕುನ ನೋಡುವ ವಿಧಾನಗಳೂ ರೈತ ಸಮುದಾಯ ದಲ್ಲೂ ಇತರ ಜನರಲ್ಲೂ ಸಹಸ್ರಾರು ವರ್ಷಗಳಿಂದ ಬೆಳೆದಿವೆ.

ಆಧುನಿಕತೆಯ, ವಿಜ್ಞಾನದ ಪ್ರಭಾವದಿಂದ ಇದರಲ್ಲೆಷ್ಟೋ ನಶಿಸುತ್ತಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಸಾಕಷ್ಟು ಕಾಲ, ಇಪ್ಪತ್ತೊಂದನೇ ಶತಮಾನದಲ್ಲೂ ಕೂಡ ಇವು ಜನಜೀವನದಲ್ಲಿ ಮಿಳಿತವಾಗಿರುತ್ತವೆ. ಜೀವನಾಧಾರವಾದ ವಿಷಯಗಳಲ್ಲಿ ಯಾರೂ ರಿಸ್ಕ್ ತಗೆದುಕೊಳ್ಳಬಯಸುವುದಿಲ್ಲ. ಹಾಗಾಗಿ ಪೂರ್ಣ ನಂಬಿಕೆ ಇರಲಿ ಇಲ್ಲದಿರಲಿ, ಇಂಥ ಆಚರಣೆಗಳನ್ನು ಜನ ತಮ್ಮ ಸುರಕ್ಷಿತತೆಗೆಂದು ನಡೆಸುತ್ತಲೇ ಇರುತ್ತಾರೆ.

# ರೈತನ ಸಾಧನ ಸಾಮಗ್ರಿಗಳು

ಡಾ: ಎಂ.ಜಿ.ಈಶ್ವರಪ್ಪ

ರೈತನ ವ್ಯವಸಾಯದ ಬದುಕಿಗೆ ಸಾಧನ ಸಾಮಗ್ರಿಗಳು ಅತ್ಯಗತ್ಯವಾದವುಗಳು. ಉಳಲು ನೇಗಿಲು, ಹರಗಲು ಕುಂಟೆ, ಬಿತ್ತಲು ಕೂರಿಗೆ, ಸಾಲು ಮುಚ್ಚಲು ಕೊರಡು, ಎತ್ತುಗಳ ಕೊರಳಿಗೆ ಹಾಕಲು ನೊಗ, ಕೇರಲು ಮೊರ, ಹೊತ್ತೊಯ್ಯಲು ಬುಟ್ಟಿ, ಕೊಯ್ಯಲು ಕುಡುಗೋಲು, ಕತ್ತರಿಸಲು ಕೊಡಲಿ, ಧಾನ್ಯ ರಕ್ಷಿಸಲು ಕಣಜ ಹೀಗೆ ಅವನ ಸಾಧನ ಸಾಮಗ್ರಿಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವುಗಳ ಅಗತ್ಯವೆಷ್ಟೆಂಬುದನ್ನು ಮನದಟ್ಟು ಮಾಡಲು 'ಹತಾರ ಇಲ್ಲದವನು ಹೊತಾರೆ ಬಾ', 'ಮುಟ್ಟು ಇಲ್ಲಾಂತ ಮೂರು ಮನೆಗೆ ಹೋದರೆ ಕೆಟ್ಟಿತವನ ಒಕ್ಕಲತನ' ಮುಂತಾದ ಗಾದೆ ಮಾತುಗಳೇ ಸೃಷ್ಟಿಯಾಗಿವೆ. ರೈತನ ಬದುಕಿನ ಅಂಗಗಳಾಗಿರುವ ಈ ಸಾಧನ ಸಾಮಗ್ರಿಗಳು ಮಾನವನ ತಾಂತ್ರಿಕ ಆವಿಷ್ಕಾರದ ವಿಕಾಸವನ್ನೇ ಸೂಚಿಸುತ್ತಿವೆ.

ರೈತನ ವ್ಯವಸಾಯವೆಂದ ಕೂಡಲೇ ನಮ್ಮ ಕಣ್ಣೆದುರು ನಿಲ್ಲುವ ಉಪಕರಣ ನೇಗಿಲು. ವ್ಯವಸಾಯದ ಬೆಳವಣಿಗೆಯಲ್ಲಿ ಸಾಧನ ಸಾಮಗ್ರಿಗಳ ಇತಿಹಾಸ ನೋಡಿದರೆ ನೇಗಿಲು ಇತ್ತೀಚಿನದು. ವ್ಯವಸಾಯ ಹೇಗೆ ಪ್ರಾಗೈತಿಹಾಸಿಕ ಕಾಲಕ್ಕೆ ಸೇರುತ್ತದೆಯೋ ಹಾಗೆ ಉಳುಮೆ ಉಪಕರಣಗಳೂ ಸಹ ಪ್ರಾಗೈತಿಹಾಸಿಕ ಕಾಲಕ್ಕೇ ಸೇರುತ್ತವೆ. ವ್ಯವಸಾಯದ ಮೊದಲ ಹಂತದಲ್ಲಿ ಶಿಲಾಯುಗದ ಮಾನವನು ಮೊದಲು ಬಳಸಿರಬಹುದಾದ ಉಪಕರಣ ಗುಳಿದಸಿ(dibble) ಅಥವಾ ಚೂಪಾದ ಕೋಲು (Pointed stick). ಇದು ಒಂದು ಕಟ್ಟಿಗೆಯ ತುಂಡು. ಒಂದು ಕಡೆ ಚೂಪಾಗಿರುತ್ತಿತ್ತು. ಉದ್ದವಾಗಿರುತ್ತಿದ್ದ ಇದನ್ನು ಕಂದಮೂಲಗಳನ್ನು ಅಗಿಯಲು, ಮರದೊಳಗಿನ ಹಣ್ಣು ಹಂಪಲುಗಳನ್ನು ಬೀಳಿಸಲು, ಉರುವಲಿಗಾಗಿ ಒಣಗಿದ ರೆಂಬೆಗಳನ್ನು ಕೆಡವಲು ಬಳಸಲಾಗುತ್ತಿತ್ತು. ಈ ಆಯುಧವನ್ನು

ಹೆಚ್ಚಾಗಿ ಸ್ತ್ರೀಯರು ಉಪಯೋಗಿಸುತ್ತಿದ್ದರು. ಪಶುಪಾಲನೆಯ ಸಂದರ್ಭದಲ್ಲೂ ಬಳಕೆಗೆ ಬರುತ್ತಿದ್ದ ಈ ಚೂಪಾದ ಕೋಲು ರಕ್ಷಣಾತ್ಮಕ ಆಯುಧವಾಗಿ ಬಳಕೆ ಆದದ್ದೂ ಇದೆ.

ಉಪಕರಣದ ಬೆಳವಣಿಗೆಯ ಎರಡನೆಯ ಹಂತವೆಂದರೆ ಗುದ್ದಲಿ(Hoe). ಇದೊಂದು ಮುಂಭಾಗದಲ್ಲಿ ಬಾಗಿದ ಉಪಕರಣ ಅಥವಾ ಬಾಗಿದ ಮರದ ತುಂಡು. ಚೂಪಾದ ಕೋಲು ಅಗೆಯುವ ಸಾಧನವಾದರೆ ಇದು ಕಡಿಯುವಂಥದು ಮತ್ತು ಅದಕ್ಕಿಂತ ಪರಿಣಾಮಕಾರಿಯಾದುದು. ನೆಲವನ್ನು ಆಳಕ್ಕೆ ಅಗೆಯುವುದಷ್ಟೇ ಅಲ್ಲದೆ ಜೊತೆಗೆ ಮಣ್ಣನ್ನು ತಿರುವಿಹಾಕಲು ಈ ಉಪಕರಣದಿಂದ ಸಾಧ್ಯವಾಯಿತು. ಈ ಆಯುಧವೇ ಮುಂದೆ ಅಗಲವಾದ ಗುದ್ದಲಿಯಾಗಿ, ಕೊಡಲಿಯಾಗಿ ಬೆಳವಣಿಗೆ ಯಾಗಿರುವಂತೆ ತೋರುತ್ತದೆ. ಕಾಲಕ್ರಮೇಣ ಮರದ ಬಾಗಿದ ತುಂಡು ಕೆಲಸಕ್ಕೆ ಅಸಮರ್ಥ ಎನ್ನಿಸಿದಾಗ ಮುಂಭಾಗಕ್ಕೆ ಚೂಪುಗಲ್ಲುಗಳನ್ನು ಪ್ರಾಣಿಗಳ ಮೂಳೆಗಳನ್ನು ಭದ್ರವಾಗಿ ಕಟ್ಟಿ ಬಳಸಲಾಯಿತು. ಲೋಹಯುಗಕ್ಕೆ ಮನುಕುಲವು ಕಾಲಿಡುವವರೆಗೂ ಈ ಪ್ರಯತ್ನ ಸತತವಾಗಿ ನಡೆದಿರುವಂತೆ ತೋರುತ್ತದೆ. ಮರದ ತುಂಡೊಂದಕ್ಕೆ ಎಮ್ಮೆಯ ಭುಜದ ಮೂಳೆಯನ್ನೊ, ಆಮೆಯ ಚಿಪ್ಪಿನ ತುಂಡಾದ ಭಾಗವನ್ನೊ ಕಟ್ಟಿ ಗುದ್ದಲಿಯಾಗಿ ಬಳಸಿರುವ ಪ್ರಾಚೀನ ಉದಾಹರಣೆಗಳು ಸಿಕ್ಕುತ್ತವೆ. ಇವು ಸಾಧನ ಸಾಮಗ್ರಿಗಳೂ, ರಕ್ಷಣಾತ್ಮಕ ಆಯುಧಗಳಷ್ಟೇ ಅಲ್ಲದೆ ವಿನಿಮಯದ ಸಾಧನಗಳೂ ಆಗಿದ್ದುವು ಎಂಬುದನ್ನು ನಾವು ಗಮನಿಸಬೇಕಾಗಿದೆ. ಅಂದರೆ ಸಾಧನ ಸಾಮಗ್ರಿಗಳಿಗೆ ಆರ್ಥಿಕ ಮಹತ್ವವೂ ಇತ್ತು.

ಈ ವಕ್ರ ಆಕಾರದ ಮರದ ತುಂಡೇ ಮುಂದೆ ನೇಗಿಲಾಗಿ ಪರಿವರ್ತನೆಯಾಗಿದೆ. ಅದನ್ನೇ ನಿಧಾನವಾಗಿ ದೊಡ್ಡ ಅಕಾರಕ್ಕೆ ತಂದುಕೊಂಡಂತೆ ಕಾಣುತ್ತದೆ. ಈಜಿಪ್ಟಿನ ಸಂಸ್ಕೃತಿಯಲ್ಲಿ ದೊರಕುವ ಚಿತ್ರಗಳು ಮತ್ತು ಆಧಾರಗಳು ಈ ಅಂಶವನ್ನು ಸಮರ್ಥಿಸುತ್ತವೆ. ಶಿಲಾಯುಗ ಮತ್ತು ನವಶಿಲಾಯುಗದವರೆಗೆ ಮರದ ನೇಗಿಲೇ ಬಳಕೆಯಲ್ಲಿದ್ದು ಅದನ್ನು ಮನುಷ್ಯರೇ ಎಳೆದು ಉಳುಮೆ ಮಾಡುತ್ತಿದ್ದರೆಂದು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಇಂತಹ ನೇಗಿಲು ಮನುಕುಲದ ಇತಿಹಾಸದಲ್ಲಿ ಪಶುಪಾಲನೆಯ ಜೊತೆಗೆ ಬೆಳೆದು ಬಂದಿದೆ. ಉಳುಮೆಗೆ ತಯಾರಾದ ಈ ಉಪಕರಣ ಮೊದಲು ಮಾನವರಿಂದ ಎಳೆಯಲ್ಪಡುತ್ತಿದ್ದು ಕಾಲಕ್ರಮೇಣ ಮನುಷ್ಯ ಪಳಗಿಸಿದ ಕುದುರೆ, ಎತ್ತು

ಮುಂತಾದ ಪ್ರಾಣಿಗಳಿಂದ ಎಳೆಯುವಂತಾಯಿತು. ನೇಗಿಲು ಮತ್ತು ಪ್ರಾಣಿಗಳ ಸಂಯೋಜನೆಯ ಈ ವ್ಯವಸ್ಥೆ ಪುರಾತನ ಕಾಲದಿಂದ ಬಂದಿದೆ. ಮನುಷ್ಯನು ಲೋಹವನ್ನು ಕಂಡುಕೊಂಡ ಮೇಲಂತೂ ನೇಗಿಲು ಉಳಮೆಯ ಸಾರ್ಥಕ ಮತ್ತು ಸಮರ್ಥ ಏಕೈಕ ಉಪಕರಣವಾಗಿ ಮುಂದುವರಿದಿದೆ.

ಸಾಮಾನ್ಯವಾಗಿ ಎಲ್ಲ ದೇಶದ ಪುರಾಣಗಳೂ ನೇಗಿಲನ್ನು ವೈಭವೀಕರಿಸಿ ವರ್ಣಿಸಿವೆ. ಭಾರತೀಯ ಪುರಾಣಗಳ ಪ್ರಕಾರ ದೇವತೆಗಳು ಭೂಲೋಕದಿಂದ ಹರಿಕಾರನಾದ ಮನುವಿಗೆ ನೇಗಿಲು ಬಳಕೆಯನ್ನು ಹೇಳಿ ಕೊಟ್ಟರಂತೆ. ರಾಮಾಯಣದ ನಾಯಕಿಯಾದ ಸೀತೆಗೆ 'ಸೀತೆ' ಎಂದು ಹೆಸರು ಬರುವುದು ನೇಗಿಲಿನಿಂದ. ಜನಕ ಮಹಾರಾಜನು ಸಂತಾನಾರ್ಥವಾಗಿ ಯಜ್ಞ ಮಾಡಲು ಭೂಮಿಯನ್ನು ಶುದ್ಧಿಮಾಡುತ್ತಿದ್ದಾಗ ಸೀತೆಯಿಂದ ಅಂದರೆ ನೇಗಿಲಿನಿಂದ ಉತ್ತ ಭೂಮಿಯ ಸಾಲಿನಿಂದ ಹೊರಬಿದ್ದ ಕಾರಣ ಸೀತೆಯೆಂದು ಹೆಸರು ಬಂತು. ಮಹಾಭಾರತದ ಪ್ರಕಾರ ಬಲರಾಮ ನೇಗಿಲನ್ನೂ, ಕೃಷ್ಣ ಕೊಳಲನ್ನೂ ಹಿಡಿದಿದ್ದಾರೆ. ಶ್ರೀಕೃಷ್ಣನಿಗೆ ಇನ್ನೊಂದು ಹೆಸರು ಗೋಪಾಲ ಎಂದು. ಅಂದರೆ ಒಂದು ವ್ಯವಸಾಯವನ್ನೂ ಇನ್ನೊಂದು ಪಶುಪಾಲನೆಯನ್ನೂ ಸೂಚಿಸುವಂತೆ ಕಾಣುತ್ತದೆ. ನೇಗಿಲು ಮತ್ತು ಕೊಳಲು ಇವೆರಡೂ ಮಾನವನ ನಾಗರಿಕತೆಯ ವಿಕಾಸದಲ್ಲಿ ಭೌತಿಕ ಹಾಗೂ ಸೌಂದರ್ಯೋಪಾಸನೆಯ ಸಂಕೇತಗಳಾಗಿರುವಂತೆ ತೋರುತ್ತದೆ ಎಂಬ ಅಭಿಪ್ರಾಯಗಳಿದ್ದರೂ ವೇದಗಳು, ಉಪನಿಷತ್ತುಗಳು, ಸ್ಮೃತಿಗಳು ನೇಗಿಲನ್ನು ಕುರಿತು ಹಾಡಿ ಹೊಗಳಿರುವುದಲ್ಲದೆ, ಅದು ದೇವತೆಯೆಂಬಷ್ಟರ ಮಟ್ಟಿಗೆ ಕಂಡರಿಸಿವೆ.

ವ್ಯವಸಾಯದ ಸಾಧನ ಸಾಮಗ್ರಿಗಳ ಆವಿಷ್ಕಾರವು ಮನುಷ್ಯನ ಬುದ್ಧಿವಂತಿಕೆಯ ದ್ಯೋತಕ. ನೇಗಿಲಿನಂತೆಯೇ 'ಗಾಡಿ'ಯ ಶೋಧನೆಯೂ ಅವನ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ. ಗುದ್ದಲಿಯು ತದನಂತರದಲ್ಲಿ ನೇಗಿಲಾಗಿ ಬೆಳೆದಿರುವಂತೆ, ಪರ್ವತ ಪ್ರದೇಶಗಳಲ್ಲಿ ಅಥವಾ ಕಾಡುಗಳಲ್ಲಿ ವಾಸಿಸುತ್ತಿದ್ದ ಮಾನವ ಮರದ ದಿಮ್ಮಿಗಳನ್ನು ಸಾಗಿಸಲು ಉರುಳು ಪದ್ಧತಿಯನ್ನು ಕಂಡುಕೊಂಡಿರಬಹುದು. ಈ ಆಧಾರದ ಮೇಲೆ ಒರಟು ಚಕ್ರಗಳನ್ನು ರೂಪಿಸಿರುವಂತೆ ಕಾಣುತ್ತದೆ. ಮೊದಲು ಚಕ್ರಗಳ ಜೊತೆಗೆ ಮಧ್ಯದ ಮರದ ತುಂಡೂ ಸಹ ತಿರುಗುತ್ತಿತ್ತು ಎನ್ನುವ ಅಭಿಪ್ರಾಯ ಬರುವ ಅವಶೇಷಗಳು

ನಮಗೆ ದೊರಕುತ್ತವೆ. ಹರಪ್ಪ ಮೊಹೆಂಜೋದಾರೋ ಉತ್ಖನನದಲ್ಲಿ ದೊರಕಿರುವ ಚಕ್ರದ ಗಾಡಿಯೂ ಸಹ ಕ್ರಿ.ಪೂ. 3000ಕ್ಕಿಂತ ಹಿಂದಿನದು. ಟೆರ್ರಕೋಟದಿಂದ ಮಾಡಿರುವ ಈ ಮಕ್ಕಳ ಆಟಿಕೆಯ ಗಾಡಿಯಲ್ಲಿ ನೊಗವಿಲ್ಲ. ಈ ಆಟಿಕೆಯನ್ನು ಗಮನಿಸಿದರೆ ಪ್ರಯಾಣಕ್ಕೆ ಮತ್ತು ಸಾಗಣೆಗೆ ಬಳಸುತ್ತಿದ್ದುದರ ಊಹೆ ಬರುತ್ತದೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ವ್ಯವಸಾಯದ ಉಪಕರಣಗಳ ಉಲ್ಲೇಖಗಳು ವಿಪುಲವಾಗಿ ದೊರಕುತ್ತವೆ. ಕನ್ನಡದ ಮೊದಲ ಕೃತಿಯಾದ ಕವಿರಾಜಮಾರ್ಗದಲ್ಲಿ (ಕ್ರಿ.ಶ.850) ಸಮಾಜದ ನಾಲ್ಕು ವರ್ಗಗಳಲ್ಲಿ ಒಂದಾದ ಕುಟಿಯರ ಅಂದರೆ ರೈತರ ಕೆಲಸ 'ಕ್ಷೇತ್ರಕರ್ಷಣಾಂಗಳ್' ಎಂದು ವಿಧಿಸುತ್ತಾನೆ. ವಡ್ಡಾರಾಧನಕಾರನು (ಕ್ರಿ.ಶ.920) ಒಕ್ಕಲಿಗರಿಗೆ ಸಂಬಂಧಿಸಿದ ಅನೇಕ ಉಪಮೆಗಳನ್ನು ತನ್ನ ಕತೆಗಳಿಗೆ ಬಳಸಿಕೊಳ್ಳುತ್ತ 'ತನ್ನಾರಂಭದ ಕಯ್ಗಳನೂಕ್ಕು ಮಟ್ಟುಗಳ ಬಾಯಂ ಕಟ್ಟಿಯೊಕ್ಕಿಸುಗುಂ' ಎಂದು ಬರೆಯುವಲ್ಲಿ ಇಂದಿಗೂ ದನಕರುಗಳ ಬಾಯಿಗೆ ಕಟ್ಟುವ 'ಬಾಯಿಕುಕ್ಕೆ'ಯನ್ನು ದಾಖಲಿಸುತ್ತಾನೆ. ನಾಗಚಂದ್ರನು ತನ್ನ ಪಂಪರಾಮಾಯಣದಲ್ಲಿ (ಕ್ರಿ.ಶ.ಸು.1100) 'ಒಂದೇ ಕುಠಾರದಿಂದಡವಿಯಂ ಕಡಿವಂತಿರೆ ಪೋಡುಗಾಡಿನ್' ಎಂದು ಕೊಡಲಿಯನ್ನು ದಾಖಲಿಸುತ್ತಾನೆ. ಜನಜೀವನದ ಆಳವಾದ ಅರಿವುಳ್ಳ ನಯಸೇನನು (ಕ್ರಿ.ಶ.1112) ತನ್ನ ಧರ್ಮಾಮೃತದಲ್ಲಿ 'ಬಂಡಿಯ ತೀವಿದ ಜೋಳಮಂ ತೆಗೆವ ಕೋಣಂ ಮೊರಂ ತೀವಿದ ಧಾನ್ಯಮಂ ತೆಗೆಯಲಾರದೆ', 'ಮೂಗಿನೊಳುಳುವಾತಂಗೆ ನೇಗಿಲಂ ಕೊಟ್ಟರೆಂಬಂತೆ', 'ಪರರ ಮನೆಯ ಸೂಜಿಯು ಕೇಡಂ ಬಯಸುವ ಕಳ್ಳಂಗೆ ತನ್ನ ಮನೆಯ ಕುಟಿಂ ಕಟ್ಟಿದೆಂಬಂತೆ' ಮುಂತಾದ ಸಂದರ್ಭಗಳಲ್ಲಿ ಬಂಡಿ, ನೇಗಲು, ಕುಳಗಳನ್ನೂ ಉಲ್ಲೇಖ ಮಾಡುತ್ತಾನೆ. ಹೀಗೆಯೇ ಬಸವಣ್ಣ, ಕನಕದಾಸ ಮುಂತಾದವರು ರೈತನ ಸಾಧನ ಸಾಮಗ್ರಿಗಳನ್ನು ತಮ್ಮ ಅಭಿವ್ಯಕ್ತಿಯ ಸಾಮಗ್ರಿಗಳನ್ನಾಗಿ ಮಾರ್ಪಡಿಸಿ ಕೊಂಡಿರುವುದು ಕಾಣಬರುತ್ತದೆ. ವಿಶೇಷವಾಗಿ ಉಲ್ಲೇಖಿಸಬಹುದಾದುದೆಂದರೆ ಕನಕದಾಸರ 'ರಾಮಧಾನ್ಯ ಚರಿತೆ'ಯಲ್ಲಿ ಸ್ಪರ್ಧೆಯಲ್ಲಿ ವಿಜಯಿಯಾದ ರಾಗಿಗೆ ದೇವಾನು ದೇವತೆಗಳು ಕೂರಿಗೆ, ಕಣ್ಣೆ, ದಂಡೆ ಮುಂತಾದ ಸಾಧನ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡುವುದು.

ರೈತರು ತಮ್ಮ ಕಸುಬಿಗೆ ಬಳಸುವ ಸಾಧನ ಸಾಮಗ್ರಿಗಳನ್ನು ಹತಾರುಗಳು, ಮುಟ್ಟುಗಳು, ಗಳೇವುಗಳು ಮುಂತಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಅವೆಲ್ಲವನ್ನೂ ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಅವೆಲ್ಲವುಗಳಿಗೆ ಪೂಜೆ ಪುರಸ್ಕಾರ ನೆರವೇರಿಸುತ್ತಾರೆ. ಅಗೌರವದಿಂದ ಕಂಡವರನ್ನು ಲೇವಡಿ ಮಾಡುತ್ತಾರೆ. ನೇಗಿಲು, ಕುಂಟೆ, ಎಡಕುಂಟೆ, ಕೂರಿಗೆ, ಕುಳ್ಳಗೂರಿಗೆ, ಕೊರಡು, ಸಡ್ಡೆ, ನೊಗ, ಹಲುಬೆ, ಜಂತುಗುಂಟೆ ಮುಂತಾದವುಗಳು ಉಳುಮೆಯ ಉಪಕರಣಗಳಾದರೆ ; ರೋಣಗಲ್ಲು, ನೆರೆಕೋಲು, ನಾಗರಬೆತ್ತ, ಗೋರು, ಕೈಹಲುಬೆ, ಮೊರ, ತೂರುಬುಟ್ಟಿ, ಮುಳ್ಳುಗಡ್ಡಿ, ಬರಲು ಮುಂತಾದವುಗಳು ಒಕ್ಕಲು ಮಾಡುವ ಸಂದರ್ಭದ ಉಪಕರಣಗಳಾಗಿವೆ. ವಾಡೆ, ಕಣಜ, ಮೂಡೆ, ಮುಂತಾದವುಗಳು ಧಾನ್ಯ ಸಂರಕ್ಷಣೆಯ ಸಾಧನ ಸಾಮಗ್ರಿಗಳಾಗಿವೆ. ಇವುಗಳಲ್ಲಿ ನೊಗ ಮತ್ತು ನೇಗಿಲು ಪ್ರಮುಖವಾದವುಗಳು. ಈ ಪ್ರಾಮುಖ್ಯವನ್ನು 'ನೊಗ ಇದ್ದರೆ ನೇಗಿಲು, ಮಗ ಇದ್ದರೆ ತಂದೆ', 'ನೇಗಿಲು ಉತ್ತರೆ ಹೊಲ, ಹಾಲು ಇದ್ದರೆ ಗೋವು' ಮುಂತಾದ ಗಾದೆಗಳಲ್ಲಿ ಕಾಣಬಹುದು. ಉಪಕರಣಗಳಿಂದ ಉಳ ಬೇಕಾದ ರೀತಿಯನ್ನು ಇಂತಹ ಮಾತುಗಳ ಮುಖಾಂತರವೇ ಸಾಂಪ್ರದಾಯಿಕವಾಗಿ ಉಳಿಸಿರುವುದನ್ನು ಕಾಣಬಹುದು. ಉಳುಮೆ ಎನ್ನುವುದು ಆಳವಾಗಿ ಆಗಬೇಕು, ಹೊಲದ ಸುತ್ತ ಮುತ್ತ ಕ್ರಮಬದ್ಧವಾಗಿ ಅಚ್ಚುಕಟ್ಟಾಗಿ ನಡೆಯವೇಕು ತಾನೆ? ಅದಕ್ಕಾಗಿ 'ಹೊಲನ ಒತ್ತಿ ಹೊಡಿ, ಮ್ಯಾರೆ ಹತ್ತ ಬಿತ್ತು' ಎಂಬ ಮಾತನ್ನು ಪ್ರಚಲಿತವಾಗಿಸಿಕೊಂಡಿದ್ದಾರೆ. ಯಾವ ಯಾವ ಉಪಕರಣಗಳನ್ನು ಬಳಸುವಾಗ ಹೇಗೆ ಮತ್ತು ಎಷ್ಟು ಜಾಗರೂಕರಾಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಮಧ್ಯಂತರ ಬೇಸಾಯ ಮಾಡುವಾಗ ಎಳಕುಂಟೆ ಬಳಸಲಾಗುತ್ತದೆ. ಆಗ ನುರಿತ ಎತ್ತುಗಳೇ ಆಗಬೇಕು. ಬೇಸಾಯಗಾರನೂ ನುರಿತವನೇ ಆಗಿರಬೇಕು. ಅದಕ್ಕಾಗಿ 'ಎಡೆಯಗೆ ಎತ್ತು ಹೊಡಿಬಾರದು, ಅಡವ್ಯಾಗೆ ಅಡಿಕೆ ಹೊಡಿಬಾರದು, ತೌರಗೆ ಮಡದಿ ಬಿಡಬಾರದು' ಎಂಬ ಮಾತು ಮೂಡಿಬಂದಿದೆ. ಪ್ರತಿಯೊಬ್ಬ ರೈತನ ಹತ್ತಿರವೂ ಅಗತ್ಯವಾದ ಉಪಕರಣಗಳು ಇರಲೇ ಬೇಕು. 'ಇದ್ದರೆ ಕೊಡಲಾಸಲ್ಲ, ಇಲ್ಲದಿದ್ದರೆ ತಿರಿಲಾಗದು', ಯಾಕೆಂದರೆ ಹದಬೆದೆಯ ಸಂದರ್ಭದಲ್ಲಿ ಬೇರೆಯವರಿಂದ ಅವುಗಳನ್ನು ತಿರಿಯುತ್ತಾ ನಿಂತರೆ ಕೆಲಸ ಹಿಂದಾಗುತ್ತದೆ.

ಮಣ್ಣಿನ ಗುಣ ಮತ್ತು ಬೆಳೆಯ ಕ್ರಮಕ್ಕೆ ಅನುಗುಣವಾಗಿ ಸಾಧನ ಸಾಮಗ್ರಿಗಳೂ

ಭಿನ್ನವಾಗುತ್ತವೆ. ನೇಗಿಲುಗಳಲ್ಲಿ ಸಣ್ಣ ನೇಗಿಲು ಮತ್ತು ದೊಡ್ಡ ನೇಗಿಲು ಅಥವಾ ಎಷ್ಟು ಎತ್ತುಗಳನ್ನು ಹೂಡುತ್ತಾರೆಂಬ ಆಧಾರದ ಮೇಲೆ ಎರಡರ ನೇಗಿಲು, ನಾಲ್ಕರ ನೇಗಿಲು ಹೀಗೆ ಭೇದಗಳಿವೆ. ಕುಂಟೆಯಲ್ಲಿ ಸಣ್ಣಕುಂಟೆ, ದೊಡ್ಡಕುಂಟೆ(ಹಗ್ಗುಂಟೆ), ಬಳುಗುಂಟೆ, ಕಿರಿಗುಂಟೆ, ಎಡಗುಂಟೆ, ಹತ್ತಿಕುಂಟೆ ಮುಂತಾದ ವಿಧಗಳಿವೆ. ನಾಲ್ಕು ಹಲುಕು ಇರುವ ಕೂರಿಗೆಯ ಜೊತೆಗೆ ತಾಳುಗಳಿರುವ ಕೂರಿಗೆಗಳೂ ಇವೆ. ಎರಡು ತಾಳು ಕೂರಿಗೆ, ಮೂದಾಳು ಕೂರಿಗೆಗಳು ಖುಷ್ಕಿ ಪದ್ಧತಿಯಲ್ಲಿ ಬಳಕೆಯಾಗುತ್ತವೆ. ಬಿತ್ತನೆಗೆ ಕೆಲವೊಮ್ಮೆ ಸಡ್ಡೆಗಳನ್ನು ಬಳಸುತ್ತಾರೆ. ಅದರಲ್ಲಿ ಒಂಟಿ ಸಡ್ಡೆ, ಜೋಡಿ ಸಡ್ಡೆ ಎಂಬ ಎರಡು ವಿಧಗಳಿವೆ. ಸಾಲು ಹತ್ತಿರ ಹತ್ತಿರ ಆದರೆ ದೊಡ್ಡ ಹಲುಬೆ ಅಥವಾ ಮಳೆಕುಂಟೆ ಬಳಸಿ ಸರಿಮಾಡುತ್ತಾರೆ. ಎಡಕುಂಟೆಯು ಸಾಲು ಮಧ್ಯದ ಕಳೆಯನ್ನು ನಿವಾರಿಸುವುದಲ್ಲದೆ ಮಣ್ಣನ್ನು ಸಾಲುಗಳ ಪಕ್ಕಕ್ಕೆ ತಂದು ಹಾಕಿ ಬುಡ ಭದ್ರವಾಗುವಂತೆ ಮಾಡುತ್ತದೆ. ನೇಗಿಲು, ಕುಂಟೆ ಮತ್ತು ಕೂರಿಗೆಗೆ ಬಳಸುವ ನೊಗದ ಅಳತೆ ಒಂದಾದರೆ, ನಾಲ್ಕು ಐದು ಎಡಕುಂಟೆಗಳಿಗೆ ಬಳಸುವ ನೊಗವು ದೊಡ್ಡದಿರುತ್ತದೆ. ಒಕ್ಕಲು ಸಂದರ್ಭದಲ್ಲಿ ಬಳಸುವ ಉಪಕರಣಗಳು ಆಯಾ ಹಂಗಾಮಿಗೆ ತಯಾರಾಗುತ್ತವೆ. ಹಂತಿ ಹೊಡೆಯಲು ಮೇಟಿ ನೆಡುತ್ತಾರೆ. ಕೆಲವು ಶಾಶ್ವತ ಮೇಟಿಗಳೂ ಇರುತ್ತವೆ. ಹಂತಿ ಹೊಡೆಯದ ಕಡೆಗೆ ರೋಣಗಲ್ಲು ಪ್ರಧಾನವಾಗುತ್ತದೆ. ಕೋಲು, ನೆರೆಕೋಲು, ಕೈಹಲುಬೆ, ಮೊರ, ತೂರುಪುಟ್ಟಿ, ಬರಲು, ಮುಳ್ಳುಗಡ್ಡಿ ಬರಲು ಮುಂತಾದುವು ಒಕ್ಕಲು ಸಂದರ್ಭದ ಉಪಕರಣಗಳು. ತಮ್ಮ ಸುತ್ತಮುತ್ತ ದೊರಕುವ, ಲಭ್ಯವಿರುವ ಗಿಡಿ ಮರಗಳಿಂದ ಇವುಗಳನ್ನು ತಯಾರುಮಾಡಿಸಿಕೊಳ್ಳುತ್ತಾರೆ. ತಮ್ಮ ಜೊತೆಗೇ ವಾಸ ಮಾಡುವ ಬಡಗಿ ಮತ್ತು ಕಮ್ಮಾರರು ಈ ಉಪಕರಣಗಳ ನಿರ್ಮಾಣಕ್ಕೆ ಮತ್ತು ದುರಸ್ತಿಗೆ ನೆರವಾಗುತ್ತಾರೆ. ಕೆಲವು ಪ್ರಮುಖ ಸಾಧನ ಸಾಮಗ್ರಿಗಳ ನಿರ್ಮಾಣ, ಅಳತೆ, ಸ್ವರೂಪ ಮುಂತಾದವುಗಳನ್ನು ಗಮನಿಸಬಹುದು.

**ನೇಗಿಲು** : ವ್ಯವಸಾಯವು ಸ್ತ್ರೀಯಿಂದ ಪುರುಷನಿಗೆ ಹಸ್ತಾಂತರವಾಗಲು ಕಾರಣ ಕರ್ತವಾದ ಉಪಕರಣವೆಂದರೆ ನೇಗಿಲು. ಇದನ್ನು ರೈತನು ಪೂಜ್ಯಭಾವನೆಯಿಂದಲೂ ಮತ್ತು ಗೌರವದಿಂದಲೂ ಕಾಣುತ್ತಾನೆ. ಕೃಷಿ ಸಂಗ್ರಹದ ಕೃತಿಕಾರ ಪರಾಶರರ (ಕ್ರಿ.ಶ. ಸು. 500-1000) ವಿವರಣೆಯಂತೆ "ನೇಗಿಲು ಎಂಟು ಭಾಗಗಳನ್ನು ಹೊಂದಿರುತ್ತದೆ.:

ಈಸ, ಯುಗ, ನಿರ್ಯೋಲ, ನಿರ್ಯೋಲ ಪಸಿಕ, ಹಲಸ್ತೋನು, ಅಡ್ಡಚಲ್ಲ, ಸೌಲ ಮತ್ತು ಪಚ್ಚನಿ". ವರ್ತಮಾನ ಕಾಲದಲ್ಲಿಯೂ ಸಹ ನೇಗಿಲು ಎಂಟು ಭಾಗಗಳನ್ನೇ ಹೊಂದಿದೆ : ಮೇಣಿ, ಹಿಡಿಕ್ಕಿ, ಬಾಳು, ಈಚು, ಕುಳ,ಚಿಗಣೆ, ಕಿಚಡಿ ಬೆಣೆ ಮತ್ತು ಚೆಕ್ಕೆ. ಆಕಾರವು ಅಲ್ಪ ಸ್ವಲ್ಪ ಬದಲಾವಣೆಯಾಗಿರುವಂತೆ ಕಾಣುತ್ತದೆ. ಸಾಧಾರಣವಾದ ಅಳತೆ: ಮೇಣಿ - ಮೂರು ಗೇಣು, ಬಾಳು - ಮೂರು ಗೇಣು, ಕುಳ - ಮೂರು ಚೋಟು, ಚಿಗಣೆ - ಎರಡು ಇಂಚು ಮತ್ತು ಈಚು - ಆರು ಮೊಳ. ಈ ಪ್ರಮಾಣದಲ್ಲಿ ದೊಡ್ಡ ನೇಗಿಲು ಮಾಡುವುದಾದರೆ ಅಳತೆ ಹೆಚ್ಚಾಗುತ್ತದೆ. ನೇಗಿಲ ತಯಾರಿಕೆಗೆ ಸಾಧಾರಣವಾಗಿ ಗಟ್ಟಿಯಾದ ಮರವನ್ನೂ ಬಳಸಲಾಗುತ್ತದ. ಜಾಲಿ, ಬೇವು, ತುಗ್ಗಲಿ, ಹೊಂಗೆ ಮುಂತಾದ ಮರಗಳು ನೇಗಿಲು ನಿರ್ಮಾಣಕ್ಕೆ ಸೂಕ್ತ. ಇವುಗಳಲ್ಲಿ ಜಾಲಿ ಮರದಿಂದ ಮಾಡಿದ ನೇಗಿಲು ಶ್ರೇಷ್ಠ. ಏಕೆಂದರೆ ಜಾಲಿ ಮರ ಗಟ್ಟಿಯಾಗಿರುವಂಹದು. ಮತ್ತು ದೀರ್ಘಕಾಲ ಬಾಳಿಕೆ ಬರುವಂತಹದು. ಹೊಂಗೆಯಿಂದ ಮಾಡಿದ ನೇಗಿಲು ಬಳಸಿದರೆ ಕಳೆ ನಾಶವಾಗುತ್ತದೆಂಬ ನಂಬಿಕೆ.

**ಕುಂಟೆ** : ರೈತನ ವ್ಯವಸಾಯದಲ್ಲಿ ಕುಂಟೆಗೆ ಎರಡನೆಯ ಸ್ಥಾನ. ನೆಲವನ್ನು ಹಗುರಮಾಡಲು, ಹರಗಲು, ಹೆಂಟೆಗಳನ್ನು ಒಡೆಯಲು, ಸಾಲನ್ನು ಮುಚ್ಚಲು ಕುಂಟೆ ಬಳಕೆಯಾಗುತ್ತದೆ. ಇದರ ಅಂಗಗಳು : ದಿಂಡು, ಮೇಣಿ, ಹಿಡಿಕ್ಕಿ, ತಾಳು, ಬಳೆ, ಕುಡ ಮತ್ತು ಈಚು. ಸಾಧಾರಣವಾದ ಅಳತೆಯೆಂದರೆ : ಸಣ್ಣಕುಂಟೆಯಾದರೆ ದಿಂಡು - ನಾಲ್ಕು ಗೇಣು, ತಾಳು - ಎರಡು ಗೇಣು, ಮೇಣಿ - ಮೂರು ಗೇಣು, ಕುಡ - ಮೂರು ಗೇಣು ನಾಲ್ಕು ಬೆರಳು, ಬಳೆ - ಮೂರು ಇಂಚು, ಈಚುಗಳು - ಐದರಿಂದ ಆರು ಮೊಳ. ದಿಂಡು ಬಲು ಗಟ್ಟಿಯಾದ ಮರದಿಂದ ಮಾಡಿದುದೇ ಆಗಬೇಕಾಗಿರುವುದರಿಂದ ಜಾಲಿಯೇ ಶ್ರೇಷ್ಠ. ಅಳತೆಯು ಪ್ರಮಾಣಭರಿತವಾಗಿ ಜಾಸ್ತಿಯಾದರೆ ಹೆಗ್ಗುಂಟೆಯಾಗುತ್ತದೆ. ಕಡಿಮೆಯಾದರೆ ಎಡೆಕುಂಟೆ ಅಥವಾ ಹತ್ತಿಕುಂಟೆಯಾಗುತ್ತದೆ. ಈ ಉಪಕರಣ ದ್ರಾವಿಡ ಮೂಲವಾದುದೆಂದು ವಿದ್ವಾಂಸರು ಭಾವಿಸುತ್ತಾರೆ.

**ಎಡಕುಂಟೆ** : ಮಧ್ಯ ಬೇಸಾಯಕ್ಕೆ ಅತ್ಯಗತ್ಯವಾದ ಉಪಕರಣ ರಾಗಿ, ಜೋಳ, ನವಣೆ, ಸಾವೆ, ಹಾರಕ, ಕೊರಲೆ ಮುಂತಾದವುಗಳು ಗೇಣುದ್ದ ಬೆಳೆದಾಗ ಎಡಕುಂಟೆ

ಹೊಡೆಯುತ್ತಾರೆ. 'ಯಾತರ ಮುದ್ದ ಮಾಡಿದರೂ ಸಾರಿಲ್ಲದೆ ಉಣ್ತೀವ? ಅಂಗ ಯಾತರ ಬ್ಯಾಸಾಯ ಮಾಡಿದರೂ ಎಡಕುಂಟೆ ಬೇಕೇ ಬೇಕು' ಎಂಬುದಾಗಿ ರೈತರು ತಮ್ಮದೇ ಆದ ಉಪಮೆಯೊಂದಿಗೆ ಎಡಕುಂಟೆಯ ಮಹತ್ವವನ್ನು ಗುರುತಿಸಿಕೊಂಡಿದ್ದಾರೆ. ಇದನ್ನು ಕಿರುಗುಂಟೆ, ಗೇಣಿನ ಕುಂಟೆ ಎಂದೂ ಕರೆಯುತ್ತಾರೆ. ಸಾಧಾರಣ ಅಳತೆ : ದಿಂಡು - ಒಂದು ಗೇಣು ಮೂರು ಬೆರಳು, ಮೇಣಿ - ಮೂರು ಗೇಣು, ಕಬ್ಬಿಣದ ತಾಳು - ಎರಡು ಗೇಣು, ಈಚುಗಳು - ಆರರಿಂದ ಏಳು ಮೊಳ. ಜಾಲಿ ಮರದ್ದಾದರೆ ಗಟ್ಟಿ ಮುಟ್ಟಾಗಿರುತ್ತದೆ. ಎಡಕುಂಟೆಯನ್ನು ಸಮತೋಲನ ಮಾಡಲು ಮೂರು ಗೇಣಿನ ಕವೆಗೋಲೊಂದು ಬಳಕೆಯಾಗುತ್ತದೆ.

ಕೂರಿಗೆ : ಬಿತ್ತನೆಯ ಸಂದರ್ಭದಲ್ಲಿ ಕಂಬಳಿ ಗದ್ದುಗೆಯ ಮೇಲೆ ತಳಿರುತೋರಣಗಳಿಂದ ಅಲಂಕೃತವಾಗಿ ಪೂಜಿತವಾಗುವ ಉಪಕರಣವೆಂದರೆ ಕೂರಿಗೆ. ಬೇವು ಅಥವಾ ಜಾಲಿ ಮರದಿಂದ ಮಾಡಿದ ದಿಂಡನ್ನು ಹೊಂದಿರುವ ಇದಕ್ಕೆ ಕೆಳಗಡೆ ನಾಲ್ಕು ಬಿದಿರಿನ ಹಲಕುಗಳನ್ನು ಜೋಡಿಸಿರುತ್ತಾರೆ. ಹಲುಕುಗಳ ಹೆಟ್ಟೆಗಳಿಗೆ ಅಂದರೆ ರಂಧ್ರಗಳಿಗೆ ನಾಲ್ಕು ಕೊಳವೆ ಸಿಕ್ಕಿಸಿ, ಆ ಕೊಳವೆಗಳನ್ನು ಕೂರಿಗೆ ಬಟ್ಟಲು ಅಥವಾ ತಲುಬಿಗೆ ಹಗ್ಗಗಳಿಂದ ಬಲವಾಗಿ ಬಿಗಿದಿರುತ್ತಾರೆ. ಕೂರಿಗೆ ಹೊಡೆಯುವವನು ನಿಪುಣ ರೈತನೇ ಆಗಿರಬೇಕು. ಯಾಕೆಂದರೆ ಸಾಲು ನೇರವಾಗಿ ಬಂದರೆ ಮಾತ್ರ ಮುಂದಿನ ಬೇಸಾಯದ ಕೆಲಸಕ್ಕೆ ಅನುಕೂಲವಾಗುತ್ತದೆ. ಬಟ್ಟಲನ್ನೂ ಮತ್ತು ದಿಂಡನ್ನು ಸೇರಿಸುವ ಬಿದಿರು ಕೊಳವೆಗಳನ್ನು ಲಾಳಗಳೆಂದೂ ಕರೆಯಲಾಗುವುದು. ಇತ್ತೀಚೆಗೆ ಪ್ಲಾಸ್ಟಿಕ್ ಕೊಳವೆಗಳನ್ನು ಕೆಲವೆಡೆ ಬಳಸಲಾಗುತ್ತಿದೆ. ಬಟ್ಟಲು ಕಲಾತ್ಮಕವಾದ ಸೌಂದರ್ಯವನ್ನು ಪಡೆದಿರುತ್ತದೆ. ಬಡಗಿಯೊಬ್ಬನ ಕುಶಲತೆಯು ಬಟ್ಟಲಿನ ನಿರ್ಮಾಣದಲ್ಲಿ ವ್ಯಕ್ತವಾಗುತ್ತದೆ. ಕೂರಿಗೆಯ ಸಾಧಾರಣ ಅಳತೆ : ದಿಂಡು - ಮೂರು ಗೇಣು, ಮೇಣಿ - ಮೂರು ಗೇಣು, ಹಲುಕುಗಳು - ಒಂದೂವರೆ ಗೇಣು, ಲಾಳ ಅಥವಾ ಕೊಳವೆಗಳು - ಎರಡೂವರೆ ಅಡಿ. ಬೇವಿನ ಮರದಿಂದ ಮಾಡಿದ ಕೂರಿಗೆ ಶ್ರೇಷ್ಠವಾದುದು. ಕೂರಿಗೆಯ ಹಿಂದೆ ಅಥವಾ ನೇಗಿಲ ಹಿಂದೆ ಅಕ್ಕಡಿ ಕಾಳುಗಳನ್ನು ಬಿತ್ತಲು ಅಥವಾ ದಪ್ಪನೆಯ ಬೀಜಗಳನ್ನು ಬಿತ್ತಲು ಸಡ್ಡೆ ಬಳಸುತ್ತಾರೆ. ಸಡ್ಡೆಯಲ್ಲಿ ಒಂಟಿ ಸಡ್ಡೆ ಮತ್ತು ಜೋಡಿ ಸಡ್ಡೆ ಎಂದು ಎರಡು ವಿಧಗಳಿವೆ. ಕೂರಿಗೆಯ ಬಟ್ಟಲುಗಳನ್ನು ಹೇಟಗಳಿಂದ ಅಥವಾ ಚಿತ್ರಗಳಿಂದ

ಕೊಂಡು ತಂದರ ಸಣ್ಣಯ ಬಟ್ಟಲುಗಳನ್ನು ತಮ್ಮಲ್ಲೇ ಸಿಗುವ ತಗ್ಗಲಿ ಅಥವಾ ಹೊಂಗೆ ಮರಗಳಿಂದ ಸಿದ್ಧಮಾಡಿಸಿಕೊಳ್ಳುತ್ತಾರೆ.

**ಕೊರಡು** : ಬಿತ್ತನೆಯ ಸಾಲುಗಳನ್ನು ಮುಚ್ಚಲು, ಹಂಡೆಗಳನ್ನು ಒಡೆಯಲು ಹಾಳೆಗಳನ್ನು ಸಮ ಮಾಡಲು ಕೊರಡು ಬೇಕೇ ಬೇಕು. ಸಾಧಾರಣ ಅಳತೆ : ದಿಂಡು - ನಾಲ್ಕು ಮೊಳ, ಎತ್ತರ - ಒಂದು ಅಡಿಯಾಗಿರುತ್ತದ. ದಪ್ಪನೆಯ ಮರವೊಂದನ್ನು ಮಧ್ಯ ಟೊಳ್ಳು ಮಾಡಿ, ಹಿಂದೆ ಮುಂದೆ ಮತ್ತು ಮೇಲೆ ಎರಡು ಅಂಗುಲ ದಪ್ಪ ಬಿಟ್ಟಿರುತ್ತಾರ. ಮಧ್ಯಭಾಗಕ್ಕೆ ಎರಡು ಕೈ ಜೋಡಿಸಿರುತ್ತಾರ. ಕೊರಡಿನ ಕೈಗೆ ಕಟ್ಟುವ ಹಗ್ಗಗಳನ್ನು ಎತ್ತುಗಳ ಕೊರಳಿನ ನೊಗಕ್ಕೆ ಜೋಡಿಸಲಾಗುತ್ತದ. ಕೊರಡಿನ ಮಧ್ಯಭಾಗಕ್ಕೆ ಸಿಕ್ಕಿದ ಮಣ್ಣು ಅಥವಾ ಹೆಂಡೆಗಳು ಬೇರೆ ಬೇರೆ ಭಾಗಕ್ಕೆ ಬರುತ್ತದೆ ಅಥವಾ ಒಡೆದುಕೊಳ್ಳುತ್ತದೆ. ಸಾಧಾರಣವಾಗಿ ಕೊರಡನ್ನು ತೆಂಗು ಅಥವಾ ಈಚಲು ಮರದಿಂದ ಮಾಡುವುದು ವಾಡಿಕೆ. ಬೇರೆಯ ಮರಗಳಿಂದಲೂ ಮಾಡಬಹುದು.

**ನೊಗ** : ಎಲ್ಲದಕ್ಕೂ ಬೇಕಾದ ಉಪಕರಣವೆಂದರೆ ನೊಗ. ಎತ್ತಿನ ಹೆಗಲ ಮೇಲೆ ಹಾಕಬೇಕಾದುದರಿಂದ ನುಣುಪು ಬರುವ ಮರದಿಂದ ಇದನ್ನು ತಯಾರು ಮಾಡಲಾಗುತ್ತದೆ. ನಾಲ್ಕು ಮೊಳ ಇರುವ ನೊಗವನ್ನು ಸಾಧಾರಣವಾಗಿ ಆಲ, ಹಲಸು, ಗೊದ್ದ, ಮಾವು, ಅರಬೇವು, ಮುಂತಾದ ಮರಗಳಿಂದ ಮಾಡಲಾಗುತ್ತದೆ. ನೊಗದ ಆ ಕಡೆ ಈ ಕಡೆಗೆ ಎರಡೆರಡು ಹುಗಲು ಅಥವಾ ಹೆಜ್ಜೆಗಳಿರುತ್ತವೆ ಆ ಹೆಜ್ಜೆಗಳು ಪಟಗಣ್ಣೆ ಕಟ್ಟಲು ಮತ್ತು ಒತ್ತುಗುಣುಕು ಹಾಕಲು ಅನುಕೂಲಕರವಾಗಿರುತ್ತವೆ.

**ಬಂಡಿ** : ಗಾಡಿ ಎಂದೂ ಕರೆಯಿಸಿಕೊಳ್ಳುವ ಬಂಡಿಯು ಗೊಬ್ಬರ ಗೋಡು, ಹುಲ್ಲು ಮೇವು, ದವಸ ಧಾನ್ಯಗಳ ಸಾಗಣೆಗೆ ಬಳಕೆಯಾಗುವ ಶ್ರೀಮಂತ ಉಪಕರಣವಾಗಿದೆ. ತುಂಬಾ ದುಬಾರಿ ಬೆಲೆಯಾಗುವ ಈ ಉಪಕರಣವನ್ನು ಹೆಚ್ಚು ಜಮೀನಿರುವ ಶ್ರೀಮಂತರು ಮಾತ್ರ ಇಟ್ಟುಕೊಂಡಿರುತ್ತಾರ. ಕೆಲವೆಡೆ ಸಣ್ಣ ಗಾಡಿಗಳೂ ಇವೆ. ಮಿಶ್ರತಳಿಯ ಎತ್ತುಗಳು ಬಂದ ನಂತರ ದೊಡ್ಡ ಗಾಡಿ ಬಂದಿದೆ. ಗಾಡಿಯನ್ನು ತಯಾರುಮಾಡಲು ನಿಪುಣನಾದ ಬಡಗಿಯೇ ಬೇಕು. ಅದರಲ್ಲಿ ಮುಖ್ಯವಾದ ಭಾಗ

ಮಧ್ಯದ ದಪ್ಪನಾದ ಓಟಿಮರ ಅಥವಾ ಇರಚಿ. ಇರಚಿಯು ನಾಲ್ಕು ಅಡಿ ಉದ್ದವಿದ್ದು ಒಂದು ಅಡಿ ದಪ್ಪವಿರುತ್ತದೆ. ಅದರ ಮಧ್ಯಕ್ಕೆ ನಾಲ್ಕು ಅಡಿಯ ಕಬ್ಬಿಣದ ಅಚ್ಚನ್ನು ಹಿಗ್ಗಿಸಿ ಬಡಿದು ಸೇರಿಸುತ್ತಾರೆ. ಮಧ್ಯಭಾಗಕ್ಕೆ ಒಂದು ಹುಗುಲು ಮಾಡಿ ಕಬ್ಬಿಣದ ತುಂಡು ಸಿಕ್ಕಿಸುತ್ತಾರೆ. ಆ ಕಡೆ ಈ ಕಡೆಗೆ ಕೀಲು ಹಾಕಲು ಎರಡು ಹುಗುಲುಗಳಿರುತ್ತವೆ. ಒಂದು ಅಡಿ ಉದ್ದದ ಎರಡು ಕೀಲುಗಳು ಸಿದ್ಧವಾಗುತ್ತವೆ. ಅಚ್ಚು ಸಮೇತದ ಓಟಿ ಮರದಲ್ಲಿ ಮೂರು ಹುಗುಲು ಇರುವುದರಿಂದ ಗಾಡಿಯು 'ಮೂರು ಹುಗುಲಿನ ಮುಟ್ಟು' ಎಂಬ ವಿಶೇಷವಾದ ಹೆಸರನ್ನೂ ಪಡೆಯುತ್ತದೆ. ಕೀಲನ್ನು ಕಡಾಣಿ ಎಂದು ಕರೆಯುತ್ತಾರೆ. ಚಕ್ರದ ಮಧ್ಯಭಾಗ ಗುಂಬ, ಗುಂಬದ ಮಧ್ಯೆ ಹೆಜ್ಜೆ ಇದ್ದು ಎರಡೂ ಕಡೆಗೆ ಎರಡು ಬಳೆ ಹಾಕುತ್ತಾರೆ. ಗುಂಬದ ಮೇಲುಭಾಗಕ್ಕೆ ಎರಡು ಸಣ್ಣ ಹಾಗೂ ಎರಡು ದೊಡ್ಡ ಕಬ್ಬಿಣದ ಕಟ್ಟುಗಳು ಇರುತ್ತವೆ. ಗುಂಬದ ಭಾಗದಿಂದ ಹೊರಭಾಗಕ್ಕೆ ಕಾಲು ಅಥವಾ ಕೈಗಳು ಹನ್ನೆರಡು. ಇವುಗಳ ಉದ್ದ ಮೂರು ಅಡಿ. ಕಾಲುಗಳನ್ನು ವೃತ್ತಾಕಾರವಾಗಿ ಜೋಡಿಸುವವುಗಳು ಆರು ಗ್ವಾರೆಗಳು. ಮೂಕಿ ಮರ ಹದಿನೈದು ಅಡಿ ಉದ್ದವಿರುತ್ತದೆ. ಮುಂಭಾಗದಲ್ಲಿ ಒಂದೂವರೆ ಅಡಿ ಬಾಗಿರುತ್ತದೆ. ಮೂಕಿನ ಮೇಲೆ ಮುಂದೆ ಎರಡು ಅಡಿ ಮೂಕಿನ ಮಣೆ, ಒಂಬತ್ತು ಅಡಿ ಉದ್ದದ ಎರಡು ಹಾಡಿಗೆ ಅಥವಾ ಕೊಂಬುಗಳು. ಹಾಡಿಗೆಗಳನ್ನು ಬಲಕಟ್ಟು ಮಾಡಲು ಹಿಂದೆ ಮತ್ತು ಮುಂದೆ ಮೂರು ಅಡಿ ಉದ್ದದ ಎರಡು ಸಲಾಕಿಗಳು. ಹಾಡಿಗೆಗೆ ಜೋಡಿಸಲು ಎರಡು ಅಡಿ ಉದ್ದದ ನಾಲ್ಕು ಅಥವಾ ಆರು ಅಡ್ಡಗಟ್ಟಿಗಳು. ಮೇಲುಭಾಗದಲ್ಲಿ ಒಂದೊಂದು ಹಾಡಿಗೆ ಆರು ಹೆಜ್ಜೆಗಳು. ಆ ಹೆಜ್ಜೆಗಳಿಗೆ ಎರಡೂ ಕಡೆಗೆ ಮೂರು ಅಡಿ ಉದ್ದದ ಹನ್ನೆರಡು ಕಾಣಗಗಳು. ಮೂಕಿನ ಮಣೆಯ ಮೇಲೆ ಆರು ಅಡಿ ಉದ್ದದ ಎರಡು ಹೆಜ್ಜೆಗಳಿರುವ ಒಂದು ನೊಗ. ಆ ಎರಡು ಹೆಜ್ಜೆಗಳಿಗೆ ಒಂದು ಅಡಿ ಉದ್ದದ ಎರಡು ಕಣಿಕೋಲುಗಳು. ನೊಗದಿಂದ ಹಾಡಿಗೆ ಎರಡು ಸಾರ್ವೆಗಳು. ಇವು ಗಾಡಿಯ ವಿವಿಧ ಅಂಗಗಳು. ಈ ಅಂಗಗಳ ಹೆಸರು ಪ್ರಾದೇಶಿಕವಾಗಿ ಭಿನ್ನವಾಗಿದ್ದು ಅಧ್ಯಯನ ಯೋಗ್ಯವಾಗಿವೆ.

ಗಾಡಿಯಲ್ಲಿ ಗೊಬ್ಬರವನ್ನು ಹೇರಬೇಕಾದರ ಎರಡೂ ಕಡಗೆ ಅಡ್ಡತಟ್ಟಿ ಕಟ್ಟಿ ಹಿಂದೆ ಮುಂದೆ ಗುನ್ನ ಇಡುತ್ತಾರೆ ದವಸ ಧಾನ್ಯ ಸಾಗಿಸಬೇಕಾದರ ಮುಕ್ರಿ ಅಥವಾ ಗೂಡೆ ಇಡುತ್ತಾರೆ. ಹಬ್ಬ ಹರಿದಿನ ಅಥವಾ ಮದುವೆಯಂತಹ ಶುಭದ ಸಂದರ್ಭಗಳಲ್ಲಿ

ಪಾನಕದ ಹರಕೆ, ಕದಲಿ ಹರಕೆ, ಮೆರವಣಿಗೆ, ದಿಬ್ಬಣಕ್ಕೆ ಗಾಡಿಗೆ ಕಮಾನು ಕಟ್ಟಿ ಅಲಂಕಾರ ಮಾಡಿ 'ಸವಾರಿ ಬಂಕ' ಎಂದು ಕರೆದುಕೊಳ್ಳುತ್ತಾರೆ. ಗಾಡಿಯ ಕೆಲಸ ಮುಗಿದ ಮೇಲೆ ಬಿಚ್ಚಿ ಮನೆಯ ಜಗಲಿ ಮೇಲೆ ಜೋಪಾನವಾಗಿ ಇಟ್ಟಿರುತ್ತಾರೆ. ಇಡೀ ಗಾಡಿಯನ್ನು ಸಾಗುವಾನಿ ಮರದಲ್ಲಿ ಮಾಡಿಸಿದರೆ ದೀರ್ಘಬಾಳಿಕೆ ಬರುತ್ತದೆ. ಆದರೆ ದುಬಾರಿಯಾಗುವುದರಿಂದ ಇರಚಿಯನ್ನು ಜಾಲಿ ಮರದಿಂದಲೂ, ಮೂಕಿನ ಮರವನ್ನು ಮತ್ತಿ ಅಥವಾ ನಂದಿಯಿಂದಲೂ ಮಾಡಿಸಿ, ಉಳಿದ ಅಂಗಗಳಿಗೆ ಸಾಗುವಾನಿ ಬಳಸುತ್ತಾರೆ. ಗಾಡಿ ತಯಾರಾದ ಮೇಲೆ ಬಿಳಿ ಬಟ್ಟೆ ಪೂಜೆ ಮಾಡಿ, ಫಲಹಾರವನ್ನು ಸೇರಿದ ಜನರಿಗೆ ವಿತರಣೆ ಮಾಡುತ್ತಾರೆ. ನಂತರ ಗಾಡಿಯ ಬಳಕೆ ಶುರುವಾಗುತ್ತದೆ. ಇತ್ತೀಚಿಗೆ ಟೈರು ಗಾಡಿಯ ಪ್ರವೇಶವಾಗುತ್ತಿದೆ. ಎತ್ತುಗಳಿಗೆ ಅನುಕೂಲವಾಗಲೆಂದು ಗಾಲಿಗಳಿಗೆ ಬ್ರೇಕ್ ಹಾಕುವಂತಹ ವಿಧಾನದ ಆಧುನಿಕ ವಿಜ್ಞಾನಿಗಳ ಬಂಡಿ ರೈತರಿಂದ ಪುರಸ್ಕಾರ ಪಡೆದಿಲ್ಲ.

**ಹಗೇವು** : ಧಾನ್ಯ ದಾಸ್ತಾನಿನ ಸಾಧನವಾದ ಹಗೇವು ಪ್ರತಿ ಹಳ್ಳಿಗಳಲ್ಲಿಯೂ ಕಾಣಸಿಗುತ್ತವೆ. ದೊಡ್ಡ ರೈತರು ತಮ್ಮ ಧಾನ್ಯಗಳನ್ನು ನೆಲದ ಒಳಗೆ ವರ್ಷಗಟ್ಟಲೆ ಕಾಪಿಡುತ್ತಿದ್ದ ದಾಸ್ತಾನೇ ಹಗೇವು. ತಾವು ದಾಸ್ತಾನು ಮಾಡುತ್ತಿದ್ದ ದವಸ ಧಾನ್ಯಗಳ ಪ್ರಮಾಣಕ್ಕೆ ಅನುಗುಣವಾಗಿ ಹಗೇವುಗಳನ್ನು ತೆಗೆಸುತ್ತಾರೆ. ಎರಡು ಮೂರು ಹಗೇವುಗಳನ್ನು ಹೊಂದಿರುವ ಕೃಷಿಕರೂ ಇರುತ್ತಾರೆ. ಅವರ ದೃಷ್ಟಿಯಲ್ಲಿ ಹಗೇವುಗಳು ಖಾಲಿಯಾಗ ಬಾರದು. ಹಗೇವನ್ನು ತುಂಬಲು ದವಸವು ಕಣದಲ್ಲಿ ತಯಾರದರೆ ಮಾತ್ರ ಹಗೇವನ್ನು ಖಾಲಿ ಮಾಡುತ್ತಾರೆ. ಆಪತ್ ಸಂದರ್ಭದ ಯಾವತ್ತೂ ನೆಂಟ ಹಗೇವು. ಗ್ರಾಮೀಣ ಸಮಾಜ ವಾರ್ಷಿಕವಾಗಿ ಆಹಾರ ಧಾನ್ಯವನ್ನು ಪೂರೈಸಿಕೊಳ್ಳುತ್ತಿದ್ದ ಸಮರ್ಪಕ ವಿಧಾನ ಇದು. ದವಸ ಧಾನ್ಯಗಳು ಕೆಡದಂತೆ, ಮುಗ್ಗಲು ಬಾರದಂತೆಯೂ ಹಗೇವು ರಕ್ಷಿಸುತ್ತದೆ. ಇತ್ತೀಚೆಗೆ ಬೆಂಗಳೂರಿನ ಮಧ್ಯಭಾಗದಲ್ಲಿರುವ ಉಚ್ಚ ನ್ಯಾಯಾಲಯದ ಕಟ್ಟಡ ದುರಸ್ತಿ ಸಂದರ್ಭದಲ್ಲಿ ಹಗೇವು ಒಂದು ಪತ್ತೆಯಾದುದನ್ನೂ ಅದರಲ್ಲಿ ರಾಗಿ ದಾಸ್ತಾನು ಕಂಡು ಬಂದುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಅಮೂಲ್ಯವಾದ ದಾಸ್ತಾನು ಕ್ರಮದ ಈ ಹಗೇವನ್ನು ಹಲವು ಪ್ರಾಚೀನ ಕನ್ನಡ ಕವಿಗಳು ಉಲ್ಲೇಖಿಸಿದ್ದಾರೆ. ಇಳಿಯಲು ಮತ್ತು ಹತ್ತಲು ಮೆಟ್ಟಿಲುಗಳಿದ್ದ ವಿಸ್ತಾರವಾದ ಹಗೇವುಗಳ ಉಲ್ಲೇಖವೂ ದೊರಕುತ್ತದೆ.

**ಕಣಜ** : ಸಣ್ಣ ಪ್ರಮಾಣದ ದವಸ ದಾಸ್ತಾನಿನ ಸಾಧನ ಕಣಜ. ಕಣಜವನ್ನು ಕರ್ಚಿ, ಕರ್ಚಿ, ಗರ್ಚಿ, ಗರ್ಚಿ ಎಂದೂ ಕರೆಯಲಾಗುವುದು. ಬಿದಿರು ಸಿಗುವ ಕಡ ಬಿದಿರಿನಿಂದಲೂ, ಈಚಲು ಸಿಗುವ ಕಡೆ ಈಚಲಿನಿಂದಲೂ ಹೆಣೆಯುತ್ತಾರೆ. ಇವುಗಳನ್ನು ಹೆಣೆದು ಮಾರಾಟ ಮಾಡುವವರು ಮೇದಾರರು ಅಥವಾ ಕೊರಚರು. ಐದು ಚೀಲದ ಕಣಜ, ಎಂಟು ಚೀಲದ್ದು, ಹತ್ತು ಚೀಲದ್ದು ಎಂದು ಪ್ರಮಾಣಬದ್ಧವಾಗಿ ಹೆಣದು ಕೊಡುತ್ತಾರೆ. ವೃತ್ತಾಕಾರವಗಿದ್ದು ಕೆಳಗೆ ಅಗಲ ಮತ್ತು ಮೇಲೆ ಕಿರಿದಾಗಿದ್ದು ಎರಡೂ ಕಡೆಗೆ ಬಲವಾಗಿರಲು ದಂಡೆ ಕಟ್ಟಿ ಕೊಡುತ್ತಾರೆ. ರೈತರು ಸಗಣಿ ರಾಡಿಯಿಂದ ಅದನ್ನು ಬಳಿದು ಕಟ್ಟೆಯ ಮೇಲೆ, ನಡುಮನೆಯಲ್ಲಿ ತಮಗೆ ಅನುಕೂಲ ಆದ ಕಡೆ ತಳಕ್ಕೆ ಹುಲ್ಲಿನ ಗಾಬು ಹಾಕಿ ಪ್ರತಿಷ್ಠಾಪನೆ ಮಾಡಿ ದವಸ ತುಂಬಿದ ಮೇಲೆ ಹುಲ್ಲು ಹಾಕಿ ಮೇಲುಭಾಗವನ್ನು ಸಗಣಿಯಿಂದ ಮೆತ್ತುತ್ತಾರೆ. ತುಂಬುವಾಗ ಅದನ್ನು ಲಕ್ಷ್ಮಿಯೆಂದೇ ಭಾವಿಸಿ ಹೂವು ನೀರು ಹಾಕಿ ಪೂಜಿಸುತ್ತಾರೆ.

**ವಡೇವು** : ದಿನನಿತ್ಯದ ಮನೆಬಳಕೆಗೆ ಸ್ವಚ್ಛ ಮಾಡಿದ ಮತ್ತು ಸಿಪ್ಪೆ ತಗೆದ ದವಸಗಳನ್ನು  ದಾಸ್ತಾನು ಮಡಿಕೊಳ್ಳುವ ಸಾಧನವೇ ವಡೇವು ಅಥವಾ ವಾಡೇವು. ಕುಂಬಾರನಿಂದ ತಯಾರಾದ ಸುಟ್ಟ ದೊಡ್ಡ ಮಣ್ಣಿನ ಮಡಕೆಯಿದು. ಮೂರು ಅಡಿ ಎತ್ತರದಿಂದ ಹಿಡಿದು ಆರು ಏಳು ಅಡಿ ಎತ್ತರದ ಜೊತೆಗೆ ಮೂರು ನಾಲ್ಕು ಅಡಿ ಸುತ್ತಳತೆಯ ವಾಡೆಗಳು ನಮಗೆ ಕಾಣಸಿಗುತ್ತವೆ. ಕುಟ್ಟಿದ ನವಣೆ, ಸಾವೆ, ಸಜ್ಜೆ, ಭತ್ತವನ್ನೊ ಅಥವಾ ಹಿಟ್ಟು ಮಾಡಿಸಿಕೊಳ್ಳಲು ಬೇಕಾಗಿರುವ ರಾಗಿ, ಜೋಳ, ಸಜ್ಜೆ, ಕೊರಲೆಯನ್ನೊ ತುಂಬಿ ಮೇಲುಭಾಗವನ್ನು ಮೆತ್ತಿಗೆ ಹಾಕುತ್ತಾರೆ. ಕೆಳಗಡೆಯಿರುವ ರಂಧ್ರಕ್ಕೆ ತೆಂಗಿನ ಚಿಪ್ಪನ್ನು ಹಗ್ಗ ಹಾಕಿ ಆಗಾಗ ತೆಗೆಯಲು ಬರುವಂತೆ ಮಾಡಿರುತ್ತಾರೆ. ವಡೇವುಗಳನ್ನು ಮೂಲೆಗಳಲ್ಲಿ ಅಥವಾ ಅಟ್ಟದ ಮೇಲೆ ನಿಲ್ಲಿಸುವುದುಂಟು. ಮೂರು ನಾಲ್ಕು ವಡೇವುಗಳಾದರೆ ಗೋಡೆಯಂತೆ ಸಾಲಿಗೆ ನಿಲ್ಲಿಸಿ ಅದನ್ನು ಸುಡಿಗೆ ನಿಲ್ಲಿಸುವುದು ಎಂದು ಕರೆಯುತ್ತಾರೆ. ಮನೆಗಳನ್ನು ಕಟ್ಟುವ ಆಧುನಿಕತೆಯಿಂದಾಗಿ ಮತ್ತು ಪ್ಲಾಸ್ಟಿಕ್ ಡಬ್ಬಿಗಳ ಸ್ಥಳ ಪಲ್ಲಟದಿಂದ ಈಗ ಮೂಲೆಗುಂಪಾಗುತ್ತಿವೆ. ವರ್ಣಮಯವಾದ ಮತ್ತು ಅಲಂಕಾರಿಕವಾದ ವಾಡೇವುಗಳಿದ್ದುದು ತಿಳಿದು ಬರುತ್ತದೆ.

**ಅಡಕಲು** : ಅಡಿಗೆ ಮನೆಯ ಮೂಲೆಯಲ್ಲಿ ದಿನನಿತ್ಯದ ಹಿಟ್ಟು, ಬೇಳೆ, ಸಾಸುವೆ,

ಹುಣಿಸೆಹಣ್ಣು ಮುಂತಾದವುಗಳನ್ನು ಇಡುವ ಒಂದರ ಮೇಲೊಂದರ ಮಡಕೆಗಳೇ ಅಡಕಲು. ಕೆಳಗೆ ದೊಡ್ಡ ಮಡಕೆ, ನಂತರ ಪ್ರಮಾಣಬದ್ಧವಾಗಿ ಮಡಕೆಗಳು ಸಣ್ಣವಾಗುತ್ತ ಹೋಗುತ್ತವೆ. ಅಡಕಲನ್ನೇ ಅಡಕಲು ಸಾಲು, ಜೋನದ ಸಾಲು, ಜೋನ ಸಾಲು ಮುಂತಾಗಿ ಕರೆಯುತ್ತಾರೆ. ಪ್ರತಿನಿತ್ಯ ಅಡಿಗೆಗೆ ಬೇಕಾಗುವ ಸರ್ವ ಸಕಲ ಪದಾರ್ಥಗಳನ್ನು ತುಂಬಿ ಕೊಂಡಿರುತ್ತಾರೆ. ತಗಡಿನ ಡಬ್ಬಿಗಳು, ಅಲ್ಯುಮಿನಿಯಂ ಭರಣಿಗಳು, ಪ್ಲಾಸ್ಟಿಕ್ ಮತ್ತು ಸ್ಟೀಲಿನ ಡಬ್ಬಿಗಳಿಂದಾಗಿ ಅಡಕಲು ಇಂದು ಕಣ್ಮರೆಯಾಗುತ್ತಿದೆ.

**ಮೂಡೆ :** ಆರ್ಥಿಕವಾಗಿ ಹಿಂದುಳಿದವರು, ಆಯಗಾರರು ತಮ್ಮ ಕಾಳುಗಳನ್ನು ಮೂಡೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಇದೊಂದು ಹುಲ್ಲಿನಿಂದ ತಯಾರು ಮಾಡಿಕೊಳ್ಳುವ ಸಾಧನ. ಭತ್ತದ ಹುಲ್ಲು ಸಿಕ್ಕರೆ ಭತ್ತದ ಹುಲ್ಲು, ಸಿಕ್ಕದಿದ್ದರೆ ಕವಚಿ ಹುಲ್ಲಿನಿಂದ ಮೂಡೆಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ತಳಕ್ಕೆ ಭತ್ತದ ಹುಲ್ಲಿನ ಹುರಿಯನ್ನು ಇಲ್ಲವೆ ಈಚಲ ಹಗ್ಗವನ್ನು ಹಾಸಿ ಅದರ ಮೇಲೆ ಹೊಂದಿಕೆಯಾಗಿ ಹುಲ್ಲು ಹರಡಿ ಕಾಳು ಸುರುವಿ ಬಿಗಿಯಾಗಿ ಕಟ್ಟುತ್ತಾರೆ. ಐವತ್ತು ಸೇರಿನಿಂದ ಎರಡು ಚೀಲದವರೆಗೆ ರಾಗಿ, ಜೋಳ, ಸಜ್ಜೆಗಳು ಇವುಗಳಲ್ಲಿ ದಾಸ್ತಾನಾಗುತ್ತವೆ. ಕಾಳುಗಳು ಶೀತದಿಂದಾಗಲಿ, ಹುಳು ಹುಪ್ಪಟೆ ಪ್ರಾಣಿಗಳಿಂದಾಗಲಿ ತೊಂದರೆಗೊಳಗಾಗದೆ ಚೇತನವಾಗಿರುತ್ತವೆ. ಕಾಳು ಬೇಕಾದಾಗ ಬಳಸಿಕೊಂಡು ಭತ್ತದ ಹುಲ್ಲಾದರೆ ದನಕರುಗಳಿಗೆ ಹಾಕುತ್ತಾರೆ. ಕವಚಿ ಹುಲ್ಲಿನದಾದರೆ ತಿಪ್ಪೆಗೆ ಎಸೆಯುತ್ತಾರೆ. ತೊಗರಿ, ಅವರೆ, ಹೆಸರು, ಕಡಲೆ, ಅಲಸಂದಿ ಮುಂತಾದ ದ್ವಿದಳ ಧಾನ್ಯಗಳನ್ನು ಬಿತ್ತನೆಯ ಬೀಜದ ಉದ್ದೇಶವಾಗಿ ಮೂಡೆಗಳಲ್ಲಿ ಕಟ್ಟಿ ಬಣವೆಗಳಲ್ಲಿಡುವ ಪದ್ಧತಿ ಈಗಲೂ ಕೆಲವೆಡೆ ಕಂಡುಬರುತ್ತದೆ. ಹಾಗೆ ಸಂಗ್ರಹ ಮಾಡಿದ ಬಿತ್ತನೆ ಬೀಜಗಳು ಉತ್ತಮವಾಗಿ ಇರುತ್ತವೆಂದು ರೈತ ಅನುಭವದಿಂದ ಕಂಡುಕೊಂಡಿದ್ದಾನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮೂಡೆ ವ್ಯಾಪಕವಾಗಿ ಬಳಕೆಯಲ್ಲಿದೆ. ಮೂಡೆಯನ್ನು ಮುಡಿ ಎಂದು ಕರೆದು ಅದನ್ನು ಸುಂದರವಾಗಿ ಹೆಣೆಯುತ್ತಾರೆ. ಅಲ್ಲಿ ಮುಡಿ ಅಳತೆಯ ಸಾಧನವೂ ಆಗಿದೆ.

ರೈತನು ಬಳಸುವ ನೇಗಿಲು, ಕುಂಟೆ, ಕೂರಿಗೆ, ಹಲುಬೆ ಮುಂತಾದ ಪರಿಕರಣಗಳ ವಿವಿಧ ಅಂಗಗಳ ಹೆಸರು ಮತ್ತು ಬಿಡಿಯ ಹದಿನೆಂಟಕ್ಕೂ ಮಿಕ್ಕಿದ ಅಂಗಗಳ ಹೆಸರು

ನಮ್ಮ ವೃತ್ತಿ ಪದಕೋಶವನ್ನು ಸಂಪದ್ಭರಿತವಾಗಿಸುತ್ತವೆ. ವ್ಯವಸಾಯ ಸಂಬಂಧಿಯಾದ ಪದಗಳನ್ನೇ ಸಂಗ್ರಹಿಸಿ ತೆಲುಗಿನಲ್ಲಿ ಪ್ರಕಟಿಸಿರುವ 'ಮಾಂಡಲಿಕ ವೃತ್ತಿ ಪದಕೋಶ'ಗಳ ಸಂಪುಟವನ್ನು ಇಲ್ಲಿ ಸ್ಮರಿಸಬಹುದು. ವ್ಯವಸಾಯ ಕ್ಷೇತ್ರದಲ್ಲಿ ರೈತರ ಕಸುಬಿಗೆ ಬಳಕೆಯಾಗುವ ಇನ್ನಿತರ ನಾರಿನ, ಕಬ್ಬಿಣದ, ಚರ್ಮದ, ಕಲ್ಲಿನ ಮತ್ತು ಮಣ್ಣಿನ ಸಾಧನ ಸಾಮಗ್ರಿಗಳ ಪಟ್ಟಿಯನ್ನು ಸ್ಥೂಲವಾಗಿ ಹೀಗೆ ತಯಾರುಮಾಡಬಹುದು :

ಅ. ನಾರಿನ ಸಲಕರಣೆಗಳು :

1. ಎತ್ತಿನ ಹಿಡಿ ಹಗ್ಗ, 2. ಸೇದುವ ಹಗ್ಗ, 3. ಮಿಣಿ, 4. ಬಂಡಿ ಮಿಣಿ, 5. ಹೂಡುವ ಹಗ್ಗ, 6. ನಡುಕಟ್ಟು ಮಿಣಿ, 7. ಸರಗಿನ ಮಿಣಿ, 8. ಚಲ್ಲಾರದ ಮಿಣಿ, 9. ಕಪಲಿ ಮಿಣಿ, 10. ಎಡಕುಂಟೆ ಹಗ್ಗ, 11. ಕಣ್ಣಿ, 12. ಹಂತಿಕಣ್ಣಿ, 13. ಕಲ್ಲಿ, 14. ಕವಣಿ, 15. ಕಡೆಗೋಲು ಹಗ್ಗ, 16. ಹಾಗಡ, 17. ಬಗ್ಗೇಲು ಹಗ್ಗ, 18. ಗುದ್ದಿ ಕಣ್ಣಿ, 19. ಜೋಲಿ ಹಗ್ಗ, 20. ಮೂಗುದಾಣ, 21. ಮಕಾಡ, 22. ಹುರಿಚಾಲಿ, 23. ಬೊರ್ಗಿಹಗ್ಗ, 24. ಬಾರ್ ಕೋಲ್‌ಚಾಟಿ, 25. ನೇಗಲಿ ಹೂರ್ಚಿ, 26. ಪಟಗಣ್ಣಿ, 27. ಬಾಣ್ಯ, 28. ಎತ್ತಿನ ಹಣೆಕಟ್ಟು, 29. ಕೊಳ್ಳದಂಡೆ, 30. ದಂಡೆ, 31. ಜೇರು, 32. ಕುಕ್ಕೆ ಅರ್ಥಾತ್ ಬಾಯಿಕುಕ್ಕ.

ಆ. ಕಬ್ಬಿಣದ ಸಲಕರಣೆಗಳು :

1. ಹಾರೆ, 2. ಕುರ್ಪಿ, 3. ಕುಡುಗೋಲು, 4. ಕುರ್ಚಿಗೆ, 5. ಜಿಗಳಿ, 6. ಕುಳ 7. ತಾಳು, 8. ಮೊಳೆ, 9. ಪಿಕಾಸಿ, 10. ಸಲಿಕೆ, 11. ಗುದ್ದಲಿ, 12. ಸರಪಳಿ, 13. ಕುಡ, 14. ಅಚ್ಚು, 15. ಕೀಲು/ಕಡಾಣಿ, 16. ಸೇರು, 17. ಅರ, 18. ಕೊಂಬಣಸು, 19. ಸಂದೂಕ, 20. ತುಂಬಾರಿ, 21. ಅಣಸು, 22. ದೊಂದಿ, 23. ಬುಡ್ಡಿ, 24. ಈಳಿಗೆ, 25. ಕತ್ತರಿ, 26. ಕೊಡಲಿ, 27. ಬಾಚಿ, 28. ಗರಗಸ, 29. ಉಳಿ, 30. ಇಕ್ಕಳ, 31 ಕುಂಡಾಸ, 32. ಕೊಪ್ಪರಿಗೆ, 33. ಜಿಗಳಿ ಕಾಟು, 34. ಬಳೆ, 35. ಮಚ್ಚು/ಕಂದಲಿ, 36. ಸುತ್ತಿಗೆ, 37. ಬರಿಗ, 38. ಸುಳಿ ಬರಿಗೆ, 39. ಕೆರೆಹಂಚು, 40. ಚುಂಚುಗ, 41. ಹಳಿ, 42. ಗುಂಬದ ಬಳೆ, 43. ಬೇಲು, 44. ಚೂರಿ, 45. ಚಾಕು, 46. ಪಾಂಡುವಾಳ.

ಇ. ಚರ್ಮದ ಸಲಕರಣೆಗಳು :

1. ಪಟಗಣ್ಣಿ, 2. ನೊಗಸುತ್ತು, 3. ಬಾರಕೋಲು, 4. ಗೆಜ್ಜೆ ಸರ, 5. ಎತ್ತಿನ ಹಡಿಹಗ್ಗ, 6. ಕೆರ/ಮೆಟ್ಟು, 7. ತೊಗಲಮಿಣಿ, 8. ಕಪಲೆ, 9. ತಿದಿ, 10. ತಿತ್ತಿ.

ಈ. ಕಲ್ಲಿನ ಸಲಕರಣೆಗಳು :

1. ದುಂಡಿ, 2. ಹಾಸುಗಲ್ಲು, 3. ರುಬ್ಬುಗಲ್ಲು/ಒಳಕಲ್ಲು, 4. ಬೀಸೆಕಲ್ಲು, 5. ರೋಣಗಲ್ಲು, 6. ಗುಂಡುಕಲ್ಲು, 7. ಕಂಬಕಲ್ಲು, 8. ಮಸಗಲ್ಲು.

ಉ. ಮಣ್ಣಿನ ಸಲಕರಣೆಗಳು :

1. ಕೈಬಟ್ಟಲು, 2. ಕುಡಿಕೆ, 3. ಪಟ್ಟಿ, 4. ಜಾಡಿ/ಜಾರು, 5. ವಾಡೇವು, 6. ಕುಂಭ, 7. ಹರವಿ, 8. ಗಡಿಗಿ, 9. ಮಗಿ, 10. ಗುಡಾಣ, 11. ಅಡಕಲು, 12. ತತ್ರಾಣಿ, 13. ಹೂಜಿ, 14. ತಟ್ಟೆ, 15. ಮಂಗಳದ ಗಡಿಗೆ, 16. ಮಸಣದ ಗಡಿಗೆ, 17. ಜಿದ್ದಿನ ಕೊಡ, 18. ಮುಸುರೆ ಬಾನಿ, 19. ಸೋರೆ, 20. ಚಟಿಗೆ, 21. ಮಡಕೆ, 22. ಪಡುಗ, 23. ಗುಗ್ಗಳ, 24. ಪಣತಿ, 25. ಕುಂಡಲ, 26. ತಾಲಿ.

ಈ ಎಲ್ಲಾ ಉಪಕರಣ ಮತ್ತು ಸಲಕರಣೆಗಳನ್ನು ರೈತನು ಗೌರವದಿಂದ ಹಾಗೂ ಭಯ ಭಕ್ತಿಯಿಂದ ಕಾಣುತ್ತಾನೆ. ಹೊಸವನ್ನು ತಯಾರು ಮಾಡಿಸಿದರೆ ಅವನ್ನು ಪೂಜಿಸಿದ ನಂತರವೇ ಬಳಕೆಗೆ ತೊಡಗಿಸುವುದು. ಅವುಗಳನ್ನು ಕಾಲಿನಿಂದ ಒದೆಯುವುದಿಲ್ಲ. ಅಕಸ್ಮಾತ್ ಅವುಗಳಿಗೆ ಕಾಲೇನಾದರೂ ತಗುಲಿದರೆ ಸಣ (ಶರಣು) ಮಾಡುತ್ತಾನೆ. ಮಕ್ಕಳು ಅವುಗಳನ್ನು ಹಾಗೆ ಒದೆಯದಂತೆ ಉಪದೇಶಿಸುತ್ತಾನೆ ಮತ್ತು ನೋಡಿಕೊಳ್ಳುತ್ತಾನೆ. ಯುಗಾದಿಯ ಹೊನ್ನಾರು ದಿವಸ, ದೀಪಾವಳಿ ದಿವಸ, ಕಾರು ಹುಣ್ಣಿಮೆಯ ಸಂದರ್ಭದಲ್ಲಿ ವಿಶೇಷವಾಗಿ ತನ್ನ ಸಾಧನ ಸಾಮಗ್ರಿಗಳನ್ನು ಪೂಜಿಸುವುದಲ್ಲದೆ ಪ್ರತಿ ಸೋಮವಾರ ಅಥವಾ ಪೂಜೆ ಮಾಡಿದ ದಿವಸ ಅವುಗಳಿಗೆ ನೀರು ಹೂವು ಮುಟ್ಟಿಸುತ್ತಾನೆ. ಅವುಗಳ ಬಳಕೆಯ ಕಾಲ ಮುಗಿಯುತ್ತಿದ್ದಂತೆಯೇ ಬಿಚ್ಚಿ ತಮ್ಮ ಮನೆಯ ಅಟ್ಟದಲ್ಲಿ ಜತನವಾಗಿ ಕಾಪಾಡಿಕೊಳ್ಳುತ್ತಾನೆ. ಅವು ಮುರಿಯಬಾರದು, ಹಾಳಾಗಬಾರದು ಎಂದು ಆಶಿಸುತ್ತಾನೆ. ಅಕಸ್ಮಾತ್ತಾಗಿ ಹಾಗೇನಾದರೂ ಮುರಿದರೆ ತನಗೆ ಮತ್ತು ತನ್ನ ಒಕ್ಕಲುತನಕ್ಕೆ ಕೇಡು

ಎಂದು ಭಾವಿಸುತ್ತಾನೆ. ಶಾಂತಿ ಉಪಶಮನಗಳ ಹಾದಿ ಹಿಡಿಯಲು ಉಪಕ್ರಮಿಸುತ್ತಾನೆ. ಈ ಭಾವನೆಗಳಿಗೆ ಅಭಿವ್ಯಕ್ತಿಯಾಗಿ ಅವನಲ್ಲಿ ಹಲವು ನಂಬಿಕೆಗಳು ಹುಟ್ಟಿಕೊಂಡಿರುವುದು ಕಂಡುಬರುತ್ತದೆ. ಅಂತಹ ಕೆಲವು ನಂಬಿಕೆಗಳನ್ನು ಹೀಗೆ ಪಟ್ಟಿ ಮಾಡಬಹುದು.

01. ನೊಗ ದಾಟಿದರ ಎತ್ತಿಗ ಹೆಗಲು ಬರುತ್ತೆ.
02. ನೊಗ ಮುರಿದರೆ ಅದನ್ನು ಮನೆಯೊಳಗಿಂದ ಬಾದಾಳಕ್ಕೆ ಎಸೆಯಬೇಕು.
03. ವ್ಯವಸಾಯದ ಮುಟ್ಟುಗಳು ಮುರಿದರೂ ಅವನ್ನು ಒಲೆಗೆ ಹಾಕಬಾರದು.
04. ಗಾಡಿಯ ನೊಗದ ಮೇಲೆ ಕಾಲಿಡಬಾರದು.
05. ಎತ್ತುಗಳು ನೊಗಸಹಿತ ಊರೊಳಗೆ ಪ್ರವೇಶಿಸಬಾರದು. ಹಾಗೆ ಪ್ರವೇಶಿಸಿದರ ಊರಿಗೆ ಕೇಡಾಗುತ್ತದೆ.
06. ನೊಗ ಹಾರೆ ಮುಂತಾದವುಗಳನ್ನು ಬಾಗಿಲಿಗೆ ತಾಕಿಸಬಾರದು.
07. ಹಾರೆ ಗುದ್ದಲಿ ಹೊತ್ತುಕೊಂಡೇ ಮನೆ ಪ್ರವೇಶಿಸಬಾರದು.
08. ಮನೆ ಬಾಗಿಲಿನಲ್ಲಿ ನೊಗ ಮುರಿಯಬಾರದು, ಮನೆಗ ಕೆಡುಕು.
09. ಉಳುಮೆ ಮಾಡುವಾಗ ನೊಗ ಮುರಿದರೆ ಬೆಳೆಗ ಕೇಡು.
10. ನೇಗಿಲ ಕುಳಕ್ಕೆ ಗೊಟ್ಟೆ ಚಿಪ್ಪು ಸಿಕ್ಕಿದರೆ ಮನೆತನಕ್ಕೆ ಕೇಡು.
11. ಹೊಸಗಾಡಿಗೆ ಪ್ರಾಣಬಲಿ ಕೊಡಬೇಕು. ಇಲ್ಲದಿದ್ದರೆ ಯಾರನ್ನಾದರೂ ಬಲಿ ತೆಗೆದುಕೊಳ್ಳುತ್ತದೆ.
12. ಗಾಡಿ ಮಾರಿದಾಗ ನೊಗ ಬಿಚ್ಚಿಕೊಳ್ಳಬೇಕು.
13. ಕೆಲಸ ಮಾಡುವಾಗ ಮಂಕರಿ ದಬ ಹಾಕಬಾರದು.
14. ಚಡಾವು ಹಾಕಿಕೊಂಡು ಕಣ ತುಳಿಯಬಾರದು
15. ಮೆಟ್ಟುಗಾಲಿನಲ್ಲಿ ತುಂಬಿದ ಹೊಲ ತುಳಿಯಬಾರದು.

ಪ್ರಾಚೀನ ಕಾಲದಿಂದಲೂ ಉಪಕರಣಗಳನ್ನು ಪವಿತ್ರ ವಸ್ತುಗಳೆಂದು ಪರಿಗಣಿಸಲಾಗಿದೆ. ಆದರಲ್ಲಿ ಮೊದಲನೆಯ ಸ್ಥಾನ ನೇಗಿಲಿಗೆ. ನೇಗಿಲನ್ನು ದುರುಪಯೋಗಪಡಿಸಿಕೊಂಡರೆ ದೊರಕುವ ಶಿಕ್ಷೆ, ಕದ್ದರೆ ವಿಧಿಸುತ್ತಿದ್ದ ಕಠಿಣಶಿಕ್ಷೆ, ನೇಗಿಲ ಕುಳಕ್ಕೆ ಬಂಗಾರದ ಹೊದಿಕೆ ಹಾಕಿ ದಾನ ಮಾಡಿದರೆ ಲಭಿಸುತ್ತಿದ್ದ ಪುಣ್ಯ ಮುಂತಾದವನ್ನು ಕುರಿತಂತ

ಜಾತಕ ಕಥೆಗಳು, ಮನುಧರ್ಮ ಶಾಸ್ತ್ರಗಳು ದೀರ್ಘವಾಗಿ ವಿವರಿಸಿವೆ. ಉಳುಮೆಯ ಸಂದರ್ಭದಲ್ಲಿ ನೇಗಿಲು ಮುರಿದರ ಮುಂಬರಲಿರುವ ಘೋರ ದುರಂತವನ್ನು ಪರಾಶರರು ವರ್ಣಿಸಿದ್ದಾರ.

ಪ್ರಸ್ತುತದಲ್ಲಿ ಇಂದು ರೈತನ ಬದುಕಿನಂತಯೇ ಅವನ ಸಾಧನ ಸಾಮಗ್ರಿಗಳೂ ತತ್ತರಿಸಿ ಹೋಗಿವೆ. ಆಧುನಿಕತೆಯಿಂದಾಗಿ ಅವು ನಲುಗಿ ಹೋಗಿವೆ. ಗಿಡಮರಗಳ ಅಭಾವದಿಂದ ಹಾಗೂ ದುಬಾರಿ ಬೆಲೆಯಿಂದ ನೇಗಿಲು, ಕುಂಟೆ, ಕೂರಿಗೆ ಮುಂತಾದುವುಗಳು ಸಾಮಾನ್ಯ ರೈತನಿಗೆ ಎಟುಕದಂತಾಗುತ್ತಿವೆ. ಟ್ರಾಕ್ಟರ್, ಟಿಲ್ಲರ್ ಮುಂತಾದುವುಗಳ ಪ್ರವೇಶ ಸಣ್ಣ ಪ್ರಮಾಣದ ರೈತರನ್ನು ಕಂಗಾಲು ಮಾಡಿವೆ. ಮರದ ಸಾಮಗ್ರಿಗಳ ಬದಲಾಗಿ ಕಬ್ಬಿಣದ ಲೋಹ ಸಾಮಗ್ರಿಗಳು ಪ್ರವೇಶವಾಗುತ್ತಿವೆ. ಯಂತ್ರಗಳ ಪರಿಚಯದಿಂದಾಗಿ ದನಕರುಗಳ ಸಂಯೋಜನೆ ವ್ಯವಸಾಯದಿಂದ ನಿಧಾನವಾಗಿ ದೂರವಾಗುವಂತೆ ಕಾಣುತ್ತದೆ. ಹಂತಿ ಹೊಡೆಯುವುದನ್ನೂ ಬಿಟ್ಟ ರೈತ, ರೋಣಗಲ್ಲು ಹೊಡೆಯಲು ತೊಡಗಿ, ಈಗ ಕಣ ಮಾಡುವುದನ್ನು ಮರೆತು ಡಾಂಬರು ರಸ್ತೆಗಳ ಮೇಲೆ ಹುಲ್ಲು ಹಾಕಿಕೊಂಡು ಹೋಗುವ ಬರುವ ವಾಹನಗಳನ್ನು ಕಾಯುತ್ತ ಕೂತಿದ್ದಾನೆ. ಸಣ್ಣ ಕರುವೊಂದು ದನಗಳೊಂದಿಗೆ ಹೊರಟಾಗ ತನ್ನ ತಾಯಿಯ ಹಾಲು ಕುಡಿಯಬಾರದೆಂದು ಅದಕ್ಕೆ ಬಾಯಿಕುಕ್ಕೆ ಕಟ್ಟುತ್ತಿದ್ದ ರೂಢಿಯಿತ್ತು. ಆ ಬಾಯಿಕುಕ್ಕೆ ಸಾಧಾರಣವಾಗಿ ಹುರಿಯಿಂದ ಮಾಡಿ ಅಥವಾ ಸುತ್ತಮುತ್ತ ಸಿಗುವ ಬಳ್ಳಿಗಳಿಂದ ಮಾಡಿದುದಾಗಿರುತ್ತಿತ್ತು. ಈಗ ನಾರು/ಪುಂಡಿ ಬೆಳೆಯಲು ಸಾಧ್ಯವಾಗದೆ ಮತ್ತು ಬಳ್ಳಿಯು ಸಿಗದೆ, ಸಿಕ್ಕುವ ಡಾಲ್ಡ ಡಬ್ಬವನ್ನೇ ದೆಬ್ಬೆ ಕಟ್ಟಿ ಬಾಯಿಕುಕ್ಕೆ ಮಾಡುವ ಪ್ರಸಂಗಗಳು ಕಾಣಸಿಕ್ಕುತ್ತವೆ. ಡಾಲ್ಡ ಡಬ್ಬವೊಂದು ಕರುವಿನ ಮುಸುಡಿಯನ್ನು ಹಾಳುಮಾಡಬಹುದು ಅಥವಾ ತಾಯಿಯ ಕೆಚ್ಚಲಿಗೆ ಬಾಯಿ ಹಾಕಿದರೆ ಕೆಚ್ಚಲಿಗೆ ಊನವಾಗಬಹುದು ಎಂಬ ಪ್ರಜ್ಞೆಯೂ ಆತನನ್ನು ಕಾಡುತ್ತಿಲ್ಲ. ಅಥವಾ ಈ ಸಂಕ್ರಮಣಾವಸ್ಥೆಯ ಸ್ಥಿತಿಯಿಂದ ಆತ ಅಸಹಾಯಕನಾಗಿದ್ದಾನೆಂದರೂ ಸರಿಯೆ.

ಸ್ಥಳೀಯ ಸಂಪನ್ಮೂಲಗಳನ್ನೆ ನೆಚ್ಚಿದ ಸಮಾಜ ರೈತ ಸಮಾಜ. ಈಗ ಅದು ನಗರ ಮುಖಿಯಾಗಿದೆ. ರೈತನಿಗೆ ಬೇಕಾಗುವ ಬೀಜ, ಗೊಬ್ಬರ ಔಷಧ ಸಾಧನ ಸಾಮಗ್ರಿ

ಗಳೆಲ್ಲವೂ ಪಟ್ಟಣಗಳಲ್ಲಿ ದೊರಕುತ್ತಿವೆ. ಅವುಗಳ ಗುಣಮಟ್ಟ ಆತನಿಗೆ ಅರಿವಾಗುತ್ತಿಲ್ಲ. ಹಾಗಾಗಿ ಅವುಗಳ ಬಾಳಿಕೆ ತಾಳಿಕೆ ಆತನಿಗೆ ಗೊತ್ತಾಗುವುದಿಲ್ಲ. ಅವನ ಇಡೀ ಬದುಕು ಪೇಟೆಯಿಂದ ನಿಯಂತ್ರಣಗೊಳ್ಳುತ್ತದೆ. ಅವನು ಏನು ಬೆಳೆಯ ಬೇಕೆಂಬುದನ್ನು ಕೃಷಿ ಇಲಾಖೆ ನಿರ್ಧರಿಸುತ್ತದೆ. ಬೆಳೆದ ಬೆಳೆಯ ಬೆಲೆಯನ್ನು ಕೃಷಿ ಮಾರುಕಟ್ಟೆಯ ದಲಾಲರು ನಿಯಂತ್ರಿಸುತ್ತಾರೆ. ತಾನು ಬೆಳೆಯುವ ದವಸ ಧಾನ್ಯಗಳು ತನ್ನ ಪ್ರದೇಶದ ದಾಸ್ತಾನು ಕ್ರಮಕ್ಕೆ ಹೊಂದದೆ ಅವುಗಳನ್ನು ಕಾಪಾಡಲು ಸಾಧ್ಯವಿಲ್ಲದ ಸ್ಥಿತಿಗೆ ಬಂದಿದ್ದಾನೆ. ಜೊತೆಗೆ ನಿಸರ್ಗದ ಮುನಿಸೂ ಅವನನ್ನು ಕಾಡುತ್ತದೆ. ಇನ್ನು ಬಹು ರಾಷ್ಟ್ರೀಯ ಕಂಪನಿಗಳು ಪ್ರವೇಶಮಾಡಿದರೆ ಅವನ ಸ್ಥಿತಿಗತಿ ಏನಾಗುತ್ತದೆ ಎನ್ನುವುದನ್ನು ಆಲೋಚಿಸಬೇಕಾಗಿದೆ.

---

ಆಕರ ಗ್ರಂಥಗಳು


1. ಕುಮುದಿನಿ ಸಿ.ಕೆ. (ಅನು) - 1987, ಪ್ರಾಚೀನ ಭಾರತದಲ್ಲಿ ಬೇಸಾಯ.
2. ಗೋವಿಂದರಾಜು ಮತ್ತು ನರಸಿಂಹೇಗೌಡ - 1978, ಪ್ರಾಚೀನ ಕೃಷಿತಂತ್ರಗಳು.
3. ರಾಜೇಗೌಡ ಹ.ಕ. - 1980, ಕರ್ನಾಟಕ ವ್ಯವಸಾಯ ಉಪಕರಣಗಳು.
4. ಶೇಷಗಿರಿರಾವ್ ಡಿ. - 1984, ಧಾನ್ಯ ಸಂರಕ್ಷಣೆ.
5. ಈಶ್ವರಪ್ಪ ಎಂ.ಜಿ. (ಡಾ) - 1985, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ.
6. Buchanan Francis - 1807, Southern India, Asiatic society.

# ರೈತನ ಸುಗ್ಗಿ ಸಂಪ್ರದಾಯ

ಡಾ: ವೀರಣ್ಣ ದಂಡೆ

ಹಂತಿಯ 'ಹಾಡುಗಳು' ಎಂದು ಕರೆಸಿಕೊಂಡವುಗಳು 'ತ್ರಿಪದಿಗಳು', ಸರ್ವಜ್ಞನ ಬಾಯಿಯಲ್ಲಿ ವಚನಗಳಾಗಿ, ಜನಪದರ ಬಾಯಿಯಲ್ಲಿ ಹಾಡುಗಳಾಗಿರುವುದೇ ತ್ರಿಪದಿಗಳ ವೈಶಿಷ್ಟ್ಯ. ಹೆಣ್ಣು ಮಕ್ಕಳ ಸಾಂಪ್ರದಾಯಿಕ ಹಾಡುಗಳಿಗೆ ಅನೇಕ ಸಲ ಹಾಡಿನ ನುಡಿಯ ಛಂದಸ್ಸಾಗಿ ತ್ರಿಪದಿ ಕಾಣಿಸುತ್ತದೆ. ಅಲ್ಲಿ ತ್ರಿಪದಿ ಗೊತ್ತಾದ ಒಂದು ಹಾಡು - ಹೇಳ ಹೊರಟ ವಿಷಯದ ಬೆಳವಣಿಗೆಯಲ್ಲಿ ಒಂದೊಂದೇ ಮೆಟ್ಟಲಾಗಿ ಪರಿಣಮಿಸುತ್ತದೆ. ಅರ್ಥಾತ್ ಹಾಡಿನ ನುಡಿಗಳಾಗಿ, ಒಂದು ಹಾಡಿನ ಭಾಗವಾಗಿ ಮಾತ್ರ ಅಲ್ಲಿ ತ್ರಿಪದಿಗಳು ಬಳಕೆಯಾಗುತ್ತವೆ.

ಆದರೆ ಜನಪದದ ಎರಡು ಸಂದರ್ಭಗಳಲ್ಲಿ ತ್ರಿಪದಿ ಸ್ವತಂತ್ರವಾಗಿ ಪ್ರಯೋಗ ಗೊಳ್ಳುತ್ತದೆ. ತಾನೇ 'ಪದ'ವೆಂದು 'ಹಾಡು'ಎಂದು ಕರೆಸಿಕೊಳ್ಳುತ್ತದೆ. ಅಲ್ಲಿ ಅದು ತನ್ನಷ್ಟಕ್ಕೆ ತಾನು ಪ್ರತ್ಯೇಕ ಅಸ್ತಿತ್ವ ಹೊಂದಿ - ಸ್ವತಂತ್ರವಾದ ಅರ್ಥ ಮತ್ತು ವಿವರಣೆಯನ್ನು ಹೊಂದಿರುತ್ತದೆ. ಅಂತಹ ಎರಡು ಸಂದರ್ಭಗಳೆಂದರೆ - ಬೀಸುವ ಸಂದರ್ಭ ಮತ್ತು ಹಂತಿಯ ಸಂದರ್ಭ. ಒಂದು ಹೆಣ್ಣು ಮಕ್ಕಳಿಗೆ ಸಂಬಂಧಪಟ್ಟ ಸಂದರ್ಭವಾದರೆ, ಇನ್ನೊಂದು ಗಂಡುಮಕ್ಕಳಿಗೆ ಸಂಬಂಧಪಟ್ಟ ಸಂದರ್ಭವಾಗಿದೆ. ಹಂತಿಯ ಸಂದರ್ಭದಲ್ಲಿ ತ್ರಿಪದಿ ಚರಿತ್ರೆ ಹೇಳುವಲ್ಲಿಯೂ ಬಳಕೆಯಾದರೂ, ಆ ಚರಿತ್ರೆಗಳು ತೀರ ಸಂಕ್ಷಿಪ್ತ ವಾಗಿರುವುದರಿಂದ ಅಲ್ಲಿಯೂ ಅವುಗಳ ಹುಟ್ಟು ಪ್ರತ್ಯೇಕ ಎನ್ನುವಷ್ಟು ಸ್ವತಂತ್ರ ವಾಗಿರುತ್ತದೆ.

ಬರೆದರೆ ಮೂರು ಸಾಲಿನ, ಹಾಡಿದರೆ ನಾಲ್ಕು ಸಾಲಿನ ಈ ತ್ರಿಪದಿ - ಜನಪದದ ಈ ಎರಡು ಸಂದರ್ಭಗಳಲ್ಲಿ ಮಾತ್ರ ಸ್ವತಂತ್ರವಾಗಿ 'ಪದ'ಗಳಂತೆ ಬಳಕೆಯಾಗುವುದು

ಚಿಂತನಾರ್ಹವಾಗಿದೆ. ಜನಪದ ಕಾವ್ಯ ಸಂದರ್ಭದ ಸೃಷ್ಟಿಯಾಗಿದ್ದು ಆ ಸಂದರ್ಭ ಒದಗಿಸುವ ವಸ್ತು, ಲಯ ಮತ್ತು ಧಾಟಿಗಳನ್ನು ಅದು ಹೊಂದಿರುತ್ತದೆ.

ಇದನ್ನು ಗಮನಿಸಿದಾಗ - ಒಂದೇ ಬಗೆಯ ಹಾಡಿನ ಅಸ್ತಿತ್ವವನ್ನು ಸೃಷ್ಟಿಸುವ ಈ ಎರಡೂ ಸಂದರ್ಭಗಳಲ್ಲಿ ರಚನೆ ಮತ್ತು ಅಂತಃಸತ್ವ (Structure and Content) ಗಳಲ್ಲಿ ಸಾಮ್ಯವಿರಲೇಬೇಕಾಗುತ್ತದೆ. ಹಾಗಿಲ್ಲದಿದ್ದರೆ - ಅಲ್ಲಿ ಬಳಕೆಯಾಗುವ ಸಾಹಿತ್ಯದ ಸ್ವರೂಪ ಒಂದೇ ಬಗೆಯಾಗಿರಲು ಸಾಧ್ಯವಿಲ್ಲ.

ಹಂತಿಹೊಡೆಯುವಾಗಿನ ಮತ್ತು ಬೀಸುವಾಗಿನ ಸಂದರ್ಭಗಳ - ಭೌತಿಕ ರಚನೆ, ಕ್ರಿಯೆ, ಅಂತಃಸತ್ವ, ಸಾಮಗ್ರಿ, ಸಮಯ ಮತ್ತು ಛಂದಸ್ಸು ಇವುಗಳಲ್ಲಿ ತೀರ ಸಾಮ್ಯವಿರುವುದು ನಮ್ಮ ಗಮನಕ್ಕೆ ಬರುತ್ತದೆ :

1. ವೃತ್ತಾಕಾರದ ರಚನೆ - ಬೀಸುವ ಕಲ್ಲು ಹಾಗೂ ಕಣದ್ದು. ಕೆಳಗಿನ ಕಲ್ಲಿಗೆ ಹತ್ತಿಕೊಂಡಿರುವ ಹೊಕ್ಕಳಗುಂಜಿ ಆಧಾರದ ಮೇಲೆ ಬೀಸುವ ಮೇಲಿನ ಕಲ್ಲು ಸಮನಾಗಿ ತಿರುಗುವುದು. ಕೆಳಗಿನ ಭೂಮಿಗೆ ನೆಟ್ಟ ಮೇಟಿ ಆಧಾರದ ಮೇಲೆಯೇ ಎತ್ತುಗಳು ಸುತ್ತಲೂ ತಿರುಗುವುದು.

2. ಎರಡೂ ಕ್ರಿಯೆಗಳು ಜೋಳಕ್ಕೆ ಸಂಬಂಧಿಸಿದವುಗಳು. ಒಂದು ತೆನೆಯಿಂದ ಜೋಳ ಬೇರ್ಪಡಿಸುವ ಕ್ರಿಯೆಯಾದರೆ ಇನ್ನೊಂದು ಕಡೆಗಾದ ಜೋಳದ ಕಾಳನ್ನು ಅರೆಯುವ ಕೆಲಸ ಮಾಡುತ್ತದೆ.

3. ಬೀಸುವ ಕಲ್ಲಿಗೆ ಮುಕ್ಕು ಹಾಕಿದಂತೆ, ಹಂತಿಯಲ್ಲಿ ರಾಗೋಲಿನಿಂದ ಮೇಲಿಂದ ಮೇಲೆ ದನದ ಕಾಲಿಗೆ ತೆನೆಗಳನ್ನು ಎಳೆಯುವ ಕೆಲಸ ನಡೆದಿರುತ್ತದೆ.

4. ಬೀಸುವ ಕ್ರಿಯೆ ನಸುಕಿನಲ್ಲಿ, ನಿಶ್ಶಬ್ದವಾದ, ಆಹ್ಲಾದಕರವಾದ ವಾತಾವರಣದಲ್ಲಿ. ಹಂತಿಯು ಬೀಸುವ ಈ ಸಮಯವನ್ನೊಳಗೊಂಡು ಇಡೀ ರಾತ್ರಿ ನಡೆಯುವಂತಹದು.

5. ಬೀಸುವ ಹಾಡಿನಲ್ಲಿ - ಕಲ್ಲು ಎಳೆಯುವ ಹೆಣ್ಣು ತನ್ನ ಬದುಕನ್ನೇ ಹಾಡಿನ ಸಂಗತಿಯಾಗಿ ಬಳಸುತ್ತಾಳೆ. ಹಂತಿ ಹಾಡಿನಲ್ಲಿ ಒಕ್ಕಲಿಗ - ತನ್ನ 'ರೈತ ಬದುಕ'ನ್ನು, ತನ್ನ ಜೋಡಿಯಾಗಿ ದುಡಿಯುವ ಬಸವಣ್ಣನ ವರ್ಣನೆಯನ್ನು ಹಾಡಿಗೆ ವಿಷಯವಾಗಿ ಹಾಡಿಗೆ ಬಳಸುತ್ತಾನೆ.

6. ಬೀಸುವ ಹಾಡು ನಡೆದಾಗ ಸಹೃದಯರ ಹಾಜರಿ ಇಲ್ಲ. ಇಲ್ಲಿಯ ಹಾಡುಗಳು ಹಾಡಿಕೊಳ್ಳುವ ಹೆಣ್ಣಿನ ಆತ್ಮ ನಿವೇದನೆಗಳಂತೆ ಕಾಣುತ್ತವೆ. ಹಂತಿಯ ಸಂದರ್ಭದಲ್ಲೂ ಇಂತಹದೇ ಪರಿಸ್ಥಿತಿ. ದೊಡ್ಡ ರಾಶಿ ಇದ್ದಲ್ಲಿ ಮಾತ್ರ ಜನ ಬಹಳ. ಅದರೆ ಸಣ್ಣ ರೈತರ ರಾಶಿಗೆ ಯಾರೂ ಇರರು. ಹಂತಿ ಹೊಡೆಯುವ ಇಬ್ಬರು, ಬಹಳವೆಂದರ ಇನ್ನಿಬ್ಬರು. ಹೀಗೆ ನಾಲ್ಕೈದು ಜನ ಅಲ್ಲಿ ಹಾಜರಿರುವುದು ಸಾಮಾನ್ಯ. ಹಿಮ್ಮೇಳದ ವ್ಯವಸ್ಥೆಯೂ ಇತ್ತೀಚೆಗೆ ಬಂದಿರಬೇಕು. ಹೀಗಾಗಿ ಹಂತಿಯ ಸಂದರ್ಭದಲ್ಲೂ ಬಳಕೆಯಾಗುವ ಹಾಡುಗಳು ಸಹೃದಯರಿಗಾಗಿ ಹುಟ್ಟಿಕೊಂಡವುಗಳಲ್ಲ. ಅವು ಕೂಡ ರೈತ ತನ್ನ ಪಾಡನ್ನು ಹೇಳಿಕೊಳ್ಳುವ ಹಾಡುಗಳೇ. ಈ ಎರಡೂ ಸಂದರ್ಭಗಳೂ ಕೇಳುಗನಿಲ್ಲದೆ ಬಳಕೆಯಾಗುವ ಹಾಡುವ ಸಂದರ್ಭಗಳಾಗಿ ಇಲ್ಲಿಯ ಹಾಡುಗಳ ಸ್ವರೂಪ ಬದಲಾಗಿರುವ ಸಾಧ್ಯತೆ ಇದೆ.

7. ಆ ಊರಿನ ಹಿರಿಕಿರಿಯ ದೇವರು, ಭೂಮಿತಾಯಿ, ಸೂರ್ಯ ಚಂದ್ರ ಹೀಗೆ ಸುಮಾರಾಗಿ ಎರಡೂ ಕಡೆ ಸ್ತುತಿಗೆ ಒಂದೇ ವಸ್ತು. ಆದುದರಿಂದ ಒಂದೇ ತ್ರಿಪದಿ - ಇಲ್ಲಿ ಎರಡೂ ಕಡೆ ಸ್ತುತಿಯ ರೂಪದಲ್ಲಿ ಬಳಕೆಯಾಗುವುದನ್ನು ಕಾಣುತ್ತೇವೆ. ಉದಾ:

ಸತ್ಯವಂತರೆಂದು ಶರಣ ಮಾಡಲಿ ಹೋದ
ಮತ್ಯಾಕ ಮಾರಿ ತಿರುವ್ಯಾರ । ಬಸವಣ್ಣ
ಮುತ್ತ ತಂದೀದ ಮಗಡಕ ॥

ಆಕಾಶದಡವ್ಯಾಗ ಧೂಪದ ಹೊಗೆ ಎದ್ದು
ಆಯ್ತು ಮಲ್ಲಯ್ಯನ ಶಿವಪೂಜಿ । ಆಗಾಗ
ಆಕಾಶದ ಘಂಟಿ ಘಳಲೆಂದು (ಗ. ಹಾ. 41)

ಅರಸಿನ ಗೋಡಿ ಗೌಡ ಉದಯ ಪೂಜೆಗ ಹೋಗಿ
ಕದನವ ಯಲ್ಲವ್ವ ಕದತಗಿಯ । ನೀಕೊಟ್ಟ
ಪುತ್ರನ ತಂದೀನಿ ಜಡಿ ಇಳವ ॥

ಎಳ್ಳ ಹೂವಿನ ಸೀರಿ ಎಲ್ಲಾ ಉಡತಾರ
ಇಲ್ಲದ ಬಡವಿ ಎಲ್ಲಮ್ಮ । ಉಟ್ಟಾಳ
ನೂರೊಂದೆಲಿಯ ಎಳಿಬೇವೊ ॥ (ಹಂ.ಹಾ. 10, 11)

8. ಹಂತಿ ಹೊಡೆಯುತ್ತ - ಬೀಸುವ ಕಲ್ಲು ಎಳೆಯುತ್ತ, ರಾಗೋಲಿನಿಂದ ತೆನೆ ಎಳಯುತ್ತ - ಕೈಯಿಂದ ಮುಕ್ಕು ಹಾಕುತ್ತ, ರಾತ್ರಿ - ಮಧ್ಯರಾತ್ರಿ - ನಸಕುಗಳಲ್ಲಿ ತೆನೆಯಿಂದ ಕಾಳು ತೆಗೆಯುವ - ಜೋಳದಿಂದ ಹಿಟ್ಟು ತೆಗೆಯುವ ಕ್ರಿಯೆಗಳು ಇಲ್ಲೆಲ್ಲ ನಡೆದಿರುತ್ತವೆ. ಹೀಗೆ ಶ್ರಮದ ಕೆಲಸ ಮಾಡುತ್ತಲೇ ಎರಡೂ ಕಡೆ ತಮ್ಮ ಪಾಡನ್ನು ಹಾಡಿಕೊಳ್ಳುವ ಕ್ರಿಯೆಯೂ ನಡೆದು - ಎರಡೂ ಕಡೆ ತ್ರಿಪದಿಗಳೇ ಸೃಷ್ಟಿಗೊಳ್ಳುವುದನ್ನು ಕಾಣುತ್ತೇವೆ.

ಹಂತಿ ಮುಖ್ಯವಾಗಿ ಒಂದು ಕೆಲಸದ ಪ್ರಕ್ರಿಯೆ. ಆದುದರಿಂದ ಈ ಕೆಲಸದ ಪ್ರಕ್ರಿಯೆಯನ್ನು ದಾಖಲಿಸುವುದನ್ನೇ ಹಂತಿಯ ಹಾಡುಗಳು ಮಾಡುತ್ತವೆ. ಜೊತೆಗೆ ಬಿತ್ತಣಿಕೆಗೆ ತಯ್ಯಾರಿ ನಡೆಸುವಾಗಿನಿಂದಲೂ ಒಂದು ದೈವೀಭಾವನೆಯ ಸಾಂಪ್ರದಾಯಿಕ ಆಚರಣೆಯ ಒಂದು ಎಳೆಯೂ ಇಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಈ ಎರಡೂ ಹಂತಿಯ ಹಾಡುಗಳಲ್ಲಿ ದಾಖಲಾಗಿರುವುದನ್ನು ನಾವು ಕಾಣುತ್ತೇವೆ.

ಈ ಬೆಳೆಗೆ ಸಂಬಂಧಿಸಿದಂತೆ ಅಥವಾ ತನ್ನ ಉದ್ಯೋಗಕ್ಕೆ ಸಂಬಂಧಿಸಿದಂತೆ ಮನಬಿಚ್ಚಿ ಹಾಡಿಕೊಳ್ಳುವ ಸಮಯ - ಸಂದರ್ಭಗಳು - ರೈತನಿಗೆ ಬಿತ್ತಣಿಕೆಯಿಂದ ಪ್ರಾರಂಭಗೊಂಡು ಎಲ್ಲೂ ಬರುವುದಿಲ್ಲ. ಹೀಗಾಗಿ ಹಂತಿಯ ಸಂದರ್ಭದಂತಹ ಒಂದು ಹಂತದಲ್ಲಿ ನಿಂತುಕೊಂಡು - ಬಿತ್ತಣಿಕೆಯಿಂದ ಪ್ರಾರಂಭಿಸಿ, ತನ್ನ ರೈತಬದುಕನ್ನು, ಬಸವಣ್ಣನ ದುಡಿಮೆಯನ್ನು, ಗೈದ ಶ್ರಮವನ್ನು - ಸಿಂಹಾವಲೋಕನ ಕ್ರಮದಲ್ಲಿ ಎಂಬಂತೆ ಅವೆಲ್ಲವನ್ನು ಇಲ್ಲಿ ತೋಡಿಕೊಳ್ಳುತ್ತಾನೆ.

ಪ್ರಸ್ತುತ ಹಂತಿಯ ವಿವಿಧ ಹಂತಗಳಿಗೆ ತಕ್ಕಂತೆ - ಉದಾ: ಪ್ರಾರಂಭದಲ್ಲಿ ಸ್ತುತಿ, ಕಂಕಿ ತೆಗೆಯುವ ಕಾಲಕ್ಕೆ ಅವುಗಳ ಚುಟುಕುಗಳು, ಹಂತಿಬಿಡುವ ಕಾಲಮ್ಮೆ ಬೂದುಗ ನಿರ್ಮಾಣದ ಬಗ್ಗೆ, ಮದನ ಮನಗಿಸಿ ಕರಿಬಂಟಿ ಬರೆದು ಕಡೆಗಾಗುವ ಬಗೆಗೆ - ಹೀಗೆ ವರ್ತಮಾನದ ಕ್ರಿಯೆಗೆ ತಕ್ಕ ಹಾಡುಗಳನ್ನು ಅಲ್ಲಲ್ಲಿ ಹಾಡುತ್ತಾರೆ.

ಜೊತೆಗೆ ಮುಂದೆ ಜೋಳ ತೂರುವ, ಹಂತಿಯ ಎತ್ತುಗಳನ್ನು ಶೃಂಗರಿಸಿ ಮೆರವಣಿಗೆ ಮಾಡುವ ಸಂಗತಿಯ ಹಾಡುಗಳೂ ಕ್ರಿಯೆ ಮತ್ತು ಭೂತ, ಭವಿಷತ್ತುಗಳನ್ನು - ವರ್ತಮಾನದಲ್ಲಿ ನೆನೆಯುವ ಕ್ರಿಯೆ ಮತ್ತು ವರ್ತಮಾನದ ವಿವರಗಳನ್ನೆಲ್ಲ ಬಿಚ್ಚಿ ಹಾಡಿಕೊಳ್ಳುವ ವಿಶಿಷ್ಟತೆ ಕಾಣಿಸಿಕೊಳ್ಳುವುದು ಹಂತಿಯ ಹಾಡುಗಳ ವೈಶಿಷ್ಟ್ಯವೆಂದೇ ಹೇಳಬೇಕು.

ಜೋಳ ಈ ಭಾಗದ ಮುಖ್ಯ ಆಹಾರವಾಗಿರುವುದರಿಂದ ಉಳಿದ ಯಾವ ಬೆಳೆಯ ಬಗೆಗೂ ಇರದ ಒಂದು ರೀತಿಯ ದೈವೀ ಸಂಬಂಧ ಹಾಗೂ ಭಕ್ತಿ - ಭಾವನೆಯ ಸಂಬಂಧಗಳು ಜೋಳದ ಬೆಳೆಯ ಬಗೆಗೆ ಕಾಣಿಸುವುದು ಸಾಮಾನ್ಯ. ಉಳಿದೆಲ್ಲ ಬೆಳೆಯ ರಾಶಿಗಳು ನಡೆಯುವುದು ಹಗಲುಹೊತ್ತಿನಲ್ಲಿಯೇ. ನಮ್ಮ ಭಾಗದಲ್ಲಿ ಈಗ ಇಪ್ಪತ್ತು ವರ್ಷಗಳ ಹಿಂದೆ ಬೆಳೆಯುತ್ತಿದ್ದ ಮುಂಗಾರಿ ಜೋಳದ ರಾಶಿಯು ಹಗಲು ಹೊತ್ತಿನಲ್ಲಿಯೇ ನಡೆಯುತ್ತಿತ್ತು. ಒಮ್ಮೊಮ್ಮೆ ರಾತ್ರಿ ಹಂತಿಕಟ್ಟಿದರೂ ಬಿಳಿಜೋಳದ ಹಂತಿನಡೆಯುವಾಗ ಕಾಣಿಸುವ ದೈವೀ ಸಂಬಂಧ, ಕಟ್ಟುನಿಟ್ಟಾದ ನಂಬುಗೆಗಳು, ಆಚರಣೆಗಳು ಇರದೇ ಇರುವುದು ಎದ್ದುಕಾಣುವ ಸಂಗತಿ. ಹಂತಿಯಂತಹ ಒಂದು ಕೆಲಸದ ಸಂದರ್ಭವನ್ನು ಒಂದು ಸಂಪ್ರದಾಯ ಎನ್ನುವಷ್ಟರ ಮಟ್ಟಿಗೆ ಏರಿಸುವಲ್ಲಿ ಈ ಎಲ್ಲಾ ಅಂಶಗಳು ಕೆಲಸ ಮಾಡುತ್ತವೆ.

ಜೋಳದ ಬಿತ್ತಣಿಕೆಗೆ ಕೂರಿಗೆ ಸಜ್ಜುಗೊಳಿಸುವುದರಿಂದ ಹಿಡಿದು ರಾಶಿ ಮನೆಗ ಬಂದು ಹತ್ತುವವರೆಗೆ ಪ್ರತಿಯೊಂದು ಹಂತದ ಕ್ರಿಯೆಗೈಯ್ಯುವಾಗ - ಕೂರಿಗಿ ತುಂಬಿಸಿ ಅದನ್ನು ಬಡಿಗೇರ ಅಂಗಳದಿಂದ ರೈತನ ಮನೆಗೆ ತರುವಾಗ, ಬಿತ್ತಣಿಕೆ ಚಾಂಗಿಸುವಾಗ, ಎಳ್ಳಾಮವಾಸ್ಯಗೆ ಬೆಳೆಗೆ ಚರಗ ಚಲ್ಲುವಾಗ, ನಂತರ ಕಣಮಾಡುವ, ಗೂಡು ಮುರಿಯುವ, ಹಂತಿ ತುಳಿಸುವ, ಮದನ ಮನಗಿಸುವ, ತೂರುವ, ರಾಶಿ ಮನೆಗೆ ತರುವ ಈ

ಪ್ರತಿಯೊಂದು ಹಂತಗಳಲ್ಲೂ ಒಕ್ಕಲಿಗರು ಕಟ್ಟುನಿಟ್ಟಾಗಿ ಕೆಲ ನಿಯಮಗಳನ್ನು ಪಾಲಿಸುತ್ತಾರೆ - ಶುಭಸಮಯವನ್ನು ನೋಡುತ್ತಾರೆ, ಅಮಂಗಳವಾದುದನ್ನು ದೂರ ಇಡುತ್ತಾರೆ, ದೇವರಿಗೆ ಹರಕೆ ಹೊರುತ್ತಾರೆ, ಮದನ ಅರ್ಪಿಸುತ್ತಾರೆ. ಇದೆಲ್ಲವನ್ನು ಗಮನಿಸಿದಾಗ - ಹಂತಿ ಕೇವಲ ಒಂದು ಸುಗ್ಗಿಯಾಗಿ ಮಾತ್ರ ಅಲ್ಲ, ಅದೊಂದು ಸಾಂಪ್ರದಾಯಿಕ ದೈವೀಭಾವನೆಯನ್ನು ಹೊತ್ತ ಪ್ರಕ್ರಿಯೆ ಎಂಬಂತೆ ತೋರುತ್ತದೆ. ಈ ಅರ್ಥದಲ್ಲಿ ಅದೊಂದು ಸಾಂಪ್ರದಾಯಿಕ ಕ್ರಿಯೆಯೂ ಎನಿಸುತ್ತದೆ. ರೈತರ ಈ ಭಾವನೆಗಳನ್ನು ಹಂತಿಪದಗಳು ಚಾಚೂತಪ್ಪದೇ ದಾಖಲಿಸುವುದನ್ನು ಕಾಣುತ್ತೇವೆ.

**ಕೂರಿಗೆ :**

ಬಿಳಿಜೋಳ ಬಿತ್ತುವ ಸಮಯ ಬಂತೆಂದರೆ ಕೂರಿಗೆ ತುಂಬಿಸುವ ಕೆಲಸ ಪ್ರಾರಂಭ ವಾಗುತ್ತದೆ. ಹೀಗೆ ಕೂರಿಗಿ ತುಂಬುವ ಕೆಲಸ ಮಾಡುವ ಬಡಿಗೇರ ಅಡಿಗಲ್ಲು ಅಡಿಗಟ್ಟಿಗಳೂ ಪೂಜೆಗೊಳ್ಳುತ್ತವೆ.

ಅಡಿಗಲ್ಲು ಅಡಿಗಟ್ಟೆ, ಪೂಜಿ ಮೊದಲ ಹೊಂಬಲ ಪೂಜಿ
ಕೂರಿಗಿ ಪೂಜಿ ಮದಲೀಗೀ । ಮ್ಯಾಲಿರುವ
ಶಿವಲಿಂಗಪೂಜಿ ಸರಿಯ್ಯಾಗೊ

ಹೀಗ ಬಡಿಗೇರ ಮನೆಯಲ್ಲಿ ತಯ್ಯಾರಾದ ಕೂರಿಗೆಯ ಪೂಜೆ ತೀರ ಶಿಸ್ತಿನಿಂದಲೇ ನಡೆಯುತ್ತದೆ. ತನ್ನ ಮನೆಯಿಂದ ಬಡಿಗನಿಗೆ ಕೊಡಬೇಕಾದ ಆಯದ ಜೊತೆಗೆ, ಮನೆಯ ಹೆಣ್ಣುಮಕ್ಕಳು ಆರತಿಯೊಂದಿಗೆ ಹೂಹಾರ ಇತ್ಯಾದಿಗಳನ್ನೆಲ್ಲ ತರುತ್ತಾರೆ. ಬಡಿಗನ ಮನೆಯಲ್ಲಿ ಆತನಿಗೆ ಆಯಕೊಟ್ಟು, ಕೂರಿಗೆಯನ್ನು ಪೂಜಿಸಿ

ಕರಿಯ ಗೊಂಗಡಿ ತಂದು ಮುರಿದು ಟೊಪ್ಪಿಗಿ ಮಾಡಿ
ಹೊತ್ತಾನ ಒಕ್ಕಲಿಗ ಹೆಗಲಿಗಿ । ಕೂರಿಗಿ ದಿಂಡ
ಇಟ್ಟಾನ ತನ್ನ ಮನಿ ಮುಂದ ।

ಕಂಬಳಿ ಟೊಪ್ಪಿಗೆ ಹೊದ್ದು ಕೂರಿಗೆ ಹೊತ್ತ ರೈತ ಕೈಯಲ್ಲಿ ಕುಡಗೋಲು, ಕೊಡಲಿ ಮುಂತಾದ ಆಯುಧಗಳನ್ನು ಹಿಡಿಯುತ್ತಾನೆ. ಕೂರಿಗಿ ಈಗ ಲಕ್ಷ್ಮೀ ಸಂಕೇತ. ಕೂರಿಗಿ ಹೊತ್ತ ರೈತ ಮೌನದಿಂದಲೇ ಮನೆಗೆ ಬರುತ್ತಾನ. ಕರಿಯ ಗೂಂಗಟಿ ಹಾಸಿ, ದಿಕ್ಕು ನೋಡಿ, ಕೂರಿಗಿ ಇಡುತ್ತಾನ. ಮತ್ತ ಮನೆಯಲ್ಲಿ ಕೂರಿಗೆಗ ವಿಶೇಷ ಪೂಜೆ. ಅದಕ್ಕೆ ಸೀರೆ ಸುತ್ತಿ, ಆಭರಣ ಹಾಕಿ, ಎದುರಿಗೆ ಆರತಿ ಇಟ್ಟು, ಕಾಯಿ ಕರ್ಪೂರ ಮಾಡಿ, ಸಿಹಿ ಅಡಿಗೆಯ ನೈವೇದ್ಯ ಅರ್ಪಿಸಲಾಗುತ್ತದೆ.

> ಕೂರಿಗಿ ಪೂಜಕ ಏನೇನ ಇಡಬೇಕ
> ಜರತಾರಿ ಮಡಿಬೇಕ ಉಡುಸೋದಕ । ಲಕ್ಷ್ಮಿಗಿ
> ಕುಂಬಳಕಾಯಿ ಬೇಕಾ ಒಡಿಯೋದಕ ।

ಇಷ್ಟೆಲ್ಲ ಪೂಜೆ ಮುಗಿದ ನಂತರ ಮತ್ತೆ ಕೂರಿಗೆಯನ್ನು ಕಂಬಳಿಟೊಪ್ಪಿಗೆ ಮೇಲೆ ಹೊತ್ತು ಅತ್ಯಂತ ಭಕ್ತಿಭಾವದಿಂದ ಹೊಲಕ್ಕೆ ಸಾಗಿಸಿ, ದಿಕ್ಕುದೆಸೆ ಗಮನಿಸಿ ಇಳಿಸುತ್ತಾನ :

> ಕೂರಿಗಿ ಹಿಡಿದಾನ ತಲಿಮ್ಯಾಲ ಹೊತ್ತಾನ
> ಎರಿಹೊಲದ ದಾರಿ ಹಿಡಿದಾನ । ಒಕ್ಕಲಿಗ
> ಗಂಗಿದಿಕ್ಕೀಗಿ ಇಳವ್ಯಾನ ।

**ಬಿತ್ತಣಿಕೆ :**

ಕೂರಿಗೆಯಿಂದ ಬಿತ್ತಲು ಚಾಂಗಿಸುವುದು ಸುಮಾರಾಗಿ ಮುಂಜಾನೆಯ ಶುಭ ಸಮಯದಲ್ಲೇ. ರಾತ್ರಿ ಕೂರಿಗೆಯನ್ನು ಹೊತ್ತು ತಂದರೂ ನಸುಕಿನ ಶುಭಸಮಯದವರೆಗೆ ಕಾಯುತ್ತಾನೆ. ಅಥವಾ ನಸಕು ಇಲ್ಲವೆ ಮುಂಜಾನೆಯೇ ಕೂರಿಗೆಯನ್ನು ಹೊಲಕ್ಕೆ ತರಲಾಗುತ್ತದೆ. ಆದಿನ ಕೂರಿಗಿ ಚಾಂಗಿಸಿ, ಅಂದರೆ ಬಿತ್ತಣಿಕಿ ಪ್ರಾರಂಭಿಸಿ, ವಿರಮಿಸಲಾಗುತ್ತದೆ. ಈ ದೃಶ್ಯವನ್ನು ಹೀಗೆ ಹಿಡಿದಿಡಲಾಗಿದೆ :

> ಚೆಳ್ಳನ್ನ ಎರಡೆತ್ತು ಬೆಳ್ಳಿಯ ಬಾರಕೋಲ
> ಬಂಗಾರ ಸೆಡ್ಡಿ ಬಲಗ್ಯೆಯ್ಗೆ ಹಿಡಿಕೊಂಡು
> ಹೊನ್ನ ಬಿತ್ಯಾರ ಹೊಳಿಸಾಲೊ

ಬಡವ ನಿನ್ಹೊಲದಾಗ ಇದು ಏನು ಸೋಜಿಗ
ಹವಳಗವಳೆಂಬ ಎರಡೆತ್ತು । ಅಣ್ಣಯ್ಯ
ಮಾದೇವ ರಥವ ನಡೆಸ್ಯಾನೊ ।

ಬೆಳ್ಳನ್ನ ಎರಡೆತ್ತು, ಬೆಳ್ಳಿಯ ಬಾರಕೋಲ, ಬಂಗಾರಸೆಡ್ಡಿ, ಬಲಗೈ, ಹೊನ್ನಬಿತ್ಯಾರ, ಮಾದೇವ ರಥವ ನಡಸ್ಯಾರ - ಈ ಎಲ್ಲ ಮಾತುಗಳು ಬಿತ್ತಣಿಕೆಯ ಸಂದರ್ಭವನ್ನು - ಅವರು ತೀರ ಪವಿತ್ರವಾದುದು, ಶುಭವಾದುದು ಎಂದೇ ಭಾವಿಸುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಿದೆ. ಹೀಗೆ ಪ್ರಾರಂಭದ ದಿನ ಹೆಚ್ಚಾಗಿ ಒಂದೆರಡು ಮುಂಬು ಚಾಂಗಿಸಿಬಿಡುವುದೇ ಹೆಚ್ಚು. ಅಂದು ಸಿಹಿ ಅಡಿಗೆಯ ಊಟ ಹೊಲದಲ್ಲಿ ಸಾಮಾನ್ಯ.

**ಚೆರಗ :**

ಬಿಳಿಜೋಳ ಬೆಳೆದು ನಿಂತಾಗ ಎಳ್ಳಾಮಾವಾಸ್ಯೆ ಬರುತ್ತದೆ. ಅಂದು ವಿಶೇಷ ಅಡಿಗೆಯ ಸಂಭ್ರಮ. ಜೋಳದ ಬೆಳೆಗೆ ಚರಗ ಚೆಲ್ಲುವ ಕ್ರಿಯೆ. ಇದು ಜೋಳದ ಬೆಳೆಗೆ ಆಹಾರ ಸಮರ್ಪಿಸುವ ಮತ್ತು ಪೂಜೆ ಸಲ್ಲಿಸುವ ದ್ಯೋತಕ. ಬಿತ್ತಣಿಕೆ ಮುಗಿದ ನಂತರ ಹಂತಿಪದಗಳು ದಾಖಲಿಸುವ ಸಂದರ್ಭವೆಂದರೆ - ಇದು :

ಹುಗ್ಗಿ ಹೂರಣಕಡಬ ಚೆಜ್ಜಕದ್ಹೋಳಿಗೆ
ವಗ್ಗರಣೆ ಗುಳ್ಳಿ ಹದಿನಾರ । ಹಾಕ್ಯೊಂಡು
ತಗ್ಗಿನ ಹೊಲಕ ಸರಗವ

ಚರಗ ಚೆಲ್ಲಿ, ಸಂಜೆ ಜೋಳದ ದಂಟುಗಳಿಂದ ತಯ್ಯಾರಿಸಿದ ಸೋನ್ಯಾದ ಪುಟ್ಟಿಯನ್ನು ಊರಲ್ಲಿ ಮೆರೆಸಿ, ಗುಡಿ ಗುಡಿಗೂ ದೀಪ ಮುಡಿಸುವ ಕೆಲಸ ನಡೆಯುತ್ತದೆ.

**ಕಣ ಮತ್ತು ಮೇಟಿ :**

ಈಗ ನೇರವಾಗಿ ಹಂತಿಯ ಸಂದರ್ಭವನ್ನು ಚಿತ್ರಿಸುವ ಮತ್ತು ದಾಖಲಿಸುವ ಕೆಲಸ ಅವನದಾಗಿರುತ್ತದೆ. ರೈತರು ಕಣ ಮಾಡಲು ಹೆಚ್ಚಾಗಿ ಎಕ್ಕೆಯ ಗಿಡ ಇರುವ

ಸ್ಥಳವನ್ನು ಆಯ್ಕೆ ಮಾಡುತ್ತಾರೆ. ಅದನ್ನು ಮೇಟಿಯ ಸ್ಥಳವಾಗಿ - ಸುತ್ತಲೂ ಕಣ ಮಾಡುತ್ತಾರೆ. ಉತ್ತರಣೆಕಡ್ಡಿಯ ಸೂಡನ್ನು, ಹಂತಿ ನಡೆದಾಗ ಆಗಾಗ ಬನ್ನಿ ತೊಪ್ಪಲು ಮತ್ತು ಎಕ್ಕೆಹೂಗಳನ್ನು 'ಹುಲಿ ಹುಲಿಗ್ಯೊ' ಎಂದು ಸ್ಮರಿಸುತ್ತ ಕಣದಲ್ಲಿ ಚಲ್ಲುತ್ತಿರುತ್ತಾರೆ. ಇಲ್ಲಿ ಬಳಕೆಯಾಗುವ ಎಕ್ಕಿಯ ಗಿಡ, ಎಕ್ಕಿಯ ಹೂವು, ಬನ್ನಿಯ ತೂಪ್ಪಲು, ಉತ್ತರಾಣೆ ಕಡ್ಡಿ ಮುಂತಾದವುಗಳೆಲ್ಲ ಶಿವನಿಗೆ ಅರ್ಪಿತವಾಗುವವು ಎಂಬುದು ಗಮನಾರ್ಹ ಸಂಗತಿ.

ಪುಂಡ ಭೂಮಿಯ ಮ್ಯಾಲ ಗುಂಡಕ ಖಳಮಾಡಿ
ಮೇಟಿ ಏಸ ಮೂಲಿ ಹೊಡಿಬೇಕೊ । ಬಿಂಡಿ ಬಿಗಿಬೇಕೊ ॥

ಅಯ್ನರ ಕರಸ್ಯಾರ ಪಂಚಾಂಗ ತಗಸ್ಯಾರ
ಪಂಚ ಮುತ್ತೈದೇರಿಗೆ ಕರಸ್ಯಾರೋ । ಗೂಡ ಮುರಿಸ್ಯಾರೋ ॥

ಖಳದ ಪಾಳೆದ ಪೂಜಿ ರಾಗೋಲ ದಂಡಿಗಿ ಪೂಜಿ
ಮೇಟಿಯ ಪೂಜಿ ತೆನಿಪೂಜಿ । ಬಸವನ
ಪಾದದ ಪೂಜಿ ಹಣಿಪೂಜಿ ॥

ಇಲ್ಲೆಲ್ಲ ಮೂರ್ತ ಇತ್ಯಾದಿಗಳನ್ನು ನೋಡುವ, ಪೂಜೆಸಲ್ಲಿಸುವ ಸಂಗತಿಗಳನ್ನು ದಾಖಲಿಸಿರುವುದನ್ನುಕಾಣುತ್ತೇವೆ. ಮೇಟಿಗೆ ತೆನೆಗಳಕಿಯ ಒಂದು ಸೂಡು ಕಟ್ಟಿ ಸೀರೆಸುತ್ತಿ, ಡಾಬ ತೊಡಿಸಿ, ನಡುವಿಗೆ ಕುಡಗೋಲು ಸಿಕ್ಕಿಸಿ, - "ಕಣದ ಲಕ್ಷ್ಮಿ" ಎಂದೇ ಕರೆಯುತ್ತಾರೆ, ಪೂಜೆ ಮಾಡುತ್ತಾರೆ.

ಬೂದುಗ:

ಹಂತಿಯ ಕೊನೆಯ ಸುತ್ತುಗಳಲ್ಲಿ, ಇನ್ನೇನು ಹಂತಿ ಬಿಡಬಹುದು ಎಂದ ಕೂಡಲೇ ಈ ಬೂದುಗದ ತಯ್ಯಾರಿ ನಡೆಯುತ್ತದೆ.

ಮುಂದಕ ಮೂರ ಹೆಜ್ಜೆ ಹೋಗಿ । ರೇಖ್ಯಾದ ಮಗಿತಂದು
ಹುಲಗ ಹೊಡದು ಮದನ ತುಂಬಿ ಇಟ್ಟಿದರೊ
ಕಟ ಎತ್ತಿನ ಹೆಂಟಿ ಹಿಡಿದು । ಕಲಸಿ ಬೂದುಗ ಮಾಡಿ
ಹತ್ತು ಎತ್ತಿನ ಬಾಲಕಿತ್ತಿ ಹಚ್ಚಿದರೊ । ಬೂದುಗ ಕಟ್ಟಿದರೊ ॥

ಹಂತಿ ಹೊಡೆವುದು ಆಯ್ತು । ಕಂಕಿ ಕಡಿಯಕ ಆಯ್ತು
ಕಡಿ ಎತ್ತಿನ ಹಂಡಿ ಹಿಡಿಬೇಕೊ । ಬೂದುಗ ಕಟ್ಟಬೇಕೊ
ಬೂದುಗ ಕಟ್ಟಬೇಕು । ಚೆಂಡೀಕಿ ಹಚ್ಚಬೇಕು
ಬೂದುಗನ ಪದ ಒಂದು ಅನಬೇಕೊ ।

ಹಂತಿ ಬಿಡಬೇಕೊ ಕಡಿ ಎತ್ತಿನ ಹಂಡಿ ಹಿಡಿದು, ಅದರಲ್ಲಿ ಮದನ ಕಲಸಿ, ಲಿಂಗಾಕಾರ ಮಾಡಿ ಹಂತಿಗೆ ಕಟ್ಟಿದ ಎತ್ತುಗಳ ಬಾಲದ ಜಡೆಯ ಎಳೆಗಳನ್ನು ಕಿತ್ತುತಂದು ಬೂದುಗನ ತಲೆಗೆ ಚುಚ್ಚುತ್ತಾರೆ. ಇದು ಬೂದುಗನ ನಿರ್ಮಾಣದ ಪದ್ಧತಿ. ಇದಕ್ಕೆ ಕೆಲವೆಡೆ ಚೆಂಡಕಿರಾಮ ಎಂತಲೂ ಕರೆಯುತ್ತಾರೆ. ಇತ್ತೀಚೆಗೆ ಈತನನ್ನು ಅಲ್ಲಮನ ಪ್ರತೀಕವೆಂತಲೂ ಕರೆಯಲಾಗುತ್ತದೆ. ಬೂದುಗ ಮಾಡುವ ಎಲ್ಲ ವಸ್ತುಗಳು ಮತ್ತು ಸ್ಥಳ ಮಂಗಳಮಯವಾದವುಗಳು. ಅದಕ್ಕಾಗಿ ಇವನು ಸತ್‌ಶಕ್ತಿಯ ದೇವರಿದ್ದು, ಕಣದಲ್ಲಿಯ ರಾಶಿ ಕಾಯುವ ಜವಾಬ್ದಾರಿ ಅವನದಾಗಿರುತ್ತದೆ. ಅದಕ್ಕಾಗಿ ಇದು ದುಷ್ಟಶಕ್ತಿಯ ಪ್ರತೀಕವಾಗಿರಲಿಕ್ಕಿಲ್ಲ ಎನಿಸುತ್ತದೆ.

**ಹಂತಿಯ ಮುಕ್ತಾಯ :**

ಹಂತಿ ಪ್ರಕ್ರಿಯೆಯ ಮುಕ್ತಾಯ ಕರಿಬಂಟನನ್ನು ಬರೆಯುವ ಮೂಲಕವಾಗಿಯೇ ಆಗುತ್ತದೆ. ಅದಕ್ಕಿಂತ ಮುಂಚೆ ಹಂತಿಯ ಎತ್ತುಗಳನ್ನು ಹೇಗೆ ಬಿಚ್ಚುತ್ತಾರೆ ಎಂಬ ದೃಶ್ಯ ಈ ಹಾಡಿನಲ್ಲಿದೆ :

ಹಂತಿ ಹತ್ತಿಗಿ ಬಂತು ಕಂಕಿ ಕಡಿಯಕ ಬಂತು
ಕಂಚನಾರೂತಿ ಬೆಳಗ್ಯಾರ । ಬಸವಣ್ಣ
ಹಂತಿಯ ಕೊಳ್ಳ ಹರದಾರೊ ॥

ಹೀಗೆ ಮುತ್ತೈದೆ ಆರುತಿ ಬೆಳಗಿದ ನಂತರ ಕೊರಳ ಹರಿಯಲಾಗುತ್ತದೆ. ಈಗ ಮದನ ಮಸಗಿಸುವ ಮತ್ತು ಕರಿಬಂಟನ ರೂಪಕಣದಲ್ಲಿ ಬರೆಯುವ ಕೆಲಸ ಪ್ರಾರಂಭವಾಗುತ್ತದೆ.

**ಕರಿಬಂಟ :**

ಮದನ ಮಸಗಿಸಿದ ನಂತರ ಬಂಡಿಯ ಸುತ್ತ ಒಳಮಗ್ಗಲು ಮಲಗಿಸಿದ ಮದನದ

ಮೇಲೆ - ರವಡಿ ಸುಟ್ಟ ಕರಕದಿಂದ ಮಂಡಲ ಬರೆಯುತ್ತಾರೆ. ಇದೆಲ್ಲವನ್ನು ಅವರು ಕರಿಬಂಟಿ ಎಂದು ಕರೆಯುತ್ತಾರೆ. ಬಂಟಿ ಎಂದರೆ - ಕಾಪಾಡುವ ಶಕ್ತಿಶಾಲಿ, ವೀರ ಎಂಬ ಅರ್ಥ ಸಾಮಾನ್ಯ. ಕರಿಬಂಟಿನನ್ನು ಬರೆಯುವ, ಹೇಗೆ? ಯಾವಾಗ - ಎಂಬ ವಿಷಯಗಳ ಜೊತೆ - ಈತ ಯಾರು? ಎಂಬ ಬಗೆ ಬಗೆಯ ಸಂಗತಿಗಳನ್ನು ಹಂತಿಯ ಹಾಡುಗಳು ದಾಖಲಿಸುತ್ತವೆ.

ಮದನ ಮನಗಿಸಬೇಕು । ಮಂಡಲ ಬರೀಬೇಕು
ಸುತ್ತ ಕರಿಬಂಟಿ ಕಟ್ಟಬೇಕು ।

ಕರಿಹನುಮ ನಿನ್ನರೂಹ ಬರೆದೆವು ಬಂಡಿಯ ಮ್ಯಾಲ
ಸಗರ ಶಾವುರದ ಕರಿಹನುಮ । ನಿನಿ ನಾಮ
ಬರದೇವು ನಮ್ಮ ಕಣದಾಗ ।

ಈ ಕರಿಬಂಟಿ 'ಕರಿಹನುಮ' ಎಂಬ ಸುಳುವು ಇಲ್ಲಿ ದೊರೆಯುತ್ತದೆ. ಹನುಮಂತನು ದುಷ್ಟಶಕ್ತಿಯ ಸಂಹಾರಕನಾದುದರಿಂದ, ಆತನ ಕರಿಯ ನಿಶಾನೆಯನ್ನು ತಮ್ಮ ಕಣದಲ್ಲಿ ಹಾಕಿ, ಜೋಳ ತಿರುಗಿಸಿಕೊಳ್ಳುವ ಮುಂತಾದ ದುಷ್ಟವಿದ್ಯಗಳಿಗೆ ಒಳಪ್ರವೇಶ ಮಾಡದಂತೆ ಮಾಡುತ್ತಾರೆ.

ಕರಿಬಂಟನನ್ನು ಬರೆದು ಕಡೆಗಾಗುವ ಮಂಗಳಮಯವಾದ ಸುಂದರ ಸನ್ನಿವೇಶವನ್ನು ಹೀಗೆ ವರ್ಣಿಸುತ್ತಾರೆ :

ಹೊಲಕ ಹೊಂಟಾಳ ನಾರಿ । ಉಟ್ಟಾಳ ಹೂವಿನ ಸೀರಿ
ತೊಟ್ಟಾಳ ಮಗ್ಗಿಯ ಕುಬಸ । ಹೊತ್ತಾಳ ಹುಗ್ಗಿಯ ಹರಿವು
ಮುಂಬಲ ಗಡಗಿ ಎದುರಾಗಿ ಬರುವಾಗ
ಕರಿಬಂಟನ ಬರೆದು ಕಡಿಗಾಗಿ ॥

## ರಾಶಿ ತೂರುವುದು :

ಕೊನೆಗೆ ರಾಶಿತೂರುವ ಕೆಲಸವನ್ನು ಅಷ್ಟೇ ಶ್ರದ್ಧೆಯಿಂದ ಜರುಗಿಸುತ್ತಾರೆ.

ಮೂಡಲ ಮಾರಿಗಿ ಮೂಲ ನಕ್ಷತ್ರ ತಿಳಿಬೇಕು
ಊದ ನೀಡಿ ಕುಂತು ಮದನವಡಿಬೇಕು । ರಾವ ತಿಳಿಬೇಕು ।

ಮೂಲಿಯ ಗಾಳಿ ಬಿಟ್ಟು ಮುತ್ತ ಸುರದಂಗಾಯ್ತು
ಮುತ್ತ ಬಾ ಓಲಿಗ ಅನುತಿದ್ದರೊ । ಬುಟ್ಟಿ ಕೊಡುತ್ತಿದ್ದರೊ ।

ಹೀಗ ಹಂತಿ ನಡದಾಗ ಮತ್ತು ಮದನ ತೂರುವಾಗ ಒಕ್ಕಲಿಗನು ಹುಲ್ಲುಲಿಗೋ, ಹರಗೋಲಿಗೊ, ಹುಲಸಿಗೋ, ಹುಲಿಗ್ಯೊ, ಓಲಿಗ್ಯೊ, ಹಲಂಡಹಲ್ಯೊ - ಎನ್ನುವ ಘೋಷಣೆಗಳನ್ನು ನಿರಂತರವಾಗಿ ಅನ್ನುತ್ತಿರುತ್ತಾನೆ. 'ರಾಶಿ ಹುಲುಸಾಗಲಿ' ಎಂಬ ಅರ್ಥ ಇವುಗಳಲ್ಲಿರುವುದು ಸಾಮಾನ್ಯ. ತೂರುವಾಗ ವಿಶೇಷವಾಗಿ 'ಓಲಿಗೋ' ಎನ್ನುವ ಘೋಷಣೆ 'ಗಾಳಿ' ಅನುಕೂಲಕರವಾಗಿ ಬೀಳಿ ತೂರುವ ಕೆಲಸ ಸುಗಮವಾಗಿ ಸಾಗಲಿ ಎನ್ನುವ ಅರ್ಥದಲ್ಲಿದೆ. ಇಲ್ಲಿ ಆತ ಸತ್‌ಶಕ್ತಿಯಾದ ಗಾಳಿದೇವರನ್ನು (ಮರುತ) ನೆನೆಯುತ್ತ ಇರುತ್ತಾನೆ.

ಹೀಗೆ ಒಟ್ಟಾರೆ ಹಂತಿ ಒಂದು ಕೆಲಸದ ಪ್ರಕ್ರಿಯೆಯಾದಂತೆ ಒಂದು ಸಾಂಪ್ರದಾಯಿಕ ಎಳೆಯನ್ನು ಕೊನೆಯವರೆಗೆ ಹಿಡಿದುಕೊಂಡು ಬರುವುದನ್ನು ಇಲ್ಲಿಯ ಪದಗಳು ದಾಖಲಿಸುತ್ತ ಬಂದಿದ್ದು ಸ್ಪಷ್ಟವಾಗಿದೆ. ಅದಕ್ಕಾಗಿ ಹಂತಿ ಒಂದು ಕೆಲಸವೂ ಹೌದು ಸಾಂಪ್ರದಾಯಿಕ ಸಂದರ್ಭವೂ ಹೌದು.

# ರೈತನ ದನ ಕರುಗಳು

ಡಾ: ಕೆ.ಆರ್.ದುರ್ಗಾದಾಸ್

ಇತಿಹಾಸದ ಆರಂಭಕಾಲದಿಂದಲೂ ಮಾನವ ಪ್ರಾಣಿಗಳ ಸಂಬಂಧ ಒಂದಕ್ಕೊಂದು ಪೂರಕವಾಗಿಯೇ ರೂಪುಗೊಂಡು ಬಂದಿದೆ. ಅಲೆಮಾರಿ ಜೀವನ ನಡೆಸುವಾಗಲೂ, ಪ್ರಾಣಿಗಳನ್ನು ಬೇಟೆಯಾಡಿ ಬದುಕು ಸಾಗಿಸುತ್ತಿದ್ದ ಕಾಲದಿಂದಲೂ ಮಾನವ ಪ್ರಾಣಿಗಳ ಜೊತೆ ಒಂದಿಲ್ಲೊಂದು ಬಗೆಯ ಸಂಬಂಧವಿರಿಸಿಕೊಂಡೇ ಬಂದಿದ್ದಾನೆ. ಮನುಷ್ಯನಿಗೆ ಬದುಕಿನ ಕಲ್ಪನೆ ಮೂಡಿದ್ದೇ ಪ್ರಾಣಿಗಳಿಂದ. ಬೆಂಕಿ, ಕತ್ತಲೆ, ಬೆಳಕು, ಬೇಸಾಯಗಳ ಕಲ್ಪನೆಯನ್ನು ಪ್ರಾಣಿಗಳಿಂದಲೇ ಆತ ಪಡೆದುಕೊಂಡ. ಅವನ ಸಾಹಸ, ಓಟ, ಜಿಗಿತ, ಅಬ್ಬರ, ಅಳುಕುಗಳಿಗೆ, ಚಪಲತೆ, ಠಕ್ಕುತನಗಳಿಗೆ, ಸ್ನೇಹಕ್ಕೆ, ದ್ರೋಹಕ್ಕೆ ಪ್ರಾಣಿಗಳ ಸ್ವಭಾವ, ಶಕ್ತಿ, ಸಾಮರ್ಥ್ಯಗಳೇ ಪ್ರೇರಣೆ. ಈ ಹಿನ್ನೆಲೆಯಲ್ಲಿ ಮಾನವ ಬದುಕಿನ ಜೊತೆ ಪ್ರಾಣಿಗಳು ಸಂಯೋಗಾತ್ಮಕ ಸಂಬಂಧ ಹೊಂದಿವೆ.

**ದನ - ಕರುಗಳ ಸಾಕಾಣಿಕೆ :**

ಅಲೆಮಾರಿ ಬದುಕಿಗೆ ಶರಣು ಹೊಡೆದು ವ್ಯವಸಾಯವನ್ನು ಕಂಡುಕೊಂಡ ಮೇಲೆ ಒಂದು ಕಡೆ ನೆಲೆನಿಂತು ವಾಸಿಸತೊಡಗಿದುದು ಮಾನವ ವಿಕಾಸದ ಹಂತದಲ್ಲಿ ಮಹತ್ವದ ಘಟ್ಟ. ಪ್ರಾಣಿ ಸಾಕಾಣಿಕೆಗೆ ಹೆಚ್ಚಿನ ಮಹತ್ವ ಬಂದುದು ಈ ಕಾಲದಲ್ಲಿಯೇ. ಎಮ್ಮೆ, ಆಕಳಿನ ಹಾಲು ಉತ್ತಮ ಆಹಾರವೆಂಬುದನ್ನು ಕಂಡುಕೊಂಡ ಮೇಲೆ ಇಡೀಯಾಗಿ ಕುಟುಂಬಕ್ಕೆ ಅದರ ಅಗತ್ಯ ಉಂಟಾಯಿತು. ಮತ್ತೊಂದು ನೆಲೆಯಲ್ಲಿ ಕೋಣ ಮತ್ತು ಎತ್ತುಗಳನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲು ಸಾಧ್ಯವಾದಾಗ ದನಕರುಗಳ ಸಾಕಾಣಿಕೆಗೆ ಮಹತ್ವ ಬಂತು.

ಎಮ್ಮೆ, ಆಕಳಿನ ಹಾಲಿನಿಂದ ಮೊಸರು, ಬೆಣ್ಣೆ, ಮಜ್ಜಿಗೆಯಂತಹ ಆಹಾರ

ಪದಾರ್ಥಗಳನ್ನು ತಯಾರಿಸುವುದು, ಮಾರುವುದು ಮುಂತಾದ ಜವಾಬ್ದಾರಿಯನ್ನು ಮಹಿಳೆ ವಹಿಸಿಕೊಂಡಳು. ಇದರಿಂದ ಉತ್ಪಾದನೆಯಲ್ಲಿ ಮಹಿಳೆಗೂ ಪಾಲು ದಕ್ಕುವಂತಾಗಿ ಕುಟುಂಬದಲ್ಲಿ ಅವಳ ಪ್ರತಿಷ್ಠೆಯನ್ನು ಹೆಚ್ಚಿಸಿತು.

ದನಕರುಗಳ ಸಾಕಾಣಿಕೆ ರೈತಾಪಿ ಜೀವನಕ್ಕೆ ತುಂಬಾ ಸಹಕಾರಿ ಎನಿಸಿಕೊಂಡ ಮೇಲೆ ಈ ಸಂತತಿಯನ್ನು ಸಂಪಾದಿಸುವುದರಿಂದ ಕುಟುಂಬದ ಆರ್ಥಿಕತೆ ಗಣನೀಯವಾಗಿ ಸುಧಾರಿಸತೊಡಗಿತು. ಇದರಿಂದ ಪಶು ಸಾಕಾಣಿಕೆ ತುಂಬಾ ಲಾಭದಾಯಕವಾಗಿ ಪರಿಣಮಿಸಿ ಸಮಾಜದಲ್ಲಿ ಪ್ರತಿಷ್ಠೆಯನ್ನು ತಂದುಕೊಡಲು ದನಕರುಗಳು ಮಹತ್ವದ ಅಂಶಗಳಾದವು. ಇಡೀಯಾಗಿ ಮನೆತನದ ಸ್ಥಿತಿ ಎಂಬುದು ಆಯಾ ಕುಟುಂಬ ಹೊಂದಿರುವ ದನಕರುಗಳ ಸಂಖ್ಯೆಯನ್ನು ಅವಲಂಬಿಸಿತು. ಹೆಣ್ಣು ತರುವಾಗ, ಕೊಡುವಾಗ ಮನೆತನದ ಸ್ಥಿತಿಯನ್ನು ತಿಳಿದುಕೊಳ್ಳಲು 'ಮನೆಯಲ್ಲಿ ದನಕರುಗಳು ಎಷ್ಟು?' ಎಷ್ಟೆತ್ತಿನ ಒಕ್ಕಲುತನ?ಇತ್ಯಾದಿ ಮಾತುಗಳನ್ನು ಬಳಸುವುದು ಒಂದು ಪದ್ಧತಿಯಾಗಿ ಪರಿಣಮಿಸಿತು.

ದನಕರುಗಳನ್ನು ಕಾಪಾಡಿಕೊಳ್ಳುವುದರಿಂದ ತನಗೂ ತನ್ನ ಕುಟುಂಬಕ್ಕೂ ಹೆಚ್ಚು ಲಾಭದಾಯಕವೆಂದು ಅರಿತಮೇಲೆ ತನಗಾಗಿ ಮನೆ ನಿರ್ಮಿಸಿಕೊಂಡಂತೆ ದನಕರುಗಳಿಗಾಗಿ ಕೊಟ್ಟಿಗೆ, ದನದಮನೆ, ಮೇವು ಸಂಗ್ರಹಿಸಿಡಲು ಅಟ್ಟ, ಮೇವು ಹಾಕಲು ಗೋದಲಿ, ನೀರು ಕುಡಿಸಲು ಕಲಗಚ್ಚುಗಳನ್ನು ನಿರ್ಮಿಸಿದ. ವರ್ಷದುದ್ದಕ್ಕೂ ದನಗಳಿಗೆ ಬೇಕಾಗುವ ಮೇವು, ಸಪ್ಪೆ, ಹುಲ್ಲುಗಳನ್ನು ಸಂಗ್ರಹಿಸಿಡಲು ಹಿತ್ತಲು, ಹಟ್ಟೇವು ಅಲ್ಲಿ ಬಣವೆಗಳನ್ನು ನಿರ್ಮಿಸಿಕೊಂಡ. ದನಗಳ ಸಗಣಿಯಂತೂ ಫಲವತ್ತಾದ ಗೊಬ್ಬರವೆಂಬುದನ್ನೂ ಅರಿತ ಮೇಲೆ ದನಗಳಿಗೆ ಮಾಡುವ ಆರೈಕೆ ಯಾವ ದೃಷ್ಟಿಯಿಂದಲೂ ನಿಷ್ಪ್ರಯೋಜನವಲ್ಲ ಎಂದು ಮಾನವ ಭಾವಿಸಿದ.

ತನ್ನ ಕುಟುಂಬದೊಟ್ಟಿಗೇ ದನಕರುಗಳೂ ಕೂಡಿ ಬೆಳೆಯುತ್ತಿದ್ದುದರಿಂದ ಅವುಗಳ ಲಾಲನೆ ಪಾಲನೆಯಲ್ಲಿ ವ್ಯಾವಹಾರಿಕತೆಯನ್ನು ಮೀರಿದ ಭಾವನೆ ಸಹಜವಾಗಿಯೇ ಅವನನ್ನು ಆವರಿಸಿತು. ಆಕಳು, ಎಮ್ಮೆ ಗರ್ಭಕಟ್ಟಿದ ಮೇಲೆ ಅವುಗಳಿಗೆ ಮೇವು, ನುಚ್ಚು ಕೊರತೆಯಾಗದಂತೆ ನೋಡಿಕೊಳ್ಳುವುದು. ಹೆರಿಗೆ ಸಮಯದಲ್ಲಿ ಹೆಣ್ಣು ಮಕ್ಕಳಿಗೆ

ಕೊಡುವಷ್ಟೆ ಗಮನ ಕೊಡುವಲ್ಲಿ ಆ ಸಂತತಿಯ ಮೇಲೆ ಮಾನವನಿಗಿರುವ ಕಾಳಜಿಯನ್ನು ತೋರಿಸುತ್ತದೆ.

ದನಗಳನ್ನು ಕಾಯಲು ಇಡೀ ಊರಿಗೆ ಅಂಕಿತಗೊಂಡ ಜನಗಳಿದ್ದು, ಅವರನ್ನು ದನಕಾಯುವವರೆಂದೇ ಗುರುತಿಸಲಾಗುತ್ತದೆ. ಹೆಚ್ಚು ದನಕರುಗಳನ್ನು ಹೊಂದಿದವರು ತಮ್ಮ ಕುಟುಂಬದಲ್ಲಿಯ ಒಬ್ಬರನ್ನು (ಗಂಡು ಅಥವಾ ಹೆಣ್ಣು) ದನ ಕಾಯುವಿಕೆಗಾಗಿ ನಿಯಮಿತರಾಗುವುದುಂಟು.

ಮನೆಯಲ್ಲಿ ಹುಟ್ಟಿ ಬೆಳೆದ ದನ ಕಾಯಿಲೆಗೆ ಬಿದ್ದಾಗ ಔಷಧೋಪಚಾರವೂ ಸೇರಿದಂತೆ ಅನೇಕ ಬಗೆಯ ನಿವಾರಣೋಪಾಯಗಳನ್ನೂ ಮಾಡಲಾಗುತ್ತದೆ. ದನ ಸತ್ತಾಗಲಂತೂ ಇಡೀ ಕುಟುಂಬ ದುಃಖದಲ್ಲಿ ಮುಳುಗುತ್ತದೆ. ಬಹಳ ದಿನಗಳಿಂದ ಮನೆಯಲ್ಲಿ ದುಡಿದು, ಸತ್ತ ದನಕ್ಕಂತೂ ಮನುಷ್ಯರಿಗೆ ಸಮಾನವಾದ ಅಂತ್ಯ ಸಂಸ್ಕಾರ ಮಾಡಲಾಗುತ್ತದೆ.

**ದನಗಳ ವ್ಯಾಪಾರ :**

ದನಕರುಗಳು ಖಾಸಗಿ ಸಂಪತ್ತಾಗಿ ಪರಿಣಮಿಸಿದ ಮೇಲೆ ಅವುಗಳನ್ನು ಕೊಡುವ ಮತ್ತು ಕೊಳ್ಳುವ ವಹಿವಾಟು ಚಾಲ್ತಿಯಲ್ಲಿ ಬಂತು. ದನದ ಪರೀಷೆ (ಜಾತ್ರೆ)ಗಳನ್ನು ನಡೆಸುವುದರ ಮೂಲಕ ಕೆಲವು ಸ್ಥಳಗಳು ದನಗಳ ವ್ಯಾಪಾರ ದೃಷ್ಟಿಯಿಂದ ತುಂಬಾ ಪ್ರಸಿದ್ಧಿಗೆ ಬಂದವು. ಎತ್ತುಗಳನ್ನು ಕೊಂಡು ತರುವಾಗ ವಿಶೇಷ ಎಚ್ಚರ ವಹಿಸಲಾಗುತ್ತಿತ್ತು. ಹಲ್ಲಿನ ಮೂಲಕ ವಯಸ್ಸು ತಿಳಿಯುವುದು, ನಡಿಗೆಯ ಮೂಲಕ ಸಾಮರ್ಥ್ಯ ಪರೀಕ್ಷಿಸುವುದು, ಸುಳಿ, ಬಣ್ಣ, ನೋಡುವುದು ಮುಂತಾದ ಪ್ರಕ್ರಿಯೆಗಳೆಲ್ಲ ಕೊಂಡು ತರುವ ಎತ್ತುಗಳಿಗೆ ಸಂಬಂಧಿಸಿ ನಡೆಯುತ್ತಿದ್ದುವು. ಬಂಡಿ (ಚಕ್ಕಡಿ) ಎಳೆಸುವುದರ ಮೂಲಕ ನಡಿಗೆ, ಸಾಮರ್ಥ್ಯದ ಪರೀಕ್ಷೆ ನಡೆಯುತ್ತಿತ್ತು. ಒಮ್ಮೊಮ್ಮೆ ಚಕ್ಕಡಿಯನ್ನು ಉಸುಕಿನ ಹಾದಿಯಲ್ಲಿ ನಡೆಸುವುದು, ಗಾಲಿ ತಿರುಗದಂತೆ ನೊಗ ಅಡ್ಡಲಾಗಿಟ್ಟು ಚಕ್ಕಡಿ ಎಳೆಸುವ ಪ್ರಯತ್ನವನ್ನು ಮಾಡುತ್ತಿದ್ದರು. ಇಷ್ಟೆಲ್ಲ ಮುತುವರ್ಜಿ ವಹಿಸಲು ಕಾರಣ ಕೊಂಡು ತಂದ ಎತ್ತು ಮನೆಯನ್ನು ಬೆಳೆಸಬೇಕೆಂಬುದು ಜನಪದರ ಇಚ್ಛೆಯಾಗಿತ್ತು.

**ದನ - ಕರುಗಳ ಸಲಕರಣೆಗಳು:**

ದನ - ಕರುಗಳನ್ನು ತನ್ನ ಕುಟುಂಬದ ಭಾಗವಾಗಿಯೇ ಮಾನವ ಪರಿಗಣಿಸುವುದರಿಂದ ಅವುಗಳ ರಕ್ಷಣೆ, ಲಾಲನೆ, ಪಾಲನೆ ಮತ್ತು ಅವುಗಳ ಅಂದ ಚೆಂದದ ಜವಾಬ್ದಾರಿ ಅವನ ಮೇಲೆ ಬಿತ್ತು. ದನಗಳನ್ನು ಕಟ್ಟಲು ಹಗ್ಗ, ಕಣ್ಣೆ, ಮೂಗುದಾಣ, ಬಾರುಕೋಲು, ನೊಗಸುತ್ತು, ಚಿಕ್ಕ (ಬೆಳೆ ತಿನ್ನಬಾರದೆಂದು ಎತ್ತಿನ ಬಾಯಿಗೆ ಕಟ್ಟುವ ಜಾಲರಿ) ಹಣೆಪಟ್ಟಿ, ಗೊಂಡೇವು, ಕೊರಳಸರ, ಹಣೆಗೆಜ್ಜೆ, ಕೋಡಿನ ಅಣಸು, ಇತರ ಕೃಷಿ ಉಪಕರಣಗಳನ್ನು ತಯಾರಿಸುವುದು, ಮಾರುವುದು ಮಾನವ ಬದುಕಿನಲ್ಲಿ ಪ್ರಾಧಾನ್ಯತೆ ಪಡೆಯಿತು. ದನಗಳ ಸಲಕರಣೆಗಳನ್ನು ತಯಾರಿಸಿ ಮಾರಾಟ ಮಾಡುವುದು ಕೆಲವು ಕುಟುಂಬಗಳ ಉಪಜೀವನಕ್ಕೆ ಹಾದಿಯಾಯಿತು. ದನಗಳ ಚರ್ಮದಿಂದ ಚಪ್ಪಲಿ, ಬೂಟುಗಳ ತಯಾರಿಕೆ, ಕೊಂಬುಗಳಿಂದ ಬಾಚಣಿಗೆ ಮತ್ತು ಇತರ ಅಲಂಕರಣ ವಸ್ತುಗಳ ತಯಾರಿಕೆಯಂತೂ ದೊಡ್ಡ ಉದ್ಯಮವಾಗಿ ಬೆಳೆದಿದೆ.

**ಸಾಂಸ್ಕೃತಿಕ ಮಹತ್ವ :**

ದನ - ಕರುಗಳು ರೈತನ ಜೀವನದಲ್ಲಿ ಮಹತ್ವದ ಪಾತ್ರವಹಿಸುವುದರಿಂದ ಅವುಗಳ ದಹತ್ವ ಹೆಚ್ಚಿ ಮಾನವ ಬದುಕಿನ ಜೊತೆ ಸಂಯೋಗಾತ್ಮಕ ಸಂಬಂಧ ಸ್ಥಾಪಿಸಿಕೊಂಡಿದೆ. ಹೊಲದ ಉಳುಮೆಗೆ ಸಹಾಯಕವಾಗಿರುವ 'ಎತ್ತು' ನಂದಿಯಾಗಿ ಶಿವನ ವಾಹನವಾಯಿತು. ಆಕಳು ಗೋಮಾತೆಯಾಗಿ ಸ್ಥಾನ ಪಡೆಯಿತು. ಕಾರುಹುಣ್ಣಿಮೆ ಹಬ್ಬದಲ್ಲಿ ಕರಿ ಎಳೆಸುವಿಕೆ ಎತ್ತಿನ ಮಹತ್ವವನ್ನು ಸಾರಲೆಂದೇ ಉದ್ದಿಷ್ಟವಾಗಿದೆ. ಅ ಸಂದರ್ಭದಲ್ಲಿ ಎತ್ತಿನ ಕೋಡಿಗೆ ಬಣ್ಣ, ಹಣೆಗೆಜ್ಜೆ, ಝೂಲ ಹಾಕಿ ಸಿಂಗರಿಸಿ ಮೆರೆಸುವುದುಂಟು. 'ಕರಿ'ಹರಿಸುವಿಕೆಗೆ ಸಾಂಸ್ಕೃತಿಕವಾಗಿಯೂ ಮಹತ್ವವಿದೆ. ವೈರಿಗಳಿಂದ ಒಡೆಯನಿಗೆ ಅನ್ಯಾಯವಾಗುವಾಗ ವೈರಿಗಳನ್ನು ಹಿಮ್ಮೆಟ್ಟಿಸಿ ಹೋರಾಡಿ ಸಾಹಸ ಮೆರೆದ ಎಷ್ಟೋ ಎತ್ತುಗಳ ಕಥೆ ಜನಪದಗೀತೆಗಳಲ್ಲಿ, ಕಥೆಗಳಲ್ಲಿ ಬಂದಿದೆ.

**ಎಮ್ಮೆ - ಆಕಳು : ತಾರತಮ್ಯ ದೃಷ್ಟಿ**

ಎಮ್ಮೆ, ಆಕಳು ಎರಡೂ ಹಾಲು ಕೊಡುವ ಪ್ರಾಣಿಗಳಾಗಿದುದದರಿಂದ, ಇವುಗಳ

ಸಂತತಿ (ಕೋಣ ಮತ್ತು ಎತ್ತು) ವ್ಯವಸಾಯಕ್ಕೆ ಅನುಕೂಲ ಎಂದು ತಿಳಿದಿದ್ದುದರಿಂದ ಮಾನವ ಇವೆರಡನ್ನು ಸಮಾನ ಭಾವದಿಂದಲೇ ಸಾಕುತ್ತಿದ್ದ. ಆದರೆ ಕಾಲಾನಂತರದಲ್ಲಿ ಎಮ್ಮೆ, ಕೋಣಗಳು ತಿರಸ್ಕಾರಕ್ಕೆ ಗುರಿಯಾದವು. ಎಮ್ಮೆ ಎಂದರೆ ದರಿದ್ರಕ್ಕೆ ಸಂಕೇತವೆಂದೂ, ಕೋಣ ಹೆಡ್ಡತನಕ್ಕೆ ಸಾಕ್ಷಿತವಂದು ಪ್ರಚುರಪಡಿಸಲಾಯಿತು. ಆಕಳ ಹಾಲು ಶ್ರೇಷ್ಠ, ಎಮ್ಮೆಹಾಲು ಕನಿಷ್ಠವೆಂಬ ಭಾವನೆಯನ್ನು ಬಿತ್ತಿ ಬೆಳೆಸಲಾಯಿತು. ಆದರೆ ಇಂಥ ಭಾವನೆಗಳನ್ನು ಮೇಲುವರ್ಗದ ಜನಗಳೇ ಕೆಳವರ್ಗದ ಜನರ ಮೇಲೆ ಹಗೆತನ ಸಾಧಿಸುವ ಉದ್ದೇಶದಿಂದ ಹಬ್ಬಿಸಿದರೆಂದು ತೋರುತ್ತದೆ. ಬ್ರಾಹ್ಮಣರು ಗೋವುಗಳನ್ನು ಯಥೇಚ್ಛವಾಗಿ ದಾನವಾಗಿ ಪಡೆದಿರುವುದನ್ನು ನೋಡಿದರೆ ಗೋವಿಗೆ ಪೂಜ್ಯ ಸ್ಥಾನವನ್ನು ಬ್ರಾಹ್ಮಣರೇ ತಂದುಕೊಟ್ಟರೆಂಬುವುದಕ್ಕೆ ನಿದರ್ಶನವೆಂಬಂತಿದೆ. 'ಕೋಣ' ಶೂದ್ರನಿಗೆ ಸಂಕೇತವಾಗಿ ಮಾರಿಹಬ್ಬದಲ್ಲಿ ಬಲಿಪಶುವಾಗಿ ನಿರ್ಮಾಣ ಗೊಳ್ಳುವಲ್ಲಿ ಈ ಧೋರಣೆಯೇ ಹಿನ್ನೆಲೆಯಾಗಿರುವಂತಿದೆ. ಅದೇನೇ ಇದ್ದರೂ ಎಮ್ಮೆಗಳು ಕೊಡುವ ಹಾಲು, ಆಕಳು ಕೊಡುವ ಹಾಲಿನ ಪ್ರಮಾಣಕ್ಕೆ ಹೆಚ್ಚಾಗಿರುವುದನ್ನು ಮನಗಂಡು ಇಂದಿಗೂ ಎಮ್ಮೆ ಸಂತತಿಯನ್ನು ಉಳಿಸಿಕೊಳ್ಳಲಾಗಿದೆ. ಎಮ್ಮೆ ಉಳಿಯಬೇಕೆಂದರೆ ಕೋಣವೂ ಬೇಕು ತಾನೆ?

**ಚರ್ಮವಾದ್ಯಗಳು:**

ದನಕರುಗಳು ಜೀವನವಿಡೀ ಮಾನವನಿಗೆ ಸಹಕಾರಿಯಾಗಿ ಬದುಕುವುದರೊಂದಿಗೆ, ಸತ್ತಮೇಲೂ ಅವನಿಗೆ ಉಪಯೋಗಕಾರಿಯಾಗುತ್ತವೆ. ಸತ್ತದನಗಳ ಚರ್ಮ ಸುಲಿದು ವಿವಿಧ ವಾದ್ಯ ತಯಾರಿಸುವುದನ್ನು ಮಾನವ ಬಹು ಹಿಂದೆಯೇ ಕಂಡುಕೊಂಡ. 'ಹಲಗೆ' ಅಂಥ ಪ್ರಾಚೀನ ಚರ್ಮವಾದ್ಯ. ಮಂಗಳ ಪ್ರಸಂಗಗಳಿಂದ ಹಿಡಿದು ಊರ ಜಾತ್ರೆ, ಹಬ್ಬ, ಹರಿದಿನಗಳಿಗೆ ಸುದಿ, ಸಮಾಚಾರ ಬಿತ್ತರ ಮಾಡಲಿಕ್ಕೆ, ಅಷ್ಟೇಕೆ ಶವಸಂಸ್ಕಾರಕ್ಕೆ ಅದರ ನುಡಿತ ಬಳಸುವುದುಂಟು. ಭಜನೆಗೆ ದಮ್ಮಡಿ, ಚಂಡೆ, ಕುಣಿತಕ್ಕೆ ಮೃದಂಗ, ಮದ್ದಳೆ, ಉತ್ಸವಕ್ಕೆ ಡೊಳ್ಳು, ನಗಾರಿ - ಇವೆಲ್ಲ ದನಗಳ ಚರ್ಮದಿಂದಲೇ ತಯಾರಾದವು. ಮಾನವನ ಭಾವಾಭಿವ್ಯಕ್ತಿಗೆ ತೋಡಿಯಾಗಿ ಚರ್ಮವಾದ್ಯಗಳು ನಿಂತುಕೊಂಡದ್ದು ದನಕರುಗಳಿಂದಲೇ.

**ಮಾಂಸಾಹಾರ :**

ಮಾನವ ಬೇಟೆಮಾಡಿ ಜೀವನ ನಡೆಸುವಾಗ ಮಾಂಸಾಹಾರ ಸಾರ್ವತ್ರಿಕವಾಗಿತ್ತು.

ಬ್ರಾಹ್ಮಣರಾದಿಯಾಗಿ ಮೊನ್ನೆ ಮೊನ್ನೆಯವರೆಗೆ ಎಲ್ಲರೂ ಗೋಮಾಂಸ ಭಕ್ಷಣೆ ಮಾಡುತ್ತಿದ್ದರು. ಆದರೆ ಕಾಲಾಂತರದಲ್ಲಿ ಉಂಟಾದ ರಾಜಕೀಯ ಸ್ಥಿತ್ಯಂತರಗಳಿಂದ 'ಗೋಮಾಂಸ ನಿಷೇಧ' ಎನ್ನುವ ಮಾತು ಅಲ್ಲಲ್ಲಿ ಕೇಳಿಬರತೊಡಗಿತು. ಅದೇನೇ ಇರಲಿ ವಯಸ್ಸಾದ ದನಗಳನ್ನು ಕೊಂದು ಮಾಂಸಾಹಾರವಾಗಿ ತಿನ್ನುವ ಪದ್ಧತಿ ಇಂದಿಗೂ ಇದೆ. ತಮ್ಮ ಕೈಯಲ್ಲಿಯೇ ಬೆಳೆದ ಆಕಳು, ಎತ್ತು, ಎಮ್ಮೆಗಳನ್ನು ಕೊಯ್ದು ತಿನ್ನಲು, ಕೊಯ್ಯಲು ಕೊಡಲು ಒಮ್ಮೊಮ್ಮೆ ಹಿಂಜರಿಯುವುದೂ ಉಂಟು. ಆದರೆ ಮಾಂಸಾಹಾರಕ್ಕಂತೂ ಸದಾ ಹಾತೊರೆಯುವವರೇ. ಪಟ್ಟಣಗಳಲ್ಲಿಯಂತೂ ದನದ ಮಾಂಸ ಮಾರಾಟ ಮಾಡುವ ದೊಡ್ಡ ದೊಡ್ಡ ಅಂಗಡಿಗಳೇ ಇವೆ. ಇಂದಿಗೂ ಬಹು ಬೇಡಿಕೆ ಇರುವ ಮಾಂಸವೆಂದರೆ ದನದ ಮಾಂಸವೇ. ಪಟ್ಟಣಗಳಲ್ಲಿ ಎಷ್ಟೋ ಕುಟುಂಬಗಳು ದನದ ಮಾಂಸ ಮಾರುವುದನ್ನೇ ಉದ್ಯೋಗವನ್ನಾಗಿ ನೆಚ್ಚಿಕೊಂಡಿವೆ.

**ನಂಬುಗೆ - ಆಚರಣೆ- ಗಾದೆ - ಬೈಯ್ಗುಳಗಳು :**

1. ಕಾರು ಹುಣ್ಣಿಮ್ಯಾಗ ಎತ್ತು ಕೊಂಬಾಕ ಹೋಗಬಾರದು, ಗೌರಿ ಹುಣ್ಣಿಮ್ಯಾಗ ಹೆಣ್ಣು ನೋಡಾಕ ಹೋಗಬಾರದು.
2. ಆಕಳ ಹೊಟ್ಟೇಲಿ ಅಚ್ಚೇರು (ಅರ್ಧಸೇರು) ಬಂಗಾರ.
3. ಉರಿದಾಡೋ ಹೋರಿಗೆ ಮೂಗುದಾಣ ಹಚ್ಚಬೇಕು.
5. ತುಡುಗು ಮೇಯೋದು ಕಣ್ಯಾಗ ಯಾಕ ನಿಂತೀತು.
6. ಓಡಿ ಓಡಿ ಹೋಗುವ ದನಕ್ಕೆ ಗುದಿಗ್ಗಾಲು ಕಟ್ಟಬೇಕು.
7. ಮೈ ದೂಬಿದರೆ ಬಾಲ ಎತ್ತುತ್ತದೆ, ಇಲ್ಲಾಂದ್ರ ಝಾಡಿಸಿ ಒದೀತದ.
8. ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ.
9. ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆದಂತೆ.
10. ನೆಚ್ಚಿದ ಎಮ್ಮೆ ಕೋಣಗರ ಈದಂತೆ.
11. ಎತ್ತು ಈಯ್ತು ಅಂದ್ರ ಕೊಟಿಗೇಲಿ ಕಟ್ಟು ಅಂದ್ರಂತೆ.

**ಬೈಯ್ಗುಳಗಳು :**

ಕೋಣದಂಥವನೆ, ದನ ಕಾಯೋಕೋಗು, ಗೊಡ್ಡೆಮ್ಮೆಯಂತೊಳು, ಗೊಡ್ಡ, ಬಾಲಿಲ್ಲದ ಬಸವಣ್ಣ, ಕವಲೆತ್ತಿನಾಂಗ ತಲೆ ಹಾಕೋನ.